(ಶ್ರೀ ಎಚ್. ರಾಚಯ್ಯ)

ಜನರ ಹಕ್ಕುಬಾಧ್ಯತೆಗಳನ್ನು ರಕ್ಷಣೆ ಮಾಡಬೇಕೆಂಬ ಜವಾಬ್ದಾರಿಯನ್ನರಿತು ಸತ್ಯವಾದ ವಿಚಾರವನ್ನು ಸಭೆಯ ಮುಂದಿಡುತ್ತಿದ್ದೇನೆ. ಹಳೆಯ ಮೈಸೂರು ರಾಜ್ಯದಲ್ಲಿ ಬ್ರಾಹ್ಮಣರನ್ನು ಬಿಟ್ಟು ಉಳಿದೆಲ್ಲ ಕೋಮುಗಳವರೂ backward ಅಥವ ಹಿಂದುಳಿದವರೆಂದು ಹೇಳುತ್ತಿದ್ದರು. ಹೊಸ ಮೈಸೂರಿನಲ್ಲಿ ಒಕ್ಕಲಿಗ ಜನಾಂಗದವರೂ, ಲಿಂಗಾಯಿತರೂ ಇನ್ನೂ ಕೆಲವು ಜನಾಂಗದವರೂ ಮುಂದುವರಿದ ಜನಾಂಗವೆಂದು ಕೇಳಿದ್ದೇನೆ. ಹೀಗೆ ಸ್ಪೃಶ್ಯರನ್ನೂ ಹಿಂದುಳಿದ ಪಂಗಡಕ್ಕೆ ಸೇರಿಸಿದ್ದಾರೆ, ಬೊಂಬಾಯಿ ಮುಂತಾದ ಕೆಲವು ರಾಜ್ಯಗಳಲ್ಲಿಯೂ ಕೆಲವರನ್ನು backward classesಗೆ ಸೇರಿಸಿದ್ದಾರೆ. ಈ ದೃಷ್ಟಿಯಿಂದ ಈ ರೀತಿಯ ತರಾವು ತಂದಿದ್ದೇನೆ. ಷೆಡ್ಯೂಲ್ಡ್ ಕ್ಯಾಸ್ಟ್ಸ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್‌ಗೆ ಸೇರಿದವರನ್ನು ಹಿಂದುಳಿದ ಪಂಗಡಗಳಿಗೆ ಸೇರಿಸಲೂ ಬೇಕಾಗಿಲ್ಲ, ತೆಗೆಯಲೂ ಬೇಕಾಗಿಲ್ಲ, ಏಕೆಂದರೆ ಈ ಸಭೆಗೆ ಈ ಅಧಿಕಾರವಿಲ್ಲ. ಭಾರತ ಪಾರ್ಲಿಮೆಂಟ್ ಅಥವ ರಾಷ್ಟ್ರಾಧ್ಯಕ್ಷರಿಗೆ ಮಾತ್ರ ಈ ಅಧಿಕಾರವಿರುವುದು. 1956ರಲ್ಲಿ ಕೇಂದ್ರ ಸರ್ಕಾರದವರು ಯಾವ ಯಾವ ಜನಾಂಗಗಳನ್ನು ಹಿಂದುಳಿದ ಜನಾಂಗಗಳ ಪಟ್ಟಿಯಲ್ಲಿ ಸೇರಿಸಬೇಕೆಂಬುದನ್ನು ನಿರ್ಧರಮಾಡಿದ್ದಾರೆ. ಅದು ಈಗ ನಮ್ಮ ಸರ್ಕಾರದ ಕೈಸೇರಿದೆ ಎಂದು ನಂಬಿದ್ದೇನೆ. ಇದನ್ನು ಏಕೆ ಹೇಳುತ್ತೇನೆ ಎಂದರೆ ಯಾವುದೇ ಜನಾಂಗ ಯಾವ ಲಿಸ್ಟ್‌ನಲ್ಲೇ ಸೇರಲಿ ನನ್ನ ಅಭ್ಯಂತರವಿಲ್ಲ. ನಮಾರು 2 ಕೋಟಿ ಜನರಲ್ಲಿ ದೀನದಲಿತರು ಎಲ್ಲ ಜನಾಂಗದವರಲ್ಲೂ ಇದ್ದಾರೆ. ಯಾವುದೇ ಜನಾಂಗವಾಗಲಿ ಅದರ ರಕ್ಷಣೆಯನ್ನು ಮಾಡುವಾಗ ಅದಕ್ಕೆ ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಅಲ್ಲದೇ ಇದ್ದರೂ ಕೂಡ ವಿದ್ಯಾಭ್ಯಾಸದ ಸೌಕರ್ಯವನ್ನು ಕೊಡಬೇಕು. 1954ರಲ್ಲಿ ಕೇಂದ್ರ ಸರ್ಕಾರದವರು ಇಂಡಿಯಾ ಸರ್ಕಾರದ ಪ್ರೆಸಿಡೆಂಟರ ಅಪ್ಪಣೆ ಮೇರೆಗೆ ನೇಮಕಮಾಡಿದ ಬ್ಯಾಕ್‌ವರ್ಡ್ ಕ್ಲಾಸು ಕಮೀಷನರವರು 1955ನೆಯ ಇಸವಿಯಲ್ಲಿ ಒಂದು ವರದಿಯನ್ನು ಒಪ್ಪಿಸಿದ್ದಾರೆ. ಅದನ್ನು ಪಾರ್ಲಿಮೆಂಟಿನಲ್ಲಿ ಚರ್ಚೆಮಾಡಿದ್ದರೂ ಅದರಲ್ಲಿ ರಕ್ಷಣೆಗಳು ಇವೆ. ಆ ರಿಪೋರ್ಟ್ ಪ್ರಕಾರ ಹಳೆಯ ಮೈಸೂರು ಪ್ರದೇಶದ ಹಿಂದುಳಿದ ಜನಾಂಗ ಎಂದರೆ ಕುರುಬರು, ನಾಯಕರ ಜನಾಂಗ, ಪರಿವಾರ ಜನಾಂಗ, ಥೋಟಿ ಜನಾಂಗ, ಉಪ್ಪಾರ ಜನಾಂಗ ಈ ರೀತಿ ಕೆಲವು ಜನಾಂಗದವರನ್ನು ನಮೂದಿಸಿದ್ದಾರೆ. ಅವರುಗಳಿಗೆ ಯಾವ ವಿಧವಾದ ಸೌಲಭ್ಯ ಕೊಡಬೇಕು, ರಕ್ಷಣೆ ಕೊಡಬೇಕೆಂಬ ವಿಷಯದಲ್ಲಿ ಕ್ರಮ ಕೈಕೊಳ್ಳುತ್ತಾ ಇದ್ದಾರೆ. ನಮ್ಮ ದೇಶದಲ್ಲಿ ಜಾತಿಯ ಆಧಾರದಮೇರೆ ಯಾವ ಒಂದು ಕೆಲಸವನ್ನೂ ಒಂದು ಯೋಚನೆಯನ್ನೂ ಮಾಡತಕ್ಕದ್ದಕ್ಕೆ ರಾಜ್ಯಾಂಗದಲ್ಲಿ ಅವಕಾಶವಿಲ್ಲ. ಆದರೂ ಕೂಡ ಕಾಂಗ್ರೆಸ್ ಅಧಿವೇಶನಗಳಲ್ಲಿ ಮೊದಲಿನಿಂದಲೂ ಹಾಕಿಕೊಂಡು ಬಂದಿರತಕ್ಕ ಕಾರ್ಯಕ್ರಮದ ಪಟ್ಟಿಯಲ್ಲಿರತಕ್ಕ ಕೆಲವು ಕೊಟೇಷನ್‌ಗಳನ್ನು ತಮ್ಮ ಗಮನಕ್ಕೆ ತರಲು ಈ ಮಾನ್ಯ ಸಭೆಯ ಮುಂದೆ ಅವನ್ನು ಓದಲು ಅಪೇಕ್ಷಿಸುತ್ತೇನೆ.

ಮೊದಲನೆ ಆಲ್ ಇಂಡಿಯಾ ಕಾಂಗ್ರೆಸ್ ಸೆಷನ್ ಬೊಂಬಾಯಿನಲ್ಲಿ 1885ರಲ್ಲಿ ಆದಾಗ ಅದರ ಮೊದಲನೆ ಪ್ರೆಸಿಡೆಂಟರಾದ ಆನರಬಲ್ ಡಬ್ಲ್ಯೂ.ಸಿ. ಬ್ಯಾನರ್ಜಿ ಅವರು ಒಂದು ವಾಕ್ಯವನ್ನು ಹೇಳಿದ್ದಾರೆ.

Gems from Congress Presidential Address.

1885—SRI W. C. BANERJI:

"The more progress the people make in educational and material prosperity, the greater we feel their insight into political matters and keener their desire for political advancement."

ಎಂದು ಹೇಳಿದ್ದಾರೆ. 1894ರಲ್ಲಿ Mr. ALFRED WEB ಅನ್ನುವವರು Madras Congress ಸೆಷನ್ ನಲ್ಲಿ ಈ ರೀತಿ ಹೇಳಿದ್ದಾರೆ:

"Education fits us for life and inspires us to a better use and enjoyment of life."

ಮತ್ತು 1909ರಲ್ಲಿ Lahore Congress ಸೆಷನ್ ಆದಾಗ ಪಂಡಿತ ಮದನಮೋಹನ ಮಾಲವೀಯ ಅವರು:

"Compulsory education is the one foundation upon which progress of the people could be achieved" ಎಂದು ಹೇಳಿದ್ದಾರೆ.

ಮತ್ತು ಶ್ರೀಯುತ ಬಿ. ಎಚ್. ಬನು ಅವರು:

"Education is the bedrock on which we must lay the foundation of our nation."

ಎಂದು ಹೇಳಿದ್ದಾರೆ. ಹೀಗೆಯೇ 1924ರಲ್ಲಿ ಮಹಾತ್ಮಾ ಗಾಂಧಿಯವರು:

"The religion and that religion of that nation which pins its faith on injustice" ..... ಎಂದು ಹೇಳಿದ್ದಾರೆ.

ಕೊನೆಯದಾಗಿ 1929 ರಲ್ಲಿ ಪಂಡಿತ ಜವಾಹರ ಲಾಲ್ ನೆಹ್ರು ಅವರು ಈ ರೀತಿ ಹೇಳಿದ್ದಾರೆ:

"So long as there is one aim and all education and progress has to develop collective instinct in man, so long as there is domination of one country by another and exploitation of one class by another, there will be always an attempt to subvert the existing order."

ಮತ್ತು ವಲ್ಲಭ್‌ಭಾಯ್ ಪಟೇಲ್ ಅವರು 1930 ರಲ್ಲಿ ಹೇಳಿರುವುದು ಈ ರೀತಿ ಇದೆ:

"My interest lies in helping the downtrodden to rise from their state and be on a level with the tallest in the land"

1937ರಲ್ಲಿ ಪಂಡಿತ ಜವಹರ್‌ಲಾಲ್ ಅವರು

"It means relief of masses from their unutterable misery . . . ."

ಎಂದು ಹೇಳಿದ್ದಾರೆ.

ಅದನ್ನೆಲ್ಲಾ ಮನಸ್ಸಿನಲ್ಲಿಟ್ಟುಕೊಂಡು ದೇಶದಲ್ಲರ ತಕ್ಕ ಎಲ್ಲ ಜನರ ಒಂದು ಇತಿಹಾನವನ್ನು ಗಮನಿಸಿ ಅದು ಒಳ್ಳೆಯದೋ, ಕೆಟ್ಟದ್ದೋ. ಬ್ರಿಟಿಷರು ನಮ್ಮ ದೇಶಕ್ಕೆ ಬರುವುದಕ್ಕೆ ಮುಂಚೆಯೇ ಜಾತಿ, ಮತ ಇತ್ತು. ಎಂದರೆ ಒಬ್ಬರ ಮೇಲೆ ಇನ್ನೊಬ್ಬರು ದಬ್ಬಾಳಿಕೆ ನಡೆಸುವ, ದುರುದ್ದೇಶದಿಂದಲೋ ಅಥವಾ ಅಡಿಯಾಳಾಗಿ ಇಟ್ಟುಕೊಳ್ಳಬೇಕೆಂಬ ಉದ್ದೇಶದಿಂದಲೋ ಜಾತಿಮತ ಹುಟ್ಟಿದವು. ಈ ಜಾತಿಮತಗಳ ಮಧ್ಯದಲ್ಲಿ ಅಸ್ಪೃಶ್ಯತೆ ಎನ್ನುವುದು ಬಂತು. ಇದನ್ನು ವರ್ಣನೆ ಮಾಡುವುದಾದರೆ ಅಮೆರಿಕಾದಲ್ಲಿ whites and blacks ಎಂದು ಇದ್ದಾರೆ. ನಮ್ಮ ದೇಶದಲ್ಲಿ ಹರಿಜನರ ಬಣ್ಣ ತೆಗೆದುಕೊಂಡರೆ ಅವರಲ್ಲಿ ಬೇರೆಯವರಿಗಿಂತಲೂ ಉತ್ತಮವಾಗಿರತಕ್ಕವರು ಇದ್ದಾರೆ. ಬಣ್ಣದ ಪ್ರಶ್ನೆ ಇಲ್ಲಿ ಬರುವುದಿಲ್ಲ. ನಾನು ಇಂಗ್ಲೆಂಡ್ ದೇಶದಲ್ಲಿ ಪ್ರವಾನ ಮಾಡಿದಾಗ ನನಗೆ ಇಂಪ್ರೆಸ್ ಆದದ್ದು ಏನು ಎಂದು ಕೇಳಿದರೆ :—There was everything, was available in those countries, for the country and nothing was available for one's greed. But here, everything was available for one's greed and nothing for the country.

ಇಲ್ಲಿ ಏನಾಗಿದೆ ಎಂದರೆ :—

Major portion of the humanity has been exploited fully for the happiness of a minor community.

ಅದು ಏನೇ ಇರಲಿ, ಇಲ್ಲಿನ ಪರಿಸ್ಥಿತಿಯನ್ನು ಸರಿಪಡಿಸುವ ಒಂದು ದೊಡ್ಡ ಉದ್ದೇಶದಿಂದ ರಾಜ್ಯಾಂಗವನ್ನು ಬರೆಯುವಾಗ ನಮ್ಮ ದೇಶದ ನಾಯಕರು ಮತ್ತು ಶ್ರೀ ಹನುಮಂತಯ್ಯನವರೂ ಕೂಡ ಇದ್ದ ಆ ರಾಜ್ಯಾಂಗ ನಭೆಯಲ್ಲಿ ಪಂಡಿತ ಜವಹರಲಾಲ್ ನೆಹರೂ ಅವರು ಈ ರೀತಿ ಹೇಳಿದ್ದಾರೆ :

"WE, THE PEOPLE OF INDIA, having solemnly resolved to constitute India into a SOVEREIGN DEMOCRATIC REPUBLIC and to secure to all its citizens :

JUSTICE, social, economic and political ;

LIBERTY of thought, expression, belief, faith and worship ;

EQUALITY of status and of opportunity ;

and to promote among them all

FRATERNITY assuring the dignity of the individual and the unity of the Nation ; "

ಈ ರೀತಿ ಒಂದು ಬಹಳ ಪವಿತ್ರವಾದ ರಾಜ್ಯಾಂಗವನ್ನು ರಚನೆ ಮಾಡಿದರು. ಆಗ ಈ ಷೆಡ್ಯೂಲ್ಡ್ ಕ್ಯಾಸ್ಟ್, ಷೆಡ್ಯೂಲ್ಡ್ ಟ್ರೈಬ್ಸ್ ಮತ್ತು ಬ್ಯಾಕ್‌ವರ್ಡ್ ಕ್ಲಾಸ್ ಕಮ್ಯುನಿಟಿಗಳ ವಿಚಾರದಲ್ಲಿ ಅವರು ಬಹಳ ರಿಯಾಯಿತಿಯನ್ನು ಕೊಟ್ಟಿದ್ದಾರೆ. ಅದೇನೆಂದರೆ :—

15 (1) The State shall not discriminate against any citizen on grounds only of religion, race, caste, sex, place of birth or any of them . . . ."

ಅದಕ್ಕೆ ಎಕ್ಸೆಪ್ಷನಲ್ ಆಗಿ ಒಂದು ಪ್ರೊವಿಜ್ ಕೊಟ್ಟಿದ್ದಾರೆ. ಷೆಡ್ಯೂಲ್ಡ್ ಕ್ಯಾಸ್ಟ್ಸ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್ ವಿಚಾರದಲ್ಲಿthe State can discriminate ಎಂದು ಹೇಳಿ ಫಂಡಮೆಂಟಲ್ ರೈಟನ್ನು ಕೊಟ್ಟಿದ್ದಾರೆ.

16 (4) Nothing in this article shall prevent the State from making any provision for the reservation of appointments or posts in favour of any backward class of citizens which, in the opinion of the State, is not adequately represented in the services under the State."

ಹಿಂದುಳಿದವರ ಹಿತದೃಷ್ಟಿಯಿಂದ ಅವರಿಗೆ ಈ ರಕ್ಷಣೆಯನ್ನು ಆರ್ಟಿಕಲ್ 15 (4) ರಲ್ಲಿ ಕೊಟ್ಟಿದ್ದಾರೆ.

Nothing in this article or in clause (2) of article 29 shall prevent the State from making any special provision for the advancement of any socially and educationally backward classes of citizen, or for the Scheduled Castes or and the Scheduled tribes.

46. The State shall promote with special care the educational and economic interests of the weaker sections of the people, and, in particular, of the Scheduled Castes and the Scheduled tribes, and shall protect them from social injustice and all forms of exploitation."

3 P.M.

ಕೊನೆಯದಾಗಿ ಇನ್ನೊಂದು ಆರ್ಟಿಕಲ್‌ನಲ್ಲಿ ಏನು ಇದೆ ಎಂಬುದನ್ನು ಗಮನಕ್ಕೆ ತರುತ್ತೇನೆ. 23ನೇ ಆರ್ಟಿಕಲ್ ಈ ರೀತಿ ಇದೆ.—

"Traffic in human beings and begar and other similar forms of forced labour are prohibited and any contravention of this provision shall be an offence punishable in accordance with law."

Here we have the *Jeetha* system of labour, which is forced labour. Forced labour is prohibited.

ಈ ವರ್ಗಗಳ ಜನರಿಗೆ ರಾಜ್ಯಾಂಗದಲ್ಲಿ ಏನೇನು ರಕ್ಷಣೆಗಳನ್ನು ಕೊಡಲಾಗಿದೆಯೋ, ಅವನ್ನು ಶಾಸನದ ಮೂಲಕ ಜಾರಿಗೆ ತರಬೇಕು. ಈಗ ಮೈಸೂರಿನಲ್ಲಿ ಜೀತ ಪದ್ಧತಿಯಿದೆ. ಜೊತೆಗೆ ಮುಫತ್ ಸೇವೆ ಪದ್ಧತಿಯಿದೆ. ಇದು ರಾಜ್ಯಾಂಗಕ್ಕೆ ವಿರೋಧವಾದುದು. ಆದರೆ ಈ ನುಲಗೆ ಪದ್ಧತಿಯನ್ನು ನಿಷೇಧಿಸಲು ಸರಕಾರ ಶಾಸನ ರಚಿಸದಿರುವುದು ಶೋಚನೀಯ. ಈ ಠರಾವನ್ನು ಏತಕ್ಕೋಸ್ಕರವಾಗಿ ತಂದಿದ್ದೇನೆ ಎಂದರೆ 17ನೆಯ ಆರ್ಟಿಕಲ್ಲಿನಲ್ಲಿ ನೂಚನೆ ಮಾಡಿರು

(ಶ್ರೀ ಎಚ್. ರಾಚಯ್ಯ)

ವಂತೆ ಅಸ್ಪೃಶ್ಯತಾ ನಿವಾರಣೆ ಮಾಡಬೇಕೆಂಬ ಉದ್ದೇಶವನ್ನು ಆಚರಣೆಗೆ ತರಬೇಕು ಎಂದು ರಾಜ್ಯಾಂಗದಲ್ಲಿ ಇದೆ. 1956ನೆಯ ಇಸವಿಯಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್ ಮೆಂಬರುಗಳಾದ ನಾವು ಒಂದು ಠರಾವನ್ನು ತಂದು ಒಂದು detailed ಕಾನೂನು ಮಾಡಬೇಕೆಂದು ತಿಳಿಸಿದ್ದೇವೆ. ಅದು ರಾಜ್ಯಾಂಗಕ್ಕೆ ಅನುಗುಣವಾಗಿ ಇದೆ. ಯಾರಿಗೆ ತೊಂದರೆ ಉಂಟಾಗುತ್ತಿದೆಯೋ; ಯಾರಿಗೆ ಶಕ್ತಿ ಇಲ್ಲವೋ, ಯಾರಿಗೆ ಒಡತನವಿದೆಯೋ. ಯಾರು ಅವಿದ್ಯಾವಂತರು ಆಗಿರುವರೋ, ಅಂಥವರಿಗೆ ರಾಜ್ಯಾಂಗದ ಆರ್ಟಿಕಲ್‌ಗೆ ಅನುಗುಣವಾಗಿ, ಅದರಲ್ಲಿ ಅಡಕವಾಗಿರುವ ಹಾಗೆ, ರಕ್ಷಣೆ ಕೊಡುವುದಕ್ಕಾಗಿ ಸರಕಾರ ಒಂದು ಕಾನೂನು ಮೂಲಕ ರಕ್ಷಣೆ ಕೊಡ ತಕ್ಕಂಥಾದ್ದೆಂದು ಇದೆ. ಇವತ್ತಿನ ದಿವಸ forced labour ಇದೆ ಹಾಗು free labour ಇದೆ. ಇದು ನಿಜವಾಗಿಯೂ ಕಾನ್‌ಸ್ಟಿಟ್ಯೂಷನ್ನಿಗೆ ವಿರುದ್ಧವಾದುದು. ಪ್ರಜಾಪ್ರಭುತ್ವದಲ್ಲಿ ಪ್ರತಿಯೊಬ್ಬರಿಗೂ ವೈಯಕ್ತಿಕ ವಿಕಾಸಕ್ಕೆ ಅವಕಾಶವಿದೆ. ತನ್ನ ಹಕ್ಕು ಬಾಧ್ಯತೆಗಳನ್ನು ಮೂಲಭೂತಹಕ್ಕುಗಳನ್ನೂ ಚಲಾಯಿಸತಕ್ಕಂಥ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳತಕ್ಕಂಥ ಅವಕಾಶವಿದೆ. ಹಾಗಿರುವಾಗ ಸಾಮಾಜಿಕವಾದ, ಸಂಪ್ರದಾಯಬದ್ಧ ಸುಲಗೆಯ ಮಾರ್ಗವನ್ನು ಕಾನೂನು ಪ್ರತಿಬಂಧಕಮಾಡಿದರೂ ಕೂಡ, ಸರಕಾರ ಕಾರ್ಯಕ್ರಮ ತೆಗೆದುಕೊಳ್ಳದೇ ಇರತಕ್ಕಂಥಾದ್ದು ಬಹಳ ಶೋಚನೀಯವಾದುದು.

The House adjourned for Lunch at Five Minutes past Three of the Clock and re-assembled at Forty Minutes past Three of the Clock.

[MR. DEPUTY SPEAKER in the Chair]

ಶ್ರೀ ಎಚ್. ರಾಚಯ್ಯ.—ಸ್ವಾಮಿ, ಈಗಾಗಲೆ ನಾನು ಶ್ರೀ ಅಂಬಲ್ ಹೇಳಿದ್ದೇನೆ. ಈಗ ನಾನು ಠರಾವಿನ ಮುಖ್ಯವಾದಂಥ ವಿಷಯಕ್ಕೆ ಹೋಗುತ್ತೇನೆ. ನಮ್ಮ ದೇಶವನ್ನು ಪರಕೀಯರು ಆಳುತ್ತಿದ್ದ ಕಾಲದಲ್ಲಿ ನಮ್ಮ ಜನರಿಗೆ ಅಧಿಕಾರವಿಲ್ಲದಿರುವಾಗ ಬಡವರಿಗೆ ದೇವರ ಹೆಸರಿನಲ್ಲಿ ಮೋಸವಾಯಿತು. ಆಗ ಶೇಕಡ 30 ಮಂದಿ ನಮ್ಮ ದೇಶದವರು ಅಧಿಕಾರದಲ್ಲಿದ್ದರು, ಸ್ವರಾಜ್ಯ ಬಂದಮೇಲೆ ಶೇಕಡ ನೂರು ಮಂದಿ ನಮ್ಮವರೇ ಇದ್ದಾರೆ. ಈಗ ಬೇರೊಂದು ಹೆಸರಿನಲ್ಲಿ ಅನ್ಯಾಯವಾಗುತ್ತಿದೆ. ಯಾರು ವಿದ್ಯಾವಂತರೋ, ಯಾರು ಪ್ರಭಾವಶಾಲಿಗಳೋ ಅವರೇ ಮುಂದೆ ಬರುತ್ತಿದ್ದಾರೆಯೇ ವಿನಾ ಹಿಂದುಳಿದವರಿಗೆ ಆರ್ಥಿಕವಾಗಿ, ಸಾಮಾಜಿಕವಾಗಿ ಮುಂದುವರಿಯಲು ಅವಕಾಶ ಸಿಕ್ಕುತ್ತಿಲ್ಲ. ಬಾಯಲ್ಲಿ ಮಾತ್ರ ಅಸೆಂಬ್ಲಿಗಳಲ್ಲಿ, ಪಾರ್ಲಮೆಂಟಿನಲ್ಲಿ ಮತ್ತು ಹೊರಗಡೆ ಪ್ಲಾಟ್‌ಫಾರಂಗಳಲ್ಲಿ ರಾಜ್ಯಾಂಗದ ಪ್ರಕಾರ ಎಲ್ಲರಿಗೂ ಸೌಲಭ್ಯವಿದೆ, ಸಮಾನ ಅವಕಾಶವಿದೆ ಎಂದು ಹೇಳುತ್ತಿದ್ದಾರೆ. ಮೊದಲನೆಯ ಪಂಚವಾರ್ಷಿಕ ಯೋಜನೆ ಮುಗಿಯಿತು, ಎರಡನೆಯ ಪಂಚವಾರ್ಷಿಕ ಯೋಜನೆ ನಡೆಯುತ್ತಿದೆ, ಮೂರೆ ಮೂರನೆಯ ಪಂಚವಾರ್ಷಿಕ ನಡೆಯುತ್ತಿದೆ, ಮುಂದೆ ಮೂರನೆಯ ಪಂಚವಾರ್ಷಿಕ ಯೋಜನೆ ಬರುತ್ತದೆ. ಬಹಳ ಹಿಂದುಳಿದ ಜನಾಂಗದವರಿಗೆ ಹರಿಜನರಿಗೆ ಮತ್ತು ಇತರ ಬಲಹೀನರಿಗೆ ಒಂದು ಭಾವ ಚಿತ್ರ ತೊರಿಸುವ ಹಾಗೆ ತೋರಿಸುತ್ತಿದ್ದಾರೆ ಎಂದು ಹೇಳಿದರೆ ಅದು ಬೇಜವಾಬ್ದಾರಿ ಮಾತಲ್ಲ. ನಮಗೆ ಸ್ವರಾಜ್ಯ ಬಂದಮೇಲೆ 1947 ನೆಯ ಇಸವಿಯಿಂದ ಇಲ್ಲಿಯವರೆಗೆ ಎಷ್ಟು ಐ.ಸಿ.ಎಸ್. ಮತ್ತು ಐ.ಪಿ.ಎಸ್. ಅಧಿಕಾರಿಗಳನ್ನು ನೇಮಕ ಮಾಡಿದ್ದೀರೆಂಬುದನ್ನು ಹೇಳಿ, ಅಷ್ಟು ಸ್ಥಾನಗಳಲ್ಲಿ ನೂರಕ್ಕೆ 25 ಕನಿಷ್ಠಪಕ್ಷ 20 ಭಾಗವಿರುವ ಷೆಡ್ಯೂಲ್ಡ್ ಕ್ಯಾಸ್ಟಿನವರಿಗೆ ಮತ್ತು 50 ಭಾಗವಿರುವ ಎಕ್ಸ್‌ಟ್ರೀಮ್ ಬ್ಯಾಕ್‌ವರ್ಡ್ ಕ್ಲಾಸಸ್‌ಗೆ ಎಷ್ಟು ಕೊಟ್ಟಿದ್ದೀರೆಂಬುದನ್ನು ಹೇಳಿ. ವಿದ್ಯಾರ್ಥಿವೇತನವನ್ನು ನಮ್ಮ ದೇಶದಲ್ಲಿ ಮತ್ತು ಹೊರದೇಶಗಳಿಗೆ ಹೋಗಿರುವ ವಿದ್ಯಾರ್ಥಿಗಳಿಗೆ 1947ನೆಯ ಇಸವಿಯಿಂದ ಎಷ್ಟು ಕೊಟ್ಟಿದ್ದೀರಿ? 1947ರ ಹಿಂದೆ ಬೇಜವಾಬ್ದಾರಿ ಸರ್ಕಾರವಿತ್ತು. ಆಗಿನ ಅಂಕಿಅಂಶ ಬೇಡ. 1947 ರಿಂದ ಇಲ್ಲಿಯವರೆಗೆ ಎಷ್ಟು ಎಕರೆ ಜಮೀನು ವಿಲೇ ಮಾಡಿದ್ದೀರಿ? 1952 ರಿಂದ ಮಾಡಿರುವ ಆರ್ಡರು ನೋಡಿದರೆ ಶೇಕಡ 20 ಭಾಗದ ಜಮೀನನ್ನು ಹರಿಜನರಿಗೆ ಕೊಡಬೇಕೆಂದು ಮಾಡಿದೆ. ಆದರೆ ಅಲ್ಲಿಂದ ಇಲ್ಲಿಯವರೆಗೆ ಶೇಕಡ ಐದರಷ್ಟು ಜಮೀನು ಕೂಡ ನಿಮ್ಮ ವರ್ಗದವರಿಗೆ ಕೊಟ್ಟಿಲ್ಲವೆಂದು ಅಂಕಿ ಅಂಶಗಳ ಮೂಲಕ ರುಜುವಾತು ಮಾಡುತ್ತೇನೆ. ಮೊದಲು ನಾವು ಬ್ರಿಟಿಷರನ್ನು ಓಡಿಸಿದ್ದಾಯಿತು, ಆಮೇಲೆ ರಾಜರುಗಳನ್ನು ಶಾಂತಯುತವಾಗಿ ಬಹಳ ಮರ್ಯಾದೆಯಿಂದ ಕಳುಹಿಸಿದ್ದಾಯಿತು. ಈಗ ಸಮಾಜದಲ್ಲಿ ಜಾತಿ ಬೇಧ ಹೆಚ್ಚಾಗಿದೆ. ನಮ್ಮ ಸಂಸ್ಥಾನದಲ್ಲಿ ಜವಾಬ್ದಾರಿ ಹೊತ್ತಿರುವವರು ಬಹಳ ಹಿಂದುಳಿದ ಜನಾಂಗಗಳಿಗೆ, ಅವರು ಯಾರೇ ಆಗಲಿ, ಬ್ರಾಹ್ಮಣರಾಗಲಿ, ಲಿಂಗಾಯಿತರಾಗಲಿ, ಬಡವರಾದರೆ ಸರ್ವರಿಗೂ ಎಲ್ಲ ಸೌಲಭ್ಯಗಳನ್ನೂ ಕೊಡಬೇಕು. ಮುಂದುವರಿದವರು ಯಾವ ಜನಾಂಗದಲ್ಲಿದ್ದರೂ ಅವರಿಗೆ ಕೊಡಬೇಡಿ. ಈಗ ಶ್ರೀ ಚೆನ್ನಿಗರಾಮಯ್ಯನವರು ಹರಿಜನರಲ್ಲಿ ಮುಂದುವರಿದವರು ಅವರು ಹತ್ತು ವರ್ಷಗಳಿಂದ ಮಂತ್ರಿಗಳಾಗಿಯೂ ಬೇರೆ ಉನ್ನತ ಸ್ಥಾನಗಳನ್ನು ಅಲಂಕರಿಸಿಯೂ ಉತ್ತಮ ಸ್ಥಿತಿಗೆ ಬಂದಿದ್ದಾರೆ, ಆರ್ಥಿಕವಾಗಿ ಮುಂದುವರಿದಿರುವ ಪಂಗಡಗಳಿಗೆ ಹೆಚ್ಚಿನ ಸೌಲಭ್ಯ ಕೊಡಬೇಕಾಗಿಲ್ಲ, ಅಂಕಿ ಅಂಶ ಸಂಗ್ರಹಿಸಿ ನಮ್ಮ ದೇಶದಲ್ಲಿ ಯಾವ ಜನಾಂಗಕ್ಕೆ ರಾಜ್ಯಾಂಗದ ಪ್ರಕಾರ ರಕ್ಷಣೆಯಿದೆ ಅವರಿಗೆ ಮೊದಲು ಸಹಾಯ ಮಾಡುವುದು ಅವಶ್ಯಕ. ಮನೆಯಲ್ಲಿ ಒಂದು ಮಗುವಿಗೆ ಖಾಯಿಲೆಯಾದರೆ ಇತರ ಮಕ್ಕಳಿಗಿಂತ ಅದಕ್ಕೆ ಹೆಚ್ಚಾಗಿ ಗಮನ ಕೊಡುವಂತೆ ಯಾರು ಸಮಾಜದಲ್ಲಿ ಬಹಳವಾಗಿ ಹಿಂದುಳಿದಿದ್ದಾರೆಯೋ ಅವರಿಗೆ ಮೊದಲು ಸಹಾಯ ನೀಡಬೇಕು. "For nothing at all criminal atrocities are being committed against low class individuals for no fault of theirs" ಎಂದು ಮಹಾತ್ಮ ಗಾಂಧಿಯವರು ಹೇಳಿದ್ದಾರೆ. ಸ್ವರಾಜ್ಯ ಬಂದರೂ ಅಸ್ಪೃಶ್ಯತೆ ಇರುವವರೆಗೆ ಅದನ್ನು ನಿರ್ವಾಹ ಮಾಡುವುದಕ್ಕಾಗುವುದಿಲ್ಲವೆಂದು ಗಾಂಧೀಜಿ ಹೇಳಿದ್ದರು. ಆದರೆ 1947ನೆ ಇಸವಿಯಲ್ಲಿ ಕಾಂಗ್ರೆಸ್ ಸರ್ಕಾರ ಆಡಳಿತಕ್ಕೆ ಬಂದ ನಂತರ ಮಾಡಿರತಕ್ಕದ್ದನ್ನು ವೀಕ್ಷಿಸಿದರೆ ಸಾಮಾನ್ಯವಾಗಿ ಯಾವ ಒಂದು ಗುಂಪಿಗೆ ಅಥವ ಜನಾಂಗಕ್ಕೆ ರಕ್ಷಣೆಯನ್ನು ಕೊಟ್ಟಿದ್ದಾರೆಯೇ, ವಿದ್ಯಾಭ್ಯಾಸ, ಆರ್ಥಿಕ ಮತ್ತು ಸಾಮಾಜಿಕ ವಿಷಯಗಳಲ್ಲಿ ರಕ್ಷಣೆಗಳನ್ನು ಕೊಟ್ಟಿದ್ದಾರೆಯೇ ಎಂದರೆ ನೂರಕ್ಕೆ ಒಂದರಷ್ಟೋ ಎರಡರಷ್ಟೋ ಅನುಕೂಲ ಮಾಡಿದ್ದಾರೆ. ನೂರಕ್ಕೆ 98 ಭಾಗ ಈ ಜನಾಂಗವನ್ನು

ನಿರ್ಧಯವಾಗಿ ಕಂಡಿದ್ದಾರೆ. ಆದುದರಿಂದ ಈ ಬಗ್ಗೆ ಕೂಡಲೇ ಶಾಸನ ಬದ್ಧವಾದ ಒಂದು ಕಾನೂನನ್ನು ಮಾಡಿ ಅದರ ಮೂಲಕ ಈ ಗುಂಪಿನ ಜನರಿಗೆ ವಿದ್ಯಾಭ್ಯಾಸ, ಆರ್ಥಿಕ, ಸಾಮಾಜಿಕ, ರಾಜ್ಯಾಡಳಿತ ಮತ್ತು ಅಧಿಕಾರವರ್ಗ ಇವೆಲ್ಲದರಲ್ಲಿಯೂ ಸೌಕರ್ಯಗಳನ್ನು ಕಲ್ಪಿಸಿಕೊಡಬೇಕು.

ವಿದ್ಯಾಭ್ಯಾಸದ ವಿಚಾರವನ್ನು ತೆಗೆದುಕೊಳ್ಳುವುದಾದರೆ, S.S.L.C. ಪರೀಕ್ಷೆ ಪಾಸ್ ಆದಂಥ ವಿದ್ಯಾರ್ಥಿ ವಿದ್ಯಾರ್ಥಿನಿಯರು, ಯಾವುದೇ ತರಗತಿಯಲ್ಲಿ ವಿದ್ಯಾಭ್ಯಾಸವನ್ನು ಮುಂದುವರಿಸಲಿ, ಅವರಿಗೆ ಕೇಂದ್ರ ಸರ್ಕಾರದವರು ರಾಜ್ಯಾಂಗದಲ್ಲಿರತಕ್ಕ ಜವಾಬ್ದಾರಿಯನ್ನು ಅರಿತು, ಮುಂದೆ ಪ್ರಜಾಪ್ರಭುತ್ವ ನಮ್ಮ ದೇಶದಲ್ಲಿ ಶಾಶ್ವತವಾಗಿ ಉಳಿಯಬೇಕು ಎಂದು ವಿದ್ಯಾರ್ಥಿವೇತನಗಳನ್ನು ಕೊಡುತ್ತಿದ್ದಾರೆ. ಹೊರ ಗಡೆ ದೇಶಕ್ಕೆ ವಿದ್ಯಾಭ್ಯಾಸಕ್ಕೆ ಕಳುಹಿಸಿತಕ್ಕ ವಿದ್ಯಾರ್ಥಿಗಳಿಗಾಗಲಿ, ನಮ್ಮ ದೇಶದಲ್ಲಿಯೇ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗಾಗಲಿ, ವಿದ್ಯಾರ್ಥಿವೇತನಗಳನ್ನು ಇವೊತ್ತಿನ ದಿವಸ ಕೊಡುತ್ತಿದ್ದಾರೆ, ಅದಕ್ಕೆ ಅವರು ಅಭಿನಂದನಾರ್ಹರು. ಕೇಂದ್ರ ಸರ್ಕಾರ ಈ ಪ್ರಕಾರ ಮಾಡುತ್ತಿರುವ ಕಾಲದಲ್ಲಿ ಸಂಸ್ಥಾನ ಸರ್ಕಾರವು ದೀನದಲಿತರ, ಹಿಂದುಳಿದ ವರ್ಗದವರ ವಿಚಾರದಲ್ಲಿ ನಿರ್ಲಕ್ಷ್ಯ ಮಾಡಿರುವುದು ಸರಿಯಲ್ಲ. ನಾನು ಇದಕ್ಕೆ ಯಾರನ್ನೂ ಆಕ್ಷೇಪಣೆ ಮಾಡಬೇಕು ಎಂದು ಹೇಳುತ್ತಿಲ್ಲ. ಮಂತ್ರಿಮಂಡಲದಲ್ಲಿ ನಮ್ಮ ಪ್ರತಿನಿಧಿ ಎಂದರೆ ಹರಿಜನರ ಪ್ರತಿನಿಧಿಯಾಗಿ ಈ ಒಂದು ಇಲಾಖೆಯನ್ನು ಯಾರು ವಹಿಸಿಕೊಂಡಿದ್ದಾರೆ ಅವರದೇ ಈ ಜವಾಬ್ದಾರಿ ಎಂದು ನಾನು ಒತ್ತಾಯ ಪೂರ್ವಕವಾಗಿ ಹೇಳುತ್ತೇನೆ. ಇವರು ಈ ವಿಷಯಗಳಿಗೆಲ್ಲ ಏತ ಕ್ಕೂನ್ಯರ ಗಮನ ಕೊಟ್ಟಿಲ್ಲ, ರಾಜ್ಯಾಂಗವನ್ನು ಅರ್ಥಮಾಡಿಕೊಳ್ಳುವುದಕ್ಕೆ ಆಗಲಿಲ್ಲವೇ ಅಥವಾ ಅರ್ಥ ಮಾಡಿಕೊಂಡರೂ ಕೂಡ ಅದನ್ನು ಜಾರಿಗೆ ಕೊಡತಕ್ಕ ಶಕ್ತಿ ಇರಲಿಲ್ಲವೇ ಅಥವಾ ಹರಿಜನ ವರ್ಗಕ್ಕೆ ಸೇರದೆ ಇರತಕ್ಕ 'ಬೇರೆ ವರ್ಗದ ಮಂತ್ರಿಗಳು ರಾಜ್ಯಾಂಗವನ್ನು ತಿರಸ್ಕಾರ ಮಾಡಬೇಕೆಂದಿದ್ದಾರೆಯೇ ಅಥವಾ ಏನಾದರೂ ದುರುದ್ದೇಶದಿಂದ ಅವರು ನಿರ್ಲಕ್ಷ್ಯ ಮಾಡಿದರೇ ಎನ್ನುವ ವಿಚಾರದಲ್ಲಿ ಈವರೆಗೂ ಪತ್ರಿಕೆಯ ಮೂಲಕವಾಗಲಿ, ಅಸೆಂಬ್ಲಿಯಲ್ಲಿ ಒಂದು ಹೇಳಿಕೆಯ ಮೂಲಕವಾಗಲಿ ನಮ್ಮ ಮುಂದೆ ವಿವರಗಳನ್ನು ಇಟ್ಟಿಲ್ಲ.

ನಮ್ಮ ಸಂಸ್ಥಾನದಲ್ಲಿ ಇವೊತ್ತಿನ ದಿವಸ ಹರಿಜನರಲ್ಲದೆ backward classes ಎಂದು ಇದೆ. ಇದರಲ್ಲಿ ನೂರಾರು ಜಾತಿಗಳಿವೆ. ಇದರಲ್ಲಿ ಬ್ರಾಹ್ಮಣರನ್ನು ಳಿದು ಇತರ ಎಲ್ಲ ಜಾತಿಗಳೂ ಸೇರುತ್ತವೆ. ಹಳೆಯ ಮೈಸೂರಿನಲ್ಲಿ ಮೊದಲು ಆರು ಜಾತಿಗಳು ಇದರಲ್ಲಿ ಸೇರಿದ್ದುವು. ಆಮೇಲೆ 14 ಆಯಿತು. ಈಗ ಹೊಸ ಮೈಸೂರು ಆದಮೇಲೆ ನೂರಾರು ಆಗಿರಬಹುದು; ನನಗೆ ಸರಿಯಾಗಿ ಗೊತ್ತಿಲ್ಲ. ಹಳೆಯ ಮೈಸೂರಿನ ಪ್ರಸ್ತಾಪವನ್ನು ಮಾಡುವುದಾದರೆ ಹರಿಜನರ ಅಭಿವೃದ್ಧಿಯಾಗುತ್ತಿದೆ ಎಂದು ಹೇಳುತ್ತಿದ್ದಾರೆ. ಹರಿಜನರಿಗೆ ಮನೆಗಳನ್ನು ಕಟ್ಟಲು ಸಹಾಯ ಮಾಡುತ್ತೇವೆಂದು ಲಕ್ಷಾಂತರ ರೂಪಾಯಿಗಳ ವ್ಯಯವಾಗುತ್ತಿದೆ. ಅದರಿಂದ ಏನೂ ಪ್ರಯೋಜನವಾಗಿಲ್ಲ. ಕನಗುಡಿಸುವ ಹರಿಜನರ ಮಕ್ಕಳು ಮಿಡಲ್ ಸ್ಕೂಲಿನಲ್ಲಿ ಓದುತ್ತಿದ್ದರೂ ಅವರಿಗೆ ಸ್ಕಾಲರ್‌ಷಿಪ್ ಕೊಡುತ್ತಿಲ್ಲ. ಹಿಂದೆ ಬೇಜವಾಬ್ದಾರಿ ಸರ್ಕಾರವೆಂದು ಯಾವ ಸರ್ಕಾರವನ್ನು ಕರೆಯುತ್ತಿದ್ದೆವೋ ಅವರು ಹರಿಜನರ ಮತ್ತು ಇತರ ಎಂಟು-ಹತ್ತು ಪಂಗಡಗಳ ವಿದ್ಯಾರ್ಥಿಗಳು ಮಿಡಲ್ ಮತ್ತು ಹೈಸ್ಕೂಲುಗಳಲ್ಲಿ ಎಲ್ಲಿಯೇ ಓದುತ್ತಿರಲಿ ಅವರಿಗೆಲ್ಲ ಸ್ಕಾಲರ್‌ಷಿಪ್‌ಗಳನ್ನೂ, ಪ್ರೈಮರಿ ಸ್ಕೂಲಿನಲ್ಲಿ ಓದುವವರಿಗೆ ಸ್ಲೇಟು, ಪುಸ್ತಕಗಳನ್ನು ಕೊಡುತ್ತಿದ್ದರು. ಈಗ ಜವಾಬ್ದಾರಿ ಸರ್ಕಾರವಿದೆ. ನಮಗೆ ಸ್ವರಾಜ್ಯ ಬಂದು ಹತ್ತು ವರ್ಷಗಳಾದುವು. ನಮಗೆ ಸ್ವರಾಜ್ಯ ಬಂದ ಲಕ್ಷಣವೇನೆಂದರೆ ಹಿಂದೆ ಬೇಜವಾಬ್ದಾರಿ ಸರ್ಕಾರದವರು ಕೊಡುತ್ತಿದ್ದ ಸೌಲಭ್ಯಗಳನ್ನು ನಿಲ್ಲಿಸಿದ್ದು ಎಂದು ಹೇಳಬಹುದು. ಹೈಸ್ಕೂಲಿನಲ್ಲಿ ಓದುತ್ತಿರುವ ಹರಿಜನ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ಎಂದು ಈ ಮಾನ್ಯ ಸಭೆಯಲ್ಲಿ ಒಂದು ಪ್ರಶ್ನೆಯನ್ನು ಕೇಳಿದಾಗ ಐದು ಸಾವಿರ ಚಿಲ್ಲರೆ ಮಕ್ಕಳು ಓದುತ್ತಿದ್ದಾರೆಂದರು. 1952ನೆ ಇಸವಿಯಿಂದ ಇಲ್ಲಿಯ ತನಕ ವಿದ್ಯಾಭ್ಯಾಸ ಮಾಡುವ ಮಕ್ಕಳ ಸಂಖ್ಯೆ ಹೆಚ್ಚುತ್ತ ಬಂದಿದೆ. ಆದರೆ 20 ವರ್ಷಗಳ ಹಿಂದೆ ಸ್ಕಾಲರ್‌ಷಿಪ್ ಗ್ಯಾರೆಂಟ್ ಎಷ್ಟು ಕೊಡುತ್ತಿದ್ದರೋ ಅಷ್ಟೇ ಹಣವನ್ನು ಈಗಲೂ ಕೊಡುತ್ತಿದ್ದಾರೆ. ನನ್ನ ಅಧ್ಯಕ್ಷತೆಯಲ್ಲಿ ನಡೆದ ಒಂದು ಸಭೆಯಲ್ಲಿ ಈ ಸಂಬಂಧದಲ್ಲಿ ಒಂದು ನಿರ್ಣಯವನ್ನು ಮಾಡಿ ವಿದ್ಯಾಭ್ಯಾಸದ ಇಲಾಖೆಗೆ ಬರೆದರೆ ಅವರು ಸರ್ಕಾರದಲ್ಲಿ ನಿಮ್ಮ ಹರಿಜನ ಮಂತ್ರಿಗಳಿದ್ದಾರೆ, ಅವರನ್ನು ಕೇಳಿ ಎನ್ನುತ್ತಾರೆ. ಹರಿಜನ ಮಂತ್ರಿಗಳು ಯಾವುದಕ್ಕೂ ಗಮನ ಕೊಡುವಂತೆ ಕಾಣುವುದಿಲ್ಲ. ಇವರು ಪ್ರತಿಯೊಂದು ಇಲಾಖೆಯಲ್ಲಿಯೂ ಹರಿಜನಾಭಿವೃದ್ಧಿಗಾಗಿ ಎಷ್ಟೆಷ್ಟು ಹಣವನ್ನು ಒದಗಿಸುತ್ತಿದ್ದಾರೆ, ಅದು ಎಷ್ಟರಮಟ್ಟಿಗೆ ಏನಿಯೋಗವಾಗುತ್ತಿದೆ ಎಂಬುದನ್ನು ನೋಡಬೇಕು. Industrial loan ಎಂದು ಬಡ್ಜೆಟ್ಟಿನಲ್ಲಿ ಒಂದು ಕೋಟಿ ರೂಪಾಯಿಗಳನ್ನು ಓದಗಿಸಿದ್ದಾರೆ. ಇದರಲ್ಲ ಸಾಲವನ್ನು ಸವರ್ಣೀಯರಿಗೇ ಕೊಡುತ್ತಿದ್ದಾರೆ. ಇತರರಿಗೆ ಕೊಡುತ್ತಿಲ್ಲ. ಇದನ್ನೆಲ್ಲ ಹರಿಜನ ಮಂತ್ರಿಗಳು ಏಕೆ ನೋಡುವುದಿಲ್ಲ! ಬೆಂಗಳೂರು ಪಟ್ಟಣದಲ್ಲಿ ಎಷ್ಟು ಮನೆಗಳಿವೆ, ಮಹಡಿಯ ಮನೆಗಳಿವೆ, ಇವೆಲ್ಲ ಯಾರಿಗೆ ಸೇರಿವೆ! ಹರಿಜನರಿಗೆ ಇಂಥ ಮನೆಗಳು ಎಷ್ಟಿವೆ! ಇವೊತ್ತಿನ ದಿವಸ ಕಮ್ಯೂನಿಸ್ಟ್ ರಾಜ್ಯ ಎಂದು ಹೇಳುತ್ತಾರೆ, ಕಮ್ಯುನಿಸ್ಟರನ್ನು ಕಂಡರೆ ಹೆದರುತ್ತಾರೆ. ಖಾದಿ ಬಟ್ಟೆಯ ಪ್ರಜಾಪ್ರಭುತ್ವ ಹೋಗುತ್ತದೆಂದು ನಮ್ಮ ನಾಯಕರು ಭಯಪಡುತ್ತಾರೆ. ಇವುಗಳನ್ನೆಲ್ಲ ಪರಿಹರಿಸಬೇಕಾದರೆ ಏನು ಮಾಡಬೇಕೆಂದು ಯೋಚಿಸಬೇಕು. ಪ್ರತಿಯೊಬ್ಬರೂ ಹೇಳುತ್ತಾರೆ: ಮಕ್ಕಳೇ ದೇಶದ ನಿಜವಾದ ಸಂಪತ್ತು, ಮಕ್ಕಳ ವಿದ್ಯಾಭ್ಯಾಸವೇ ದೇಶದ ದೊಡ್ಡ ಜವಾಬ್ದಾರಿ, ದೇಶದ ಮಕ್ಕಳ ಆರೋಗ್ಯವೇ ನಿಜವಾದ ದೇಶದ ಆರೋಗ್ಯ, ಮಕ್ಕಳ ಬೆಳವಣಿಗೆ ಮತ್ತು ಬಲವೇ ದೇಶದ ಬಲ, ಅದೇ ಒಂದು ಶಕ್ತಿ, ಆ ಶಕ್ತಿಯಿಂದಲೇ ನಾವು ಪ್ರಗತಿಯನ್ನು ಸಂಪಾದನೆ ಮಾಡಬೇಕು, ಒಗ್ಗಟ್ಟನ್ನು ಸಾಧಿಸಬೇಕು; ಎಂದು ಎಲ್ಲ ದೇಶಗಳಲ್ಲಿಯೂ ಕೂಡ, ಕಮ್ಯೂನಿಸ್ಟ್ ರಾಷ್ಟ್ರಗಳಲ್ಲಿ ಮತ್ತು ಬಂಡವಾಳಶಾಹಿ ದೇಶಗಳಲ್ಲಿ ಸಹ ಮಕ್ಕಳಿಗೆ ಮೊದಲನೆಯದಾಗಿ ಗಮನ ಕೊಡುತ್ತಿದ್ದಾರೆ. ನಮ್ಮ ದೇಶದಲ್ಲಿಯೂ ಕೂಡ ಅನೇಕ ಯೋಜನೆಗಳಾಗಿವೆ. ಆ ಯೋಜನೆಗಳ ಮೂಲಕ ದೊಡ್ಡ ದೊಡ್ಡ ಜಲಾಶಯಗಳು ನಿರ್ಮಾಣವಾಗಿ ಅದರಿಂದ ಜಮೀನ್ದಾರರಿಗೆ ಅನುಕೂಲವಾಗುತ್ತಿದೆ. ಆದರೆ ಜಮೀನಿಲ್ಲದೆ ಇರತಕ್ಕವನಿಗೆ ಏನೂ ಪ್ರಯೋಜನವಿಲ್ಲ. ಹಾಗೆಯೇ ಈ ಯೋಜನೆಗಳಲ್ಲಿ ಮಕ್ಕಳ ಅಭಿವೃದ್ಧಿಯ ಕಡೆಗೆ ಅಷ್ಟಾಗಿ ಗಮನ ಕೊಟ್ಟಿಲ್ಲ.

ನಮ್ಮ ದೇಶದಲ್ಲಿ ಪ್ರಜಾಪ್ರಭುತ್ವ ಹತ್ತೊಂದು ವರ್ಷಗಳಿಂದ ಇದೆ. ನನಗೂ ಒಂದು ವ್ಯಕ್ತಿತ್ವವಿದೆ.

(ಶ್ರೀ ಎಸ್. ರಾಚಯ್ಯ)

ಆ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳುವುದಕ್ಕೆ ಸರ್ವ ಸಾಮಾನ್ಯವಾದ ಅವಕಾಶವಿದೆ. ಆ ಅವಕಾಶವನ್ನು ಉಪಯೋಗಿಸಿಕೊಂಡು ಒಬ್ಬ ಸತ್ಪುರುಷನಾಗಿ, ನ್ಯಾಯಬದ್ಧವಾದ ಜೀವನವನ್ನು ಬೇರೆಯವರ ಸಹ ಕಾರದಿಂದ ಬೇರೆಯವರು ನಡೆಸುವಂತೆ ನಡೆಸು ತ್ತಿದ್ದೇನೆ ಎನ್ನತಕ್ಕ ಒಂದು ಮನಸ್ಸಿನ ಭಾವನೆ ಬರುವಂಥ ಕಾರ್ಯಕ್ಕೆ ಈ ಸರ್ಕಾರ ಕೈಹಾಕಿಲ್ಲ. ಅಷ್ಟೇ ಅಲ್ಲ, ಈ ಹನ್ನೊಂದು ವರ್ಷಗಳಲ್ಲಿ ಹರಿಜನರಲ್ಲಿ 25 ಜನರಿಗೆ ಡೆಪ್ಯುಟಿ ಕಮಿಷನರಾಗಿ ಮಾಡಿದ್ದರೆ ಹೇಳಿ, ಅಥವಾ 50 ಜನ ಅಮಲ್ದಾರರನ್ನು ನೇಮಕಮಾಡಿ ದ್ದರೆ ಹೇಳಿ. ಅರ್ಹರಾದ ಜನರು ಈ ವರ್ಗಗಳಲ್ಲಿ ಸಿಕ್ಕುತ್ತಿಲ್ಲವೇ? ಇವರಲ್ಲಿ ಪದವೀಧರರಾಗಿರುವವರು ಇಲ್ಲವೇ? ಬೇರೆ ಮುಂದುವರೆದ ಜನಾಂಗದಲ್ಲಿ ಹುಟ್ಟಿದ ಮಕ್ಕಳೆಲ್ಲ ಓದುತ್ತ ಇರುವಾಗ ಅದೇ ರೀತಿ ಇತರ ಜನಾಂಗಗಳಲ್ಲಿಯೂ ಇರುವಂತೆ ಮಾಡಬೇಡವೆ? ನಮ್ಮ ಪಂಗಡದ ಮಂತ್ರಿಗಳಿಗೆ ಇದರ ಕಡೆಗೆ ಮನಸ್ಸಿಲ್ಲ. ಇವೊತ್ತಿನ ದಿವಸ ವಿಧಾನಸೌಧ ಕಟ್ಟಡವನ್ನು ಸರ್ಕಾರ ದವರು ಶ್ರೀ ಚೆನ್ನಿಗರಾಮಯ್ಯನವರಿಗೆ ಬರೆದು ಕೊಟ್ಟರೆ ಸಂತೋಷಪಟ್ಟು ಹಾರಾಡುತ್ತಾರೆ. ಇದನ್ನೆಲ್ಲ ಏಕೆ ಹೇಳುತ್ತಿದ್ದೇನೆಂದರೆ ಅನ್ನವನ್ನು ಸಂಪಾದನೆಮಾಡಿ ಜೀವನ ಮಾಡತಕ್ಕ ಮಾರ್ಗವನ್ನು ಸರ್ಕಾರದವರು ಹರಿಜನರಿಗೇ ಆಗಲಿ ಅಥವಾ ಯಾರಿಗೇ ಆಗಲಿ ಕಲ್ಪಿಸಿಕೊಡಬೇಕು. ಅಂಥ ಅವಕಾಶ ಗಳನ್ನು ಕಲ್ಪಿಸಿಕೊಡದೆ, ಒಂದು ಕೈಯಲ್ಲಿ ಕೊಟ್ಟು ಇನ್ನೊಂದು ಕೈಯಲ್ಲಿ ಕಿತ್ತುಕೊಳ್ಳುವುದು ಸರಿಯಲ್ಲ. ಇರುವ ಭೂಮಿಯನ್ನು ಕಿತ್ತುಕೊಳ್ಳುವುದು, ಅವರ ಮೂಲಭೂತ ಹಕ್ಕನ್ನು ಕಿತ್ತುಕೊಳ್ಳುವುದು, ಅವರನ್ನು ದೇವಸ್ಥಾನಕ್ಕೆ ಸೇರಿಸದೆ ಇರುವುದು, ನಮಾರಾಧನೆ ಆದರೆ ಬಿಡದೆ ಇರುವುದು, ಈ ರೀತಿ ಶೋಷಣೆ ನಡೆಯುತ್ತಿದೆ. ಕೇವಲ ಒಂದೆರಡು ಜನಾಂಗಗಳಿಗೆ ಅನುಕೂಲವಾಗುವ ರೀತಿಯಲ್ಲಿ ಶೋಷಣೆ ಆಗುತ್ತ ಇರುವಾಗ, ಯಾವ ಒಂದು ಜನಾಂಗಕ್ಕೆ ರಕ್ಷಣೆಯನ್ನು ಕೊಟ್ಟಿದ್ದಾರೆಯೋ ಆ ಜನಾಂಗದ ಪ್ರತಿನಿಧಿಯಾಗಿರುವ ಮಂತ್ರಿ ಇವೊತ್ತು ಇಲ್ಲಿ ಕುಳಿತುಕೊಂಡು ನುಮ್ಮನೆ ನೋಡುತ್ತ ಏನೋ ಒಂದು ರೀತಿಯ ಜವಾಬನ್ನು ಕೊಟ್ಟರೆ ನಮಸ್ಯೆ ಬಗೆ ಹರಿಯುವುದೇ! ಎಂದಿಗೂ ಇಲ್ಲ.

4 P.M.

ಬಲಹೀನ ವರ್ಗದವರಿಗಾಗುತ್ತಿರುವ ಎಕ್ಸ್‌ಪ್ಲಾಯಿ ಟೇಷನ್ ನಿಲ್ಲಿಸೋಣ. ಇವತ್ತಿನ ದಿವಸ ನಿಜವಾಗಿಯೂ ಕೂಡ ಎಕ್ಸ್‌ಟ್ರೀಮ್ ಬ್ಯಾಕ್‌ವರ್ಡ್ ಕ್ಲಾಸಸ್ಸಿನ ಸಮಸ್ಯೆಗಳು ದೇಶದ ಸಮಸ್ಯೆಗಳು. ಬರೀ ಬಲಹೀನ ವರ್ಗಗಳ ಸಮಸ್ಯೆಗಳಲ್ಲ. ಈ ಬಲಹೀನ ವರ್ಗಕ್ಕೆ ಸೇರಿದ ಜನತೆ ಯಾರ ಮನೆಯಲ್ಲಾದರೂ ಊಟ ಮಾಡುವುದಕ್ಕೆ ಸಿದ್ಧರಿದ್ದಾರೆ; ಕೆಲಸ ಮಾಡುವುದಕ್ಕೆ ತಯಾರಾಗಿದ್ದಾರೆ. ಈ ವರ್ಗಗಳವರಿಗೆ ಯಾವ ಜಾತಿ ಭಾವನೆಗಳೂ ಇಲ್ಲ. ಯಾರು ಇವೊತ್ತು ಅವರ ಪುರೋಭ ವೃದ್ಧಿಗೆ ಕ್ರಮ ಕೈಗೊಳ್ಳಬೇಕು? ಯಾರು ಅವರಿಗೆ ಬಹಳ ಅನ್ಯಾಯವಾಗಿದೆ ಎಂದು ಹೇಳುತ್ತಾರೋ, ಅವರು ಗುಡುಗು ಮಿಂಚಿನ ಹಾಗೆ ಅರ್ಭಟ ಮಾಡುತ್ತಾರೆಂಬ ಅಪಾದನೆಯನ್ನು ಹೊರಿಸಿ, ನಮ್ಮ ಮಂತ್ರಿಗಳು ಅವರನ್ನು ನಗೆಪಾಟಲಿಗೆ ಈಡುಮಾಡುವರು. ನಾವು ಹೀಗೆ ನಗೆಪಾಟಲು ಮಾಡಿಸಿಕೊಳ್ಳುವುದಕ್ಕೆ ಇಲ್ಲಿಗೆ ಬಂದಿದ್ದೇವೆಯೇ? ಜವಾಬ್ದಾರಿಯುತರಾದ ಪ್ರಜೆಗಳೂ, ಬುದ್ಧಿವಂತರೂ ಸರ್ವಸ್ವವನ್ನೂ ತ್ಯಾಗಮಾಡಿ, ದೇಶ ಸೇವೆ ಮಾಡೋಣವೆಂದು ಬಂದು, ಬಲಹೀನ ವರ್ಗ ಗಳನ್ನು ಶೋಷಣೆಯಿಂದ ರಕ್ಷಿಸಿ ಎಂದು ಹೇಳಿದರೆ, ಅವರು ಅರ್ಭಟ ಮಾಡುತ್ತಿದ್ದಾರೆಂದು ಹೇಳಿದರೆ, ಇದು ಮಂತ್ರಿಗಳು ಜವಾಬ್ದಾರಿಯುತವಾಗಿ ಆಡುವ ಮಾತೇ! ಕಾನ್‌ಸ್ಟಿಟ್ಯೂಷ್ಷ ಆರ್ಟಿಕಲ್ 45ರ ಪ್ರಕಾರ, 10 ವರ್ಷದೊಳಗೆ ಪ್ರತಿಯೊಂದು ಮಗುವಿಗೂ 14 ವರ್ಷ ತುಂಬುವವರೆಗೆ ಕಂಪಲ್‌ಸರಿ ಎಜುಕೇಷ್ಷ ಕೊಡಬೇಕೆಂದಿದೆ. ನಂಸ್ಥಾನದ ಸರ್ಕಾರ ಈ ಆರ್ಟಿ ಕಲ್ಲನ್ನು ಏಕೆ ಜಾರಿಗೆ ತರಲಿಲ್ಲ? ಹೋಗಲಿ ಸಾಮಾನ್ಯ ವಾಗಿ ಪಾಲಂಟೀಯರ್ ಆಗಿ, ತಮ್ಮ ಇಚ್ಛೆಯ ಪ್ರಕಾರ ಯಾವ ಹರಿಜನರ ಮಕ್ಕಳು ಸ್ಕೂಲಿಗೆ ಹೋಗುತ್ತಾ ಇದ್ದಾರೆ? 45 ಲಕ್ಷ ಜನರಿದ್ದಾರೆ, 10 ಲಕ್ಷ ಮಕ್ಕಳು ಸ್ಕೂಲಿಗೆ ಹೋಗುತ್ತಾ ಇಲ್ಲ. ಎರಡು ಲಕ್ಷ ಜನ ಸ್ಕೂಲಿಗೆ ಹೋಗುತ್ತಾ ಇದ್ದಾರೋ ಇಲ್ಲವೋ. ಆದ್ದ ರಿಂದ ನರ್ಸರಿ ಸ್ಕೂಲುಗಳನ್ನು ಪ್ರಾರಂಭ ಮಾಡೋಣ. ಈ ಹೌಸಿಂಗ್ ಸ್ಕೀಮ್, ಡಿನ್ಯೂಕ್ಟಿವ್ ಸ್ಕೀಮ್. ಇನ್ನು ಹತ್ತು ವರ್ಷಗಳಲ್ಲಿ ದೇಶ ಮುಂದಕ್ಕೆ ಬರಬೇಕಾದರೆ, ನಮಾಜದಲ್ಲಿ ಕೆಳಮಟ್ಟದಲ್ಲಿರತಕ್ಕಂಥ ಜನ ಮೇಲಕ್ಕೆ ಬರಬೇಕಾದರೆ, ಇಷ್ಟೇ ವರ್ಷದ ಒಂದು ಯೋಜನೆ ಯನ್ನಿಟ್ಟುಕೊಂಡು, ನಮ್ಮ ದೇಶದ ದುಡ್ಡನ್ನು ಖರ್ಚು ಮಾಡಿ. ನ್ಯೂಯಾರ್ಕ್ ಕಾರ್ಪೊರೇಷನ್ನಿನ ಉತ್ಪತ್ತಿ ನಾನೂರು ಕೋಟಿ ರೂಪಾಯಿ. ಇಂಡಿಯಾ ದೇಶದಲ್ಲಿ 40 ಕೋಟಿ ಜನವಿದ್ದೂ, 400 ಕೋಟಿ ರೂಪಾಯಿ ಉತ್ಪತ್ತಿ. ಹರಿಜನರ ಅಭಿವೃದ್ಧಿ ಮಾಡುತ್ತೇವೆಂದು, ಹರಿಜನರ ಹೆಸರು ಏಕೆ ಹಾಳು ಮಾಡುತ್ತೀರಿ? ಈ ಕೋಮಿಗೆ ಈ ರೀತಿ ಮಾಡುವುದನ್ನು ಸಹಿಸುವುದ ಕ್ಕಾಗುವುದಿಲ್ಲ. ನಮ್ಮ ಮಂತ್ರಿಗಳಿಗೆ, ವಿದ್ಯಾ ಇಲಾಖೆ ಯಿಂದ ಈ ಕೋಮಿನವರಿಗೆ ಹಣ ಕೊಡಿಸುವ ಶಕ್ತಿ ಇಲ್ಲ. ಹಿಂದುಳಿದ ವರ್ಗಗಳು ಅವರ ಹಕ್ಕುಬಾಧ್ಯತೆ ಯನ್ನು ಸಂಪಾದನೆ ಮಾಡಿಕೊಂಡು, ವ್ಯಕ್ತಿತ್ವವನ್ನು ಬೆಳೆಸಿಕೊಳ್ಳಲು ಅವರಿಗಿರುವ ಸ್ಕೀಮುಗಳಲ್ಲಿ ದುಡ್ಡನ್ನು ವಿನಿಯೋಗಿಸುತ್ತಿಲ್ಲ. ಹರಿಜನರ ಮಕ್ಕಳ ವಿದ್ಯಾಭ್ಯಾಸಕ್ಕೆ, ನರ್ಸರಿ ಸ್ಕೂಲ್‌ಗಳಿಗೆ ಐದು ಪರ್ಸೆಂಟ್, ಮಿಡಲ್ ಸ್ಕೂಲುಗಳಿಗೆ ಹತ್ತು, ಹೈ ಸ್ಕೂಲುಗಳಿಗೆ ಹದಿನೈದು ಪರ್ಸೆಂಟ್ ಬಿಡೆಟ್ಟಿನಲ್ಲಿ ದುಡ್ಡು ಹಂಚಿದರೆ ಇನ್ನೂ ದುಡ್ಡು ಉಳಿಯುತ್ತದೆ. ಬೇರೆ ಸ್ಕೀಮುಗಳಿಗೆ 25 ಪರ್ಸೆಂಟ್ ಡಿಮಾರ್ಕೇಟ್‌ಮಾಡಿ. ಹರಿಜನರ ವಸತಿಗೆ ಒದಗಿಸುವ ಹಣವನ್ನು ಅವರ ವಿದ್ಯಾಭ್ಯಾಸಕ್ಕೆ ಮತ್ತು ಅವರ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳಲು ಸಹಾಯವಾಗುವ ಯೋಜನೆಗಳಿಗೆ ವಿನಿಯೋಗಿಸಿ. ಬ್ರಾಹ್ಮಣ ಜನತೆಯಲ್ಲಿ ಐ.ಎ.ಎಸ್. ಅಧಿಕಾರಿಗಳಿದ್ದಾರೆ. ಅವರು ಹೆಚ್ಚಿಗೆ ವಿದ್ಯಾವಂತರಾಗಿದ್ದಾರೆ. ಕೈಗಾರಿಕೆ, ವ್ಯಾಪಾರ, ಜರ್ನಲಿಸಮ್ ಮುಂತಾದ ಉದ್ಯಮಗಳಲ್ಲಿ ಕೂಡ ಅವರು ಮುಂದುವರಿದಿದ್ದಾರೆ. ನಾವು ಹೊಟ್ಟೆಕಿಚ್ಚು ಪಡಬೇಕಾಗಿಲ್ಲ. ನಾವು ಹಿಂದುಳಿದಿದ್ದರೆ, ನಾವೇ ಕಾರಣರು. ನಾವು ಹಿಂದುಳಿದಿರುವುದಕ್ಕೆ ಯಾರು ಜವಾಬ್ದಾರರು? ಮಾನ್ಯ ಮಂತ್ರಿ ಶ್ರೀ ಚೆನ್ನಿಗ ರಾಮಯ್ಯನವರನ್ನಾಗಲಿ, ಇಲ್ಲಿರತಕ್ಕಂಥವರನ್ನಾ ಗಲಿ, ಅಧಿಕಾರಿಗಳನ್ನಾಗಲಿ, ಯಾರನ್ನೇ ಆಗಲಿ ಒಂದು ಪೇಟ್ಸನ್ಯೆಜಿಂಗ್ ಆಟಿಟ್ಯೂಡಿನಿಂದ ಇಷ್ಟು ಕೊಡಿ ಎಂದು ಕೇಳುವುದಿಲ್ಲ. ನಾವು ಒಂದು ಪಕ್ಷದ ಆಸ್ತಿಯನ್ನು ಕೇಳುತ್ತಾ ಇಲ್ಲ. ಅಥವ ಜನತೆಯ ಆಸ್ತಿಯನ್ನು ಕೇಳುತ್ತಾ ಇಲ್ಲ. ಇವರಿಂದ ಪೇಟ್ಸನ್ಯೆಜಿಂಗ್ ಆಟಿಟ್ಯೂಡ್ ಬೇಡ ಎಂದು ಮತ್ತೊಮ್ಮೆ ಹೇಳುತ್ತೇನೆ. ರಾಜ್ಯಾಂಗದಲ್ಲಿ ರೆಕಗ್‌ನೈಸ್‌ಮಾಡಿ,

ಪುಸ್ತಕ ಕ್ರಮಾಂಕ Accession No. (B) 4778
ದಿನಾಂಕ Date

ಅದರಲ್ಲಯೂ ಕೂಡ ಒಂದು ಜನಾಂಗಕ್ಕೆ ರಕ್ಷಣೆ ಕೊಡಬೇಕೆಂದಿರುವುದನ್ನು ಒಪ್ಪಿಕೊಳ್ಳೋಣ. ರಾಜ್ಯಾಂಗದ ಪ್ರಕಾರ ಫಂಡಮೆಂಟಲ್ ರೈಟ್ಸ್ ಎಲ್ಲಾ ಜನತೆಯವರಿಗೂ ಇದೆ. ಆದರೆ ಈ ಬಲಹೀನ ಜನತೆಯವರಿಗೆ ರಾಜ್ಯಾಂಗದಲ್ಲಿ ಒಂದು ವಿಶೇಷ ರಕ್ಷಣೆ ಇದೆ. ನಾವು ಯಾವ ಜನತೆಯ ದುಡ್ಡನ್ನೂ ಕೇಳುತ್ತಾ ಇಲ್ಲ. ನಾವು ಕೇಳುತ್ತಿರುವುದು ದೇಶದ ದುಡ್ಡು. ಈ ದುಡ್ಡನ್ನು ಹರಿಜನರ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಏಕೆ ಕೊಡಲಿಲ್ಲ? ರಾಜ್ಯಾಂಗದ ತತ್ವವನ್ನು ಜಾರಿಗೆ ತರತಕ್ಕಂಥ ದೃಷ್ಟಿಯಿಂದ ಏಕೆ ಹಣವನ್ನು ವಿನಿಯೋಗಿಸಿಲ್ಲ! ಗಾಂಧಿಜಿಯವರ ಐಡಿಯಲ್ಲನ್ನು ಅನುಷ್ಠಾನಕ್ಕೆ ತರತಕ್ಕ ದೃಷ್ಟಿಯಿಂದ ಏಕೆ ಹರಿಜನರ ವಿದ್ಯಾಭ್ಯಾಸಕ್ಕೆ ಹೆಚ್ಚು ಹಣವನ್ನಿಟ್ಟಿಲ್ಲ! ಹೌಸಿಂಗ್ ಸ್ಕೀಮಿಗೆ 65 ಲಕ್ಷ ರೂಪಾಯಿ ಇಟ್ಟಿದೆ. ನರ್ಕಾರಕ್ಕೆ ನಿಜವಾಗಿಯೂ ಸ್ಸಮ್ ಕ್ಲಿಯರೆನ್ಸ್‌ವಾಡಬೇಕು ಎಂದು ಇದ್ದರೆ ಬಡವರಿಗೆ, ಅಗ್ರಿಕರ್‌ಚರಲ್ ಲೇಬರುಗಳಿಗೆ ಹಣ ಕೊಡುವ ಹಾಗೆ ಆರ್ಡರ್‌ಮಾಡಿ. ಎಲ್ಲರಿಗೂ ಕೊಡಿ. ಆದರೆ ಇದಕ್ಕೋಸ್ಕರ ಹರಿಜನರ ವಿದ್ಯಾಭ್ಯಾಸಕ್ಕೆ ಕೊಡತಕ್ಕಂಥ ಹಣವನ್ನು ಕಡಮೆ ಮಾಡಬೇಡಿ. ಪ್ರತಿಯೊಂದು ಹರಿಜನರ ಕೇರಿಯೊಳಗೂ ಒಂದು ಶಾಲೆಯನ್ನು ಕೊಡಿ. ಅಸ್ಪೃಶ್ಯತೆಯನ್ನು ಹೋಗಲಾಡಿಸಬೇಕಾದರೆ ಪ್ರಚಾರ ಮಾಡಬೇಕು. ಈ ವಿಷಯದಲ್ಲಿ ಪತ್ರಿಕೆಗಳವರು ಮನಸ್ಸುಮಾಡಿ, ದೇಶದ ಜವಾಬ್ದಾರಿಯನ್ನು ಅರಿತುಕೊಂಡು ಸಹಾಯ ಮಾಡಬೇಕು. The press is one of the two wings of democracy. ಒಂದು ಕಡೆ ಲೆಜಿಸ್ಲೇಚರ್, ಇನ್ನೊಂದು ಕಡೆ ಪ್ರೆಸ್ ಇವೆರಡೂ ಕೆಲಸಮಾಡಿ ಈ ಹಿಂದುಳಿದ ಜನಗಳನ್ನು ಮುಂದಕ್ಕೆ ತರಬೇಕು. ಇದರಲ್ಲಿ ಪ್ರೆಸ್ಸಿನವರ, ಸಾರ್ವಜನಿಕರ, ಎಲ್ಲರ ಜವಾಬ್ದಾರಿಯೂ ಇದೆ. ಇವರಿಗೋಸ್ಕರ ಕೊಟ್ಟ ಹಣ ಸರಿಯಾಗಿ ವಿನಿಯೋಗವಾಗಬೇಕು. ಪ್ರತಿಯೊಂದು ಹರಿಜನರ ಕೇರಿಯೊಳಗೂ ನರ್ಸರಿ ಸ್ಕೂಲನ್ನುಮಾಡಿ. ಸೋಷಿಯಲ್ ವೆಲ್‌ಫೇರ್ ಬೋರ್ಡ್ ಎಂದು ಹರಿಜನರಿಗೆ ಒಂದು ದೊಡ್ಡ ಸ್ಕೀಮ್ ಇದೆಯಂತೆ. ಇದಕ್ಕೆ ಮೈನೂರು ದೇಶದಲ್ಲಿ ಅರ್ಧಭಾಗದ ದುಡ್ಡನ್ನು ಕೊಟ್ಟುಬಿಟ್ಟಿದ್ದಾರಂತೆ. ಸೋಷಿಯಲ್ ವೆಲ್‌ಫೇರ್ ಡೈರೆಕ್ಟರ್ ಎಂಬ ಹುದ್ದೆಯನ್ನು ಮಾಡಿದರು. ಏನು ಸಂಕುಚಿತ ಭಾವನೆ! ಡಿಪ್ರೆಸ್ಡ್ ಕ್ಲಾಸು ಕಮಿಷನರ ಹುದ್ದೆಯನ್ನು ತೆಗೆದರು. ಸೋಷಿಯಲ್ ವೆಲ್‌ಫೇರ್ ಬೋರ್ಡ್ ದುಡ್ಡನ್ನು ಏತಕ್ಕೋಸ್ಕರ ಹರಿಜನರ ಪ್ರಗತಿಗೆ, ಹರಿಜನ ಹೆಂಗಸರ, ಮಕ್ಕಳ ಪ್ರಗತಿಗಾಗಿ ಉಪಯೋಗಿಸುತ್ತಿಲ್ಲ? ಸೋಷಿಯಲ್ ವೆಲ್‌ಫೇರ್ ದುಡ್ಡನ್ನು ಹರಿಜನರ ಮಕ್ಕಳ ಮತ್ತು ಹಿಂದುಳಿದ ವರ್ಗದವರ ಮಕ್ಕಳ ಪ್ರಗತಿಗೋಸ್ಕರ ವಿನಿಯೋಗಿಸುವತನಕ, ಸೋಷಿಯಲ್ ವೆಲ್‌ಫೇರ್ ಬೋರ್ಡ್ ಡೈರೆಕ್ಟರ್ ಬೇರೆ ಇರಬೇಕು; ಷೆಡ್ಯೂಲ್ಡ್‌ಕ್ಯಾಸ್ಟ್ ಕಮಿಷನರ್ ಬೇರೆ ಇರಬೇಕು. ಪ್ರೈಮರಿ, ಮಿಡಲ್ ಮತ್ತು ಹೈಸ್ಕೂಲುಗಳು ಎಲ್ಲೆಲ್ಲಿ ಈ ಬೋರ್ಡುಗಳಿಗೆ ಸೇರಿವೆ ಎಂದು ಹೇಳುತ್ತೀರೋ, ಅಲ್ಲಿ ಆ ಮಕ್ಕಳಿಗೆ ಪ್ರತಿದಿವಸ ನೀವು ಬೋರ್ಡಿನ ಬೆನಿಫಿಟ್ ಕೊಡಬೇಕು. ಯಾರಿಗೆ ಆ ತರಹ ಬೆನಿಫಿಟ್ ಕೊಡುವುದಿಲ್ಲವೋ ಅವರಿಗೆ ಕೊನೆಯಪಕ್ಷ ಮಿಡಲ್‌ಸ್ಕೂಲ್ ವಿದ್ಯಾರ್ಥಿಗೆ ಹತ್ತು ರೂಪಾಯಿ, ಹೈಸ್ಕೂಲ್ ವಿದ್ಯಾರ್ಥಿಗೆ 15 ರೂಪಾಯಿಗಳಂತೆ ನೀವು ಕೊಡಿ. ಅನಂತರ ಹತ್ತು ವರ್ಷಗಳಿಗೆ ಅವರ ಪ್ರಗತಿ ಹೇಗಿರುತ್ತದೆ ಎಂದು ನೋಡಿ. ಯಾವ ಜನಾಂಗದವರಿಗೇ ಆಗಲಿ ವಿದ್ಯಾಭ್ಯಾಸದ ವಿಚಾರದಲ್ಲಿ ಪ್ರತಿಯೊಂದು ಮಗುವಿಗೂ ಚುಚ್ಚು ಅವಕಾಶವಿರಬೇಕು. ಹರಿಜನ ಹಾಸ್ಟಲುಗಳಿಗೆ ಪ್ರತ್ಯೇಕ ಕಟ್ಟಡ ಎಂದು ಪದೇ ಪದೇ ಹೇಳುತ್ತಾರೆ. ಅರನು ಬೋರ್ಡಿಂಗ್ ಹೋಮ್ ಎಂದು ಎಷ್ಟೋ ವರ್ಷಗಳ ಹಿಂದೆ ಆ ಜನಾಂಗದವರು ಮುಂದೆ ಬರಲೆಂದು ಕನ್ಸ್ಟ್ರಕ್ಟ್ ಮಾಡಿದರು. ಸ್ಕಾನ್‌ಸ್ಕ್ರಿಟ್ ಕಾರೇಜ್ ಹಾಸ್ಟರ್ ಎಂದು ಇದೆ. ಬೇರೆ ನರ್ವರ್ಣರ ಹಾಸ್ಟೆಲ್‌ಗಳಿಗೆ ನಾವು ಹೋದರೆ ಅಲ್ಲಿನ ನದಸ್ಯರು ಉದಾರಿಗಳಾಗಿದ್ದರೆ, ನಮ್ಮಂತೆ ಅವರೂ ಮನುಷ್ಯರು, ಬಡವರು ಎಂದು, ತಿಳಿದು ಸರಿಯಾಗಿ ನಡೆದುಕೊಳ್ಳುತ್ತಾರೆ. ಅದರೆ ಎಲ್ಲರೂ ಹೀಗಿರುವುದಿಲ್ಲ. ಸಂಕುಚಿತ ಭಾವನೆ ಇರುವವರು ಅವರಲ್ಲೂ ಇರುವುದರಿಂದ, ಸಾಮಾನ್ಯವಾಗಿ ಅಸ್ಪೃಶ್ಯತೆ ಎನ್ನುವುದು ಅವರ ಮನಸ್ಸಿನಲ್ಲಿ ಇನ್ನೂ ಸ್ವಲ್ಪ ಇರುತ್ತದೆ. ಮನಸ್ಸು ಅನೇಕ ವರ್ಷಗಳಿಂದ ಇಂಥ ಭಾವನೆಗಳಿಗೆ ತರ ಮನೆಯಾಗಿರುವಾಗ ಏಕಾ ಏಕಿ ಇಂಥ ಭಾವನೆಗಳನ್ನು ಕಿತ್ತುಹಾಕುವುದು ಸಾಧ್ಯವಲ್ಲ. ಆದುದರಿಂದ ಹರಿಜನರ ಹಾಸ್ಟೆಲುಗಳನ್ನೇ ಬೇರೆ ಮಾಡಲಿ, ಈ ಹಾಸ್ಟೆಲುಗಳಿಗೆ ಬೇರೆ ವರ್ಗದವರನ್ನು ಶೇಕಡ 50 ರಷ್ಟು ಸೇರಿಸಲಿ. ಆದರೆ ಸಾರ್ವಜನಿಕರ ಹಾಸ್ಟೆಲುಗಳಿಗೆ ಇವರನ್ನೂ ಸೇರಿಸುತ್ತೇವೆಂದರೆ, ಅದು ಸರಿಹೋಗುವುದಿಲ್ಲ. ಕಾಂಗ್ರೆಸ್ ಭಕ್ತರು ಈ ರೀತಿ ಸಾರ್ವಜನಿಕ ಹಾಸ್ಟೆರೆಂದು ಮಾಡಿದ್ದಾರೆ. ಅಲ್ಲರುವ ಹರಿಜನರು ಒಬ್ಬರೋ ಇಬ್ಬರೋ ಮಾತ್ರ. ಈ ನೆಪದಿಂದ ಗ್ರ್ಯಾಂಟನ್ನು ಪಡೆಯುತ್ತಾರೆ. ಅವರವರ ಕೋಮಿಗೆ ಸಹಾಯ ಮಾಡಿಕೊಳ್ಳಲು ಸಾರ್ವಜನಿಕ ಹಾಸ್ಟೆಲ್ ಎಂದು ಮಾಡಿಕೊಂಡಿದ್ದಾರೆ. ಅವರ ಪಂಗಡದವರು 50 ಜನರಿದ್ದರೆ ಒಬ್ಬರೋ ಇಬ್ಬರೋ ಹರಿಜನರಿಗೆ ಕೊಡುತ್ತಾರೆ. ಈ ಒಬ್ಬೊಬ್ಬರೂ ಕೂಡ ಹೊರಗೆ ಕುಳಿತುಕೊಳ್ಳುತ್ತಾರೆ. ಬೇರೆ ಮಾರ್ಗವಿಲ್ಲದೆ ಹೀಗಿರುವಾಗ ನಮ್ಮಮೇಲೆ ಏಕೆ ಅನುಮಾನ? ಹರಿಜನರ ಹಾಸ್ಟೆಲ್‌ಗಳೆಂದು ಮಾಡಿ, ಇತರರನ್ನು ಬೇಕಾದರೆ ಅಲ್ಲಿಗೆ ಸೇರಿಸಲಿ. ನಮ್ಮ ಮಟ್ಟಕ್ಕೆ ನೀವು ಬರಬೇಡಿ, ನಿಮ್ಮ ಮಟ್ಟಕ್ಕೆ ನಮ್ಮನ್ನೂ ತೆಗೆದುಕೊಳ್ಳುವುದಕ್ಕೆ ಪ್ರಯತ್ನಮಾಡುವ ಜವಾಬ್ದಾರಿ ತೆಗೆದುಕೊಳ್ಳಿ ಎಂದು ಕೇಳುತ್ತೇನೆ. ಎಲ್ಲ ಹಾಸ್ಟೆಲುಗಳಿಗೂ ನಿಮ್ಮನ್ನು ಸೇರಿಸುತ್ತೇವೆಂದು ಶ್ರೀ ವೀರಣ್ಣ ಗೌಡರು ಅಥವಾ ಇನ್ನಾರಾದರೂ ಜವಾಬ್ದಾರಿ ತೆಗೆದುಕೊಂಡರೆ ನಮಗೆ ಬೇರೆ ಹಾಸ್ಟಲುಬೇಡ. ಹರಿಜನರ ಕೇರಿಗೆ ಬಂದು ಮನೆಗಳನ್ನು ಕಟ್ಟಿಕೊಂಡರೆ ಅವರಿಗೆ ಶೇಕಡ 10 ರಷ್ಟು ಕೊಡುತ್ತೇವೆಂದು ಮೊನ್ನೆ ಶ್ರೀ ಚೆನ್ನಿಗರಾಮಯ್ಯನವರು ಹೇಳಿದರು. ಅವರೇ ಮುನಿಸಿಪಾಲಿಟಿ ಟ್ರಸ್ಟ್‌ಬೋರ್ಡು ಮತ್ತು ಗ್ರಾಮ ಪಂಚಾಯಿತಿಗಳ ಶಾಖೆಗೆ ಮಂತ್ರಿಗಳು, ನರ್ವರ್ಣರಿರುವ ಪ್ರದೇಶಗಳಲ್ಲಿ ನೂರು ಸ್ಕೆಟುಗಳನ್ನು ಮಾಡಿದರೆ, ಅದರಲ್ಲಿ ಹರಿಜನರಿಗೆ ಇಪ್ಪತ್ತೈದು ಸ್ಕೆಟುಗಳನ್ನು ಕೊಡಲಿ. ಹೀಗೆ ಮಾಡುವುದಕ್ಕೆ ಬದಲು ಬೇರೆಯವರು ಅಲ್ಲಿಗೆ ಬರಲಿ, ಎಂದರೆ ಅದು ಪ್ರಯೋಜನವಾಗುವುದಿಲ್ಲ. ಯಾರೋ ಒಬ್ಬಿಬ್ಬರು ಬರಬಹುದು; ಬಂದರೂ ಕೂಡ ಅವರಿಗೇ ತೊಂದರೆಯಾಗಬಹುದು. ವೈಶ್ಯರಲ್ಲಿ ಯಾರಾದರೂ 'ಪಾಪರ್' ಆದರೆ ಅವರನ್ನು ತಮ್ಮ ಜಾತಿಯಿಂದ ತೆಗೆಯಬೇಕೆಂದು ಮಾಡಿದ್ದಾರೆ. ಹೀಗಾಗಿ, ಹಾಗೆ ಬಂದವರಿಗೆ ಅಲ್ಲಯೂ ಇಲ್ಲ, ಇಲ್ಲಿಯೂ ಇಲ್ಲ ತ್ರಿಶಂಕು ಸ್ವರ್ಗವಾಗುತ್ತದೆ.

ಷೆಡೂಲ್ ಪಂಗಡದವರಿಗೆ ಉದಾರವಾಗಿ ತರಿ, ಖುಷಿ, ಬಾಗಾಯಿತು ಜಮೀನುಗಳನ್ನು ಜಾಸ್ತಿ ಕೊಡುವ ನೀತಿಯನ್ನನುಸರಿಸಿದರೆ ಇದು ಸರಿಹೋಗುತ್ತದೆ; ಅವರ ಮಕ್ಕಳ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಸಹಾಯಬೇಕು. ಇವರ ಆರ್ಥಿಕಸ್ಥಿತಿ ವಿದ್ಯಾಭ್ಯಾಸದ

(ಶ್ರೀ ಎಚ್. ರಾಚಯ್ಯ)

ತಳಹದಿಯ ಮೇಲಿದೆ. ಸಾಮಾಜಿಕ ಸಮಾನತೆ, ಶ್ರೀ ಭೀಮಪ್ಪನಾಯಕರು ಹೇಳಿದಹಾಗೆ ಆರ್ಥಿಕ ಸಾಮಾನತೆ ಬಂದರೆ, ಸಾಮಾಜಿಕ ಸಮಾನತೆಯೂ ಬರುತ್ತದೆ. ಆರ್ಥಿಕ ಸಮಾನತೆ ವಿದ್ಯೆಯಿಂದ ಬರುತ್ತದೆ, ಜಾತಿಯ ಸಮಾನತೆಯೂ ಬರುತ್ತದೆ. ಅವರ ಮನಸ್ಸಿನಲ್ಲಿ ಒಂದು ಜಾಗೃತಿ ಹುಟ್ಟಿ ತಾವು ಏಕೆ ಈ ಸ್ಥಿತಿಯಲ್ಲಿರುವುದು ಎಂಬ ಅರಿವು ಹುಟ್ಟುತ್ತದೆ.

"Poverty is due to slavery
Slavery is due to poverty
Poverty ruins the body and it kills the soul."

ಎಂದು ಇಕ್ಬಲ್ ಹೇಳುತ್ತಾನೆ.

ರಾಜಕೀಯದಲ್ಲಿ, ರಾಜ್ಯಾಡಳಿತದಲ್ಲಿ ಭದ್ರತೆ ಬರಬೇಕಾದರೆ ನಾಯಕರು ಈಗಿರುವ ಪರಿಸ್ಥಿತಿಗೇ ಬೆಂಬಲ ಕೊಡದೆ, ಮೊದಲು ಹಿಂದುಳಿದಿರುವ ಹರಿಜನರ ಆರ್ಥಿಕ ಮಟ್ಟವನ್ನು ಸರಿಪಡಿಸಬೇಕು. ಜಸ್ಟಿಸ್ ಪಾರ್ಟಿಯ ಶಿಫಾರಸುಗಳ ಪ್ರಕಾರ ಜಮೀನಿಲ್ಲದವರಿಗೆ ಜಮೀನು ಕೊಡಬೇಕೆಂದಿದೆ. ಇದು something is better than nothing ಎನ್ನುವಂತಾಗುತ್ತದೆಯೇ ವಿನಾ ಜಮೀನಿಲ್ಲದವರಿಗೆಲ್ಲಾ ಅಷ್ಟೇನೂ ಅನುಕೂಲವಾಗುವುದಿಲ್ಲ. ಜಮೀನನ್ನು ಯಾರಿಗೆ ಕೊಡಬೇಕೆಂಬುದನ್ನೂ ಸರಿಯಾಗಿ ನಿರ್ದಿಷ್ಟ ಮಾಡಬೇಕು. ಭೂರಹಿತ ಹರಿಜನರು ತುಂಬಾ ಹಿಂದಿದ್ದಾರೆಂದು ಅವರಿಗೇ ಕೊಡಬೇಕೆಂಬ ಭೂನೀತಿಯನ್ನನುಸರಿಸಬೇಕು. ಹರಿಜನ ಮಂತ್ರಿಗಳು ಹೊರಡಿಸಿರುವ 'ಪ್ರೆಸ್ ಸ್ಟೇಟ್‌ಮೆಂಟ್' ನಮಗೆಬೇಡ. ನಿಜವಾಗಿಯೂ ಈ ಜನರ ಹಕ್ಕು ಬಾಧ್ಯತೆಗಳನ್ನು ಕಾಪಾಡಬೇಕಾದರೆ, ಷೆಡ್ಯೂಲ್ಡ್ ಕ್ಯಾಸ್ಟ್‌ನವರಿಗೆ ನ್ಯಾಯಬದ್ಧವಾದ ಕಾನೂನಾಗ ಬೇಕು. ಜಮೀನು ಹಂಚಿಕೆಯ ವಿಚಾರ ಭೂನೀತಿಯ ವಿಚಾರ ಮಾತನಾಡುವಾಗ ಇನ್ನೂ ಹೆಚ್ಚು ವಿವರವಾಗಿ ಹೇಳುತ್ತೇನೆ. ಈಗ ಸ್ಥೂಲವಾಗಿ ಮಾತ್ರ ಹೇಳುತ್ತೇನೆ. ಸ್ಪಿನ್ನಿಂಗ್ ಕಾರ್ಖಾನೆಯಲ್ಲಿ ಕೆಲಸಮಾಡುವವನು ತಿಂಗಳಿಗೆ 60 ರೂಪಾಯಿ ಸಂಪಾದನೆ ಮಾಡಿದರೆ, ವ್ಯವಸಾಯ ಕೂಲಿಯವನಿಗೆ ದಿವಸಕ್ಕೆ ಒಂದು ಅಥವ ಒಂದೂವರೆ ರೂಪಾಯಿ ನಷ್ಟಾದರೂ ಬರುವಂತೆ ಮಾಡಬೇಕು. ಆದರೆ ಅನೇಕರಿಗೆ ಅಷ್ಟು ದೊರೆಯುತ್ತಿಲ್ಲ. ಇವರನ್ನು exploit, ಎಂದರೆ, ಶೋಷಣೆಮಾಡುತ್ತಾ ಬಿಟ್ಟಿ ನಾಟಿ ಹಾಕಿಸುವುದು, ಬಿಟ್ಟಿ ಕಳೆ ಕೀಳಿಸುವುದು, ಬಿಟ್ಟಿ ವ್ಯವಸಾಯ ಮಾಡಿಸಿಕೊಳ್ಳುತ್ತಿದ್ದಾರೆ. ರಷ್ಯಾ ದೇಶದಲ್ಲಿ ಹೇಗೆ ಮನುಷ್ಯರನ್ನು raw materials ಎಂದು ಮಾಡಿಕೊಂಡಿದ್ದಾರೋ ಹಾಗೆ ಇಲ್ಲಿಯೂ ನಡೆಯುತ್ತಿರುವುದರಿಂದ ಪರಿಸ್ಥಿತಿ ಹೀಗಾಗಿದೆ. ಜಮೀನು ಕೆಲಸ ಮಾಡುವವನು ದಿವಸಕ್ಕೆ ಒಂಭತ್ತು ಗಂಟೆ ಕೆಲಸ ಮಾಡಬೇಕು, declared holidays ಇಲ್ಲ. ಕಾರ್ಖಾನೆಯವರಿಗೆ ಹೇಗೆ ಮಾಡಿದ್ದಾರೋ ಹಾಗೆಯೇ ವ್ಯವಸಾಯ ಮಾಡುವುದರಲ್ಲಿ ಜಮೀನ್ದಾರರಿಗೂ ಕಾನೂನು ಮಾಡಬೇಕು. Minimum wage ಕೂಡಲೆ ಗೊತ್ತು ಮಾಡಬೇಕು.....

ಶ್ರೀ ಡಿ. ದೇವರಾಜ ಅರಸ್ (ಹುಣಸೂರು) —ಹರಿಜನರಿಗೆ ಜಮೀನು ಸಿಕ್ಕಬೇಕಾದರೆ ಜಸ್ಟಿಸ್ ಪಾರ್ಟಿ ವರದಿಯ ಪ್ರಕಾರ ಕೆಲವರಿಗೆ ಸಿಕ್ಕಬಹುದು, ಸಾಕಷ್ಟು ಹರಿಜನ ಕೂಲಿಗಾರರಿಗೆ ಸಿಕ್ಕುವುದಿಲ್ಲವೆಂಬ ಅಭಿಪ್ರಾಯವನ್ನು ಮಾನ್ಯ ಸದಸ್ಯರು ವ್ಯಕ್ತಪಡಿಸಿದರು; ಭೂಮಿಯ ಮಾಲೀಕತ್ವ state ownership ಮಾಡಿಕೊಂಡರೆ, ಸಮಾನವಾಗಿ ಎಲ್ಲರಿಗೂ ಭೂಮಿ ದೊರಕುವುದಿಲ್ಲವೇ?

Sri N. RACHIAH.—I entirely agree. ಶ್ರೀ ಅರಸಿನವರು ಹೇಳುವ Nationalisation of land ಒಪ್ಪಿಕೊಳ್ಳುತ್ತೇನೆ. ಇದನ್ನು ಪೂರ್ಣವಾಗಿ ಮಾಡುವವರೆಗೆ minimum wage ಗೊತ್ತುಮಾಡಬೇಕು. ಇಂಗ್ಲೆಂಡಿನಲ್ಲಿ ವ್ಯವಸಾಯ ಕೂಲಿಗಾರ ಇತರ ಸಾಮಾನ್ಯ ಕೂಲಿಗಾರನಿಗಿಂತ ಹೆಚ್ಚು ಸಂಪಾದನೆ ಮಾಡುತ್ತಾನೆ. ಇಲ್ಲಿ ಶೇಕಡ 80-90 ರಷ್ಟು ಜನ ವ್ಯವಸಾಯವೃತ್ತಿಯನ್ನನುಸರಿಸಿರುವ ವ್ಯವಸಾಯ ಕೂಲಿಗಾರರು. ಹೀಗಿರುವಾಗ minimum wage ನಿಗದಿ ಮಾಡಬೇಕು. ಮಾಡಿದರೂ ಜಾರಿಗೆ ತರದೇ ಇರುವುದರಿಂದ ಈ ಪರಿಸ್ಥಿತಿಗೆ ಕಾರಣವಾಗಿದೆ. ಇದನ್ನು ಸರಿಪಡಿಸಬೇಕು.

ಮತ್ತು ಆರ್ಥಿಕ ವಿಚಾರದಲ್ಲಿ ಇನ್ನೊಂದು ಸಲಹೆ. ಇವತ್ತಿನ ದಿವಸ ನಾನು ಮೊದಲೇ ಹೇಳಿದಹಾಗೆ ನಮ್ಮ ಸಂಸ್ಥಾನ ಸರ್ಕಾರದಲ್ಲಿ ಒಂದು ಕೈಗಾರಿಕಾ ನೀತಿ ಇದೆ. ನಾಲ್ಕು ವರ್ಷಗಳ ಹಿಂದೆ ಶ್ರೀಮಾನ್. ಸಿದ್ದವೀರಪ್ಪನವರು ಮಂತ್ರಿಗಳಾಗಿದ್ದಾಗ ಒಂದು ಸ್ಕೀಮು ಇತ್ತು. ಹರಿಜನರಾಗಲಿ, ಬ್ಯಾಕ್‌ವರ್ಡ್ ಕ್ಲಾಸ್ ನವರಾಗಲಿ, ಬ್ರಾಹ್ಮಣರಾಗಲಿ ಯಾರೇ ಆಗಲಿ financial assistance to the educated unemployed ಎಂದು ಹೇಳಿ ಒಂದು ಸ್ಕೀಮ್ ಮಾಡಿ ಹೆಣ್ಣು ಮಕ್ಕಳಾದರೆ ಸ್ಯುಯಿಂಗ್ ಮೆಷೀನ್ಸ್, ಗಂಡಸರಾದರೆ ಎಷ್ಟು ರೂಪಾಯಿನಫ್ಯಾಕ್ಟರಿ ಹಾಕುತ್ತಾರೋ ಅದರಲ್ಲಿ ಶೇಕಡ 50 ಸಬ್ಸಿಡಿ, ಶೇಕಡ 50 ಇಂಡಸ್ಟ್ರಿಯಲ್ ಲೋನ್ ಕೊಡಬೇಕು ಎಂದು ಹೇಳಿ ಮಾಡಿದ್ದರು. ಇದು ಮಲ್ಲಾರಾಧ್ಯರಿಗೂಕೂಡ ಚೆನ್ನಾಗಿಗೊತ್ತಿದೆ. ಇಂಥಾ ಒಂದು ಯೋಜನೆ ಬೇಜವಾಬ್ದಾರಿ ಸರ್ಕಾರದಲ್ಲೂ ಸಹ ಇತ್ತು. ಇವತ್ತು ಪ್ರಜಾಪ್ರಭುತ್ವದಲ್ಲಿ ವಿದ್ಯೆಕಲತಿರತಕ್ಕ ಅನೇಕ ಜನ ಕೆಲಸಗಳಿಗೆ ಹೋಗದೆ ಕೈಗಾರಿಕಾ ವೃತ್ತಿ ಮತ್ತು ಇತರ ಅನೇಕ ವೃತ್ತಿಗಳನ್ನವಲಂಬಿಸಿ ಮುಂದೆ ಬರಬೇಕೆಂದಿರುವ ಕಾಲದಲ್ಲಿ ಅದರಲ್ಲೂಕೂಡ ಷೆಡ್ಯೂಲ್ ಕ್ಯಾಸ್ಟ್‌ನವರಿಗೆ ಈ ಬೆನಿಫಿಟ್ಟನ್ನು ಕೊಡದೆ ಇರುವುದು ಎಂದರೆ ಈ ಸರ್ಕಾರದಿಂದ ಏನು ಪ್ರಯೋಜನವಿದೆ? ಬಹಳ ಆಶ್ಚರ್ಯವಾಗುತ್ತದೆ. ಇದು ಪ್ರಜಾಪ್ರಭುತ್ವದ ಲಕ್ಷಣವಲ್ಲ. ಇವತ್ತು ಇದನ್ನು ನೋಟ್‌ಮಾಡಿಕೊಳ್ಳಿ ಎಂದು ತಿಳಿಸುತ್ತೇನೆ. ಏಕೆಂದರೆ ಅಂಥಾ ಒಂದು ಉದಾರವಾದ ಪಾಲಿಸಿ ಇದ್ದು, 50 ಸಾವಿರ ರೂಪಾಯಿ ಖರ್ಚುಮಾಡಿದರೆ ಅದರಲ್ಲಿ 1/3 ಭಾಗ ನಮಗೆ ಕೊಡಿ. ಶೇಕಡ 50 ಸಬ್ಸಿಡಿ, ಶೇಕಡ 50 ಲೋನ್ ಕೊಟ್ಟರೆ ಅವರು ಜಿನ್ನಿಂಗ್ ಫ್ಯಾಕ್ಟರಿ, ಟ್ವಿಸ್ಟಿಂಗ್ ಪೆಷೀನು ಮುಂತಾದವುಗಳನ್ನು ಇಟ್ಟುಕೊಂಡು ತಮಗೆ ಬೇಕಾದಂಥ ಕೈಗಾರಿಕೆ, ವ್ಯಾಪಾರವನ್ನು ಅವಲಂಬಿಸುತ್ತಾರೆ. ಆ ಒಂದು ಸ್ಕೀಮನ್ನು ಮುಂದುವರಿಸಿದರೆ ಖಂಡಿತವಾಗಿಯೂ ಚೆನ್ನಾಗಿರುತ್ತದೆ.

ಇನ್ನು ಫಾರ್ಮಿಂಗ್ ಜಮೀನುಗಳನ್ನು ಕೊಡುವಾಗ ಯಾರದೋ ಪ್ರಭಾವಕ್ಕೆ ಕಟ್ಟುಬಿದ್ದು ಈ ಜಮೀನು ಕೊಡುವ ನೀತಿಯನ್ನು ಯದ್ವಾತದ್ವಾ ಮಾಡುವುದಕ್ಕೆ ಬದಲಾಗಿ ಯಾರು ಯಾರು ಜಮೀನು ಇಲ್ಲದವರು ಇದ್ದಾರೋ ಅವರು ಹರಿಜನರಾಗಲಿ ಬೇರೆಯವರಾಗಲಿ ಎಲ್ಲರಿಗೂ ಕೊಡುತ್ತೇವೆ ಎನ್ನುವುದನ್ನು ಪ್ರಕಟಣೆ ಮಾಡಿ ಎಲ್ಲರಿಗೂ ಅರ್ಥವಾಗುವಂತೆ ತಿಳಿಸಿ ಎಲ್ಲೆಲ್ಲಿ ಜಮೀನು ಇದೆ ಅಲ್ಲಿ ರಸ್ತೆ ಮಾಡಿಸುವುದು, ಅಕಾರೋನಿಗಳಿಗೆ ಬಾವಿ ತೋಡಿಸುವುದು, ಸ್ಕೂಲ್

ಪ್ರಾರಂಭವಾಗುವುದು—ಈ ರೀತಿ ಸರ್ಕಾರದ ಖರ್ಚಿನಿಂದಲೇ ಪ್ರತಿಯೊಂದು ಸೌಲಭ್ಯವನ್ನೂ ಮಾಡಿಕೊಡಿ. ಎಲ್ಲ ಜನಾಂಗದವರಿಗೂ ಕೊಡಿ ಬೇಡ ಎನ್ನುವುದಿಲ್ಲ. ಆದರೆ ಎಲ್ಲರಿಗೂ ಇದೆ. ನಮಗೆ ಇಲ್ಲ, ಅದಕ್ಕೇ ಈ ಪ್ರಶ್ನೆ ಬಂದಿರುವುದು.

ಕೋ-ಆಪರೇಟೀವ್ ಸೊಸೈಟಿ. ಕೇಂದ್ರ ಸರ್ಕಾರದಿಂದ ಒಂದು ಡೈರೆಕ್ಟೀವ್ ಬಂದಿದೆ. ಅದು ಗೊತ್ತಿದೆ. ಸಂಸ್ಥಾನ ಸರ್ಕಾರದವರು ಯಾವ ಯಾವ ಷೆಡ್ಯೂಲ್ಡ್ ಕ್ಯಾಸ್ಟಿನವರಿಗೆ ಸಹಾಯ ಕೊಡುತ್ತಾರೆ, ಅವರಿಗೆ ಯಾವ ತರಹ ಸಹಾಯ ಕೊಟ್ಟರೂಕೂಡ ಸಹಕಾರ ಸಂಘಗಳನ್ನು ಏರ್ಪಾಡು ಮಾಡಿ, ಷೇರ್ ಹಣ ಕೂಡ ಸರ್ ಎಂ. ವಿ. ಅವರ ಸ್ಕೀಂ ಪ್ರಕಾರ ಶೇಕಡ 50, ಶೇಕಡ 70, ನೀವೇಕೊಟ್ಟು ಸಹಕಾರ ಸಂಘದ ಮೂಲಕ ಅವರು ನರ್ವಹಿಸಿಯಲ್ಲೂ ಮುಂದೆ ಬರುವಂತೆ ಮಾಡಬೇಕೆಂದು ಒಂದು ಸಂದೇಶ ಕೇಂದ್ರಸರ್ಕಾರದಿಂದ ಬಂದಿದೆ. ಅದು ನನಗೆ ಗೊತ್ತಿಲ್ಲ ಎಂದು ಮಾನ್ಯಮಂತ್ರಿಗಳು ಈಗ ಹೇಳುತ್ತಾರೆ. ಅದು ನನಗೆ ಗೊತ್ತು.

ಬಿಲ್ಡಿಂಗ್ ಮೆಟೀರಿಯಲ್ಸ್ ಕೊಡುತ್ತೇವೆ ಎಂದು ಹೇಳುತ್ತೀರಿ. ತೇಗದಮರಕ್ಕೆ ಬದಲು ಆಲದ ಮರ ಕೊಟ್ಟು 15 ವರ್ಷ ಬಾಳಿಕೆ ಬರುವುದು 3 ವರ್ಷವೂ ಕೂಡ ಬಾಳಿಕೆ ಬರದೆ ಮನೆ ಬಿದ್ದು ಹೋಗುತ್ತದೆ. ಇವರಿಗೆ ಸರಿಯಾದ ಮರವನ್ನು ಕೊಡಬೇಕು. ನಮ್ಮಲ್ಲಿ ಫಾರೆಸ್ಟ್ ಇಲಾಖೆ ಇದೆ. ಪ್ರತಿಯೊಂದು ಕಡೆಯಲ್ಲೂ ಕೂಡ ಫರ್ನೀಚರ್‌ವರ್ಗ್ಸ್‌ಗೆ ಮಾಡುವುದಕ್ಕೆ ಡಿಪೋಇದೆ. ಹರಿಜನರ ಮಂತ್ರಿಗಳಾಗಿರತಕ್ಕವರು ತಮ್ಮ ಜವಾಬ್ದಾರಿಯನ್ನು ಅರಿತುಕೊಂಡ ಪಕ್ಷದಲ್ಲಿ 10 ಲಾರಿ ತರಿಸಿ ಎಲ್ಲೆಲ್ಲ ಹರಿಜನರಿಗೆ ಬಿಲ್ಡಿಂಗ್ ಮೆಟೀರಿಯಲ್ಸ್ ಕೊಡಬೇಕೋ ಅಲ್ಲೆಲ್ಲಾ ಕೊಡಲಿ. ಮುಫತ್ತಾಗಿಯೇ ಸಾಮಾನು ಕೊಡಬೇಕೆಂದು ಆರ್ಡರ್ ಇದೆ. ಆದರೆ ಕೊಡುತ್ತಾ ಇಲ್ಲ. ಏಕೆ ಈ ಯೋಜನೆ ಮಾಡಿಲ್ಲ? ಈಗ ಉಳಲೇ ಕಾಯಿ, ಜೇನುತುಪ್ಪ ಮಾಡುವುದು, ಮೇಣ ಮಾಡುವುದು, ಈ ರೀತಿ ಕಾಡಿನಲ್ಲಿ ಅನೇಕ ವಿಧವಾಗಿ ಮನುಷ್ಯ ಮಾತ್ರದವರಿಗೆ ಬೇಕಾದ ವಸ್ತು ಇರುವಾಗ ಸಣ್ಣಪುಟ್ಟ ಕಾಂಟ್ರ್ಯಾಕ್ಟುಗಳನ್ನು ಕೊಡುವುದಕ್ಕೆ ಬದಲಾಗಿ ಕೋ-ಆಪರೇಟೀವ್ ಸೊಸೈಟಿ ಮೂಲಕ ಹರಿಜನರು ಯಾರಾದರೂ ಮುಂದೆ ಬಂದರೆ ಮುಫತ್ತಾಗಿ ಅವರಿಗೆ ಏಕೆ ಕೊಡಬಾರದು? ಬೇರೆಯವರಿಗೆ ಏನು ಕೊಡುತ್ತೀರೋ ಅದೇ ರೇಟಿನಂತೆ ಕೊಡಿ. ಈ ರೀತಿ ಮಾಡುವುದರೆ ಅವರ ಆರ್ಥಿಕಾಭಿವೃದ್ಧಿ ಆಗುವುದಿಲ್ಲವೇ? ನೀವು ಇಷ್ಟೆಲ್ಲಾ ಅನುಕೂಲ ಇದ್ದರೂ ಸಹಾಯ ಮಾಡುದಿದಿಲ್ಲ, ಇನ್ನುಮುಂದೂ ಮಾಡುವುದಿಲ್ಲ ಎಂದು ನನ್ನ ಭಾವನೆ.

ಇನ್ನು ರೋಕಲ್ ಸೆಲ್ಫ್ ಗವರ್ನಮೆಂಟ್ ಎಂದರೆ, ಅದರಂಥ ಮುಖ್ಯವಾದಂಥ ಡಿಪಾರ್ಟ್‌ಮೆಂಟು ಬೇರೊಂದಿಲ್ಲ. ಏನು ಪ್ರಯೋಜನವಾಯಿತು? ಕೆಚ್ಚಲಿನಲ್ಲಿರುವ ಉಣ್ಣೆರಕ್ತ ಹೀರಿದ ಹಾಗೆ ಆಗಿದೆ. ಸ್ಥಳೀಯ ಸಂಸ್ಥೆಗಳಲ್ಲಿ ಹರಿಜನರಿರುವಕಡೆ ಗ್ರಾಂಟುಕೇಳುತ್ತೇವೆ. ಹತ್ತು ಸಾವಿರ ರೂಪಾಯಿನಲ್ಲಿ ಎರಡು ಸಾವಿರ ರೂಪಾಯಿ ಕೂಡ ನಮ್ಮ ಭಾಗಕ್ಕೆ ಸಿಕ್ಕುವುದಿಲ್ಲ. ರಸ್ತೆ ಮಾಡಿಸುವುದು ಬಾವಿ ತೆಗೆಸುವುದು, ಗ್ರಾಮ ನೈರ್ಮಲ್ಯಕ್ಕೆ ಎಷ್ಟು ಹಣ ಉಪಯೋಗಿಸುತ್ತಾರೋ ಅದರಲ್ಲಿ 1/3 ಭಾಗ ಕೂಡ ನಮಗೆ ಉಪಯೋಗವಾಗುತ್ತಿಲ್ಲ. ಅವರು ನಮ್ಮ ಜನರು; ಅವರ ಪರವಾಗಿ ನಾನು ಮಂತ್ರಿ ಆಗಿದ್ದೇನೆ; ನನ್ನ ಜೀವಮಾನದಲ್ಲೇ ಮಂತ್ರಿ ಆಗುತ್ತಾ ಇರಲಲ್ಲ; ಆದ್ದರಿಂದ ಅವರ ಹಿತರಕ್ಷಣೆ ಮಾಡಬೇಕು ಎನ್ನುವುದು ಅವರಲ್ಲಲ್ಲ. ಬೇರೆ ಜನಾಂಗದವರಿಗೆ ಕೊಟ್ಟಿರುವುದರಲ್ಲಿ ಎಳ್ಳಷ್ಟೂ ನಮಗೆ ಬೇಡ. ರಾಜ್ಯಾಂಗದ ಪ್ರಕಾರ ಮಾಡಬೇಕಾಗಿರುವುದನ್ನು ಮಾಡದಿದ್ದರೆ ನಾವು ಬೇರೆಯವರನ್ನೂ, ಶ್ರೀ ವೀರಣ್ಣಗೌಡರನ್ನೂ ಆಕ್ಷೇಪಣೆ ಮಾಡುವುದು ಹೇಗೆ? ಅಕ್ಸಿಸಿಷ್ಟ್ ಕಾರ್ಯಕ್ರಮದಲ್ಲಿ ಹೆಚ್ಚಿಗೆ ಹೇಳಬೇಕಾಗಿಲ್ಲ. ಮುನಿಸಿಪಲ್ ಏರಿಯಾದಲ್ಲಿ, ಯಾವಯಾವ ಜಾಗ ಇದೆ ಎಲ್ಲ ಅವರು ವಾಸಮಾಡುತ್ತೇವೆ ಎಂದು ಕೇಳುತ್ತಾರೆಯೋ ಅಂಥಕಡೆ, ವಿದ್ಯಾವಂತರು ಇದ್ದಾರೆ, ಇವರ ಜೊತೆಯಲ್ಲಿ ವಾಸಮಾಡತಕ್ಕ ಮನಸ್ಸುಳ್ಳವರು ಇದ್ದಾರೆ ಅವರಿಗೆ ಅವಕಾಶಮಾಡಿಕೊಡಬೇಕು. ಆ ರೀತಿ ಮಾಡಿದರೆ ಅವರ ಆರ್ಥಿಕಾಭಿವೃದ್ಧಿಯಾಗುವುದಿಲ್ಲವೆ? ಶ್ರೀ ಚನ್ನಿಗರಾಮಯ್ಯನವರೇ ಹೇಳಿ. ಅವರ ಮನಸ್ಸು ಹೇಗಿರಬೇಕು? ಕೊರಟಗೆರೆಯಲ್ಲಿ ಮನೆ ಬೇಕು, ಬೆಂಗಳೂರಿನಲ್ಲಿ ಮನೆ ಬೇಕು ಬೇಡ ಎಂದು ಹೇಳುವುದಿಲ್ಲ. 1957ನೆಯ ಇನ್ಸಪ್ಲಿಯಲ್ಲ ಕಮ್ಯೂನಿಟಿ ಸೆಂಟರ್ ಎಂದು ಹೇಳಿ, ಒಂದು ಪ್ಲಾನ್ ಇಲ್ಲದೆ, ಸ್ಕೀಂ ಇಲ್ಲದೆ ನಾಲ್ಕು ಸಾವಿರ ರೂಪಾಯಿ ಕೊಟ್ಟರು. ನಾನು ಹೇಳುವುದು ಸುಳ್ಳಾದರೆ ರಾಜೀನಾಮೆ ಕೊಡುತ್ತೇನೆ. ಅಲ್ಲಿ ಇದುವರೆಗೂ ಕೂಡ ಏನೂ ಆಗಿಲ್ಲ. ಇದರಿಂದ ನಿಮಗೆ ಎಷ್ಟರಮಟ್ಟಿನ ಅನಕ್ಕೆ ಇದೆ ಎಂಬುದು ಗೊತ್ತಾಗುತ್ತದೆ. ಹರಿಜನರ ಮಕ್ಕಳ ವಿದ್ಯಾಭ್ಯಾಸದ ವಿಚಾರದಲ್ಲಿ, ಅವರ ಪುರೋಭಿವೃದ್ಧಿ ವಿಚಾರದಲ್ಲಿ ಎಷ್ಟು ಆಸಕ್ತಿ ಇದೆ, ಎಷ್ಟು ದಕ್ಷತೆ ಇದೆ ಎನ್ನುವುದನ್ನು ಇದು ತೋರಿಸುತ್ತದೆ.

4-30 P.M.

ಮುನಿಸಿಪಾಲಿಟಿ ಲೋಕಲ್‌ಬೋರ್ಡುಗಳಲ್ಲಿ ಕಂಟ್ರಾಕ್ಟುಗಳನ್ನು ಕೊಡುತ್ತಾರೆ. ಅವುಗಳಲ್ಲಿ ಕೆಲವೊಂದು ಭಾಗ ಕಂಟ್ರಾಕ್ಟುಗಳನ್ನು ಹರಿಜನರಿಗೆ ಮತ್ತು ಅತ್ಯಂತ ಹಿಂದುಳಿದವರಿಗೆ ಕೊಡಬೇಕು. ಎಲ್ಲರಿಗೂ ಅಧಿಕಾರ ಸ್ಥಾನ, ಮಂತ್ರಿಸ್ಥಾನ ಕೊಡಿ ಎಂದು ನಾನು ಹೇಳುತ್ತಿಲ್ಲ. ಆದರೆ ಎನ್.ಇ.ಎಸ್., ಕಮ್ಯೂನಿಟಿ ಪ್ರಾಜೆಕ್ಟು ಮುಂತಾದ ಸರಕಾರದ ಅನೇಕ ಕೆಲಸಕಾರ್ಯಗಳಲ್ಲಿ ಕಂಟ್ರಾಕ್ಟು ಕೆಲಸವನ್ನು ಹರಿಜನರಿಗೂ ಕೊಡಬೇಕು.

ಇನ್ನು ಸ್ಟೆಟು ವಿಚಾರ ಹೇಳುತ್ತೇನೆ. ಹರಿಜನರಿಗೆ ಎಂಥ ಮನೆಗಳು ಇವೆ! ಮಹಡಿ ಮನೆಗಳು ಎಷ್ಟು, ಮಂಗಳೂರು ಹೆಂಚಿನ ಮನೆ ಎಷ್ಟು, ಗುಡಿಸಲುಗಳು ಎಷ್ಟು ಎಂಬುದನ್ನು ನೋಡಬೇಕು. ಹರಿಜನರಿಗೆ ಮಹಡಿಮನೆ, ಹೆಂಚಿನ ಮನೆ, ದೊಡ್ಡ ದೊಡ್ಡ ಮನೆಗಳನ್ನು ಕಟ್ಟಿಸುವುದಕ್ಕೆ ಆಗುವದಿಲ್ಲ. ಮುಖ್ಯವಾಗಿ ಮನೆಕಟ್ಟಲು ಮೊದಲು ಒಂದು ಒಳ್ಳೆಯಸ್ಟೆಟು ಬೇಕು. ಸರಿಯಾಗಿರುವ ಸ್ಟೆಟು ಕೊಡುವುದಕ್ಕಾಗಿ ಏರ್ಪಾಡು ಮಾಡಬೇಕು. ಟ್ರಸ್ಟ್‌ಬೋರ್ಡು ಇಲಾಖೆ ಹರಿಜನ ಸಚಿವರ ಕೈಯಲ್ಲೇ ಇದೆ. ಆದರೆ ಹರಿಜನರಿಗೆ ಸ್ಟೆಟುಗಳು ದೊರೆಯುತ್ತಿಲ್ಲ. ಹರಿಜನರ ಅಭಿವೃದ್ಧಿಗಾಗಿ ಹರಿಜನ ಮಂತ್ರಿಗಳಾಗಿರುವ ಶ್ರೀವರ್ಮಾ ಚನ್ನಿಗರಾಮಯ್ಯನವರು ಒಂದು ತೀರ್ಮಾನಮಾಡಿ, ಹರಿಜನರಿಗೆ ಸ್ಟೆಟು ಕೊಡುವ ವಿಚಾರದಲ್ಲಿ; ಮರಾಮತ್ ಶಾಖೆಯ ಮಂತ್ರಿ ಶ್ರೀವರ್ಮಾ ವೀರಣ್ಣಗೌಡರೂ ಮುಖ್ಯ ಮಂತ್ರಿಗಳೂ ಒಪ್ಪಿಕೊಳ್ಳುವ ಹಾಗೆ ಮಾಡಬೇಕು. ಬೇರೆಯವರಿಗೆ ನೂಲ್ಕು ರೂಪಾಯಿ ದರದಂತೆ ಕೊಟ್ಟರೆ, ಹರಿಜನರಿಗೆ ಒಂದೂವರೆ ರೂಪಾಯಿ ರೇಟಿನಿಂದ ಕೊಡಬೇಕು. ಅದಕ್ಕಾಗಿ ಒಂದು ಆರ್ಡರ್ ಮಾಡಿ ಕ್ಯಾಬಿನೆಟ್ ಮುಂದೆ ಇಡಿ. ಅವರು ಒಂದು ವೇಳೆ ಒಪ್ಪದಿದ್ದರೆ ತಮ್ಮ ಸ್ಥಾನವನ್ನು ಬಿಟ್ಟು ಈಚೆಗೆ ಬರಲಿ. ಅಲ್ಲೊಂದು ಇಲ್ಲೊಂದು ತಮಗೆ ಬೇಕಾದವರಿಗೆ ತಮ್ಮ ಪಿ.ಎ. ಆದವರಿಗೆ ಒಂದು ಸ್ಟೆಟು ಕೊಡಿಸಿದರೆ ಕೆಲಸವಾಗಲಲ್ಲ. ಎಲ್ಲ ಹರಿಜನರ ಪುರೋಭಿವೃದ್ಧಿಗಾಗಿ ಪ್ರಯತ್ನ ಮಾಡಬೇಕು. ಅವರ ಸೆಕ್ರೆಟರಿಯವರು ಹರಿಜನರ ಹಿತೈಷಿಗಳಾಗಿದ್ದಾರೆ.

(ಶ್ರೀ ಎಚ್. ರಾಚಯ್ಯ)

ಆದರೆ ಪ್ರತಿಯೊಂದು ಗ್ರಾಮದಲ್ಲೂ ಜಮೀನು, ಮನೆ ಕಟ್ಟುವುದಕ್ಕೆ ಜಾಗವನ್ನು ಕೊಡತಕ್ಕಂಥಾದ್ದನ್ನು ಕಿತ್ತುಕೊಳ್ಳಬಾರದು. ಅದೇರೀತಿಯಾಗಿ ಬಡ ರೈತರಿಗೆ ತಕಾವಿ ಸಾಲವನ್ನು ಇಂಪೀರಿಯರ್, ರಿಜರ್ವ್ ಬ್ಯಾಂಕಿನಿಂದ ಕೋಟಿಗಟ್ಟಲೆ ಹಣ ಕೊಡರಾಗುತ್ತಿದೆ. ರೈತರಿಗೆ ಕೊಡಲ. ಅದು ಸಂತೋಷ, ಬೇಡವೆನ್ನುವ ದಿಲ್ಲ. ಆದರೆ ಹರಿಜನರಿಗೆ ಬಡ್ಡಿರಹಿತವಾದ land improvement loan ಕೊಡಬಾರದೇ? ಆಗ ಏಕೆ ಹರಿಜನರು ಮುಂದಕ್ಕೆ ಬರುವುದಿಲ್ಲ? ಎಂದು ಕೇಳುತ್ತೇನೆ. ಇದು ಬಹಳ ಶೋಚನೀಯವಾದುದು.

ಇವತ್ತಿನ ದಿವಸ ಇರತಕ್ಕ ಹೌಸಿಂಗ್ ಸ್ಕೀಮು ವಿಚಾರ ತೆಗೆದುಕೊಳ್ಳೋಣ. ಶ್ರೀಮಾನ್ ಚೆನ್ನಿಗರಾಮಯ್ಯನವರು ನನ್ನ ಸ್ನೇಹಿತರು. ನಾನೂ ಅವರ ಸ್ನೇಹಿತ. ಆದರೆ ಇತ್ತೀಚೆಗೆ ನಮ್ಮನಮ್ಮೊಳಗೆ ಭಿನ್ನಾಭಿಪ್ರಾಯ ಬಂದಿದೆ.

ಶ್ರೀ ಬಿ. ಕೆ. ಪುಟ್ಟರಾಮಯ್ಯ (ಚನ್ನಪಟ್ಟಣ).— ಭಿನ್ನಾಭಿಪ್ರಾಯವು ಸಾರ್ವಜನಿಕವೋ, ರಾಜಕೀಯವೋ?

ಶ್ರೀ ಎನ್. ರಾಚಯ್ಯ.—ಹೌಸಿಂಗ್ ಸ್ಕೀಮಿನಲ್ಲಿರುವ ದೋಷಗಳನ್ನು ಹೇಳಲು ಇಚ್ಛಿಸುತ್ತೇನೆ. ಇದೇನೂ ಅವರ ಪರ್ಸನಲ್ ಸ್ಕೀಮ್ ಅಲ್ಲ. ಹರಿಜನರಿಗಾಗಿ ಮನೆಗಳನ್ನು ಕಟ್ಟುತ್ತಾರೆ. ಶ್ರೀಮಾನ್ ಚೆನ್ನಿಗರಾಮಯ್ಯನವರು ಮಂತ್ರಿಯಾಗಿ ಇದರ ಜವಾಬ್ದಾರಿಯನ್ನು ತೆಗೆದುಕೊಂಡಿದ್ದಾರೆಯೆ? ಹರಿಜನರಿಗೆ ಒಂದು ಒಳ್ಳೆಯಮನೆ ಇರಬೇಕು. ಈ ಸ್ಕೀಮಿನ ಪ್ರಕಾರ ಹರಿಜನರಿಗೆ ಒಂದು ಮನೆ ಕಟ್ಟಲು 1,000 ರೂಪಾಯಿಕೊಡಿ. 300 ರೂಪಾಯಿ ಸಬ್‌ಸಿಡಿ ಎಂದು ಕೊಡಿ. ಬಡ್ಡಿಯಿಲ್ಲದೆ ಲೋನ್ ಎಂದು 700 ರೂಪಾಯಿ ವಾಪಸ್ ಕೊಡಬೇಕೆಂದು ಹೇಳಿ ಕೊಡಿ. ಇದರಲ್ಲಿ ಒಂದು ಆಣೆಯಷ್ಟೂ ಕೂಡ ದುರುಪಯೋಗವಾಗುವದಿಲ್ಲ. ಬಡ ಹರಿಜನರು ಕೂಲಮಾಡಿ ಹತ್ತು ಜನ ಮಕ್ಕಳನ್ನು ಪೋಷಿಸಿ ಉಪಜೀವನ ಮಾಡತಕ್ಕಂಥಾದ್ದು ಇಂದಿನ ದಿವಸ it is a struggle for existence. Survival of the fittest. ನಮ್ಮ ಜನಗಳ ಹಿತರಕ್ಷಣೆ ಮಾಡುವುದಕ್ಕೆ, ಹಕ್ಕುಬಾಧ್ಯತೆಗಳನ್ನು ಕಾಪಾಡುವುದಕ್ಕೆ ಶ್ರೀ ಚೆನ್ನಿಗರಾಮಯ್ಯನವರಿಗೆ ಇರುವ ತೊಂದರೆ ಏನು? ಅವರು ಬಹಳ ಜವಾಬ್ದಾರಿಯಿಂದ ಗಾಂಭೀರ್ಯದಿಂದ ಮನಃಪೂರ್ವಕವಾಗಿ ಉತ್ತರ ಕೊಟ್ಟರೆ ನಮ್ಮ ಜನಾಂಗದ ಪುರೋಭಿವೃದ್ಧಿಯಾಗುತ್ತಿತ್ತ. 300 ರೂಪಾಯಿ ಮನೆ ಕಟ್ಟುವುದಕ್ಕೆ ಕಡ್ಡಾಯವಾಗಿ ಕೊಡಬೇಕೆಂದು ಹೇಳಿದ್ದಾರೆಯೆ? ಮನೆ ಕಟ್ಟುವದಕ್ಕೆ ಹತ್ತಿಪತ್ತು ಸಾವಿರ ಅರ್ಜಿಗಳು ಬರತ್ತವೆ. ಇರತಕ್ಕ ಹಣವನ್ನು ಎಲ್ಲರಿಗೆ ಸಮವಾಗಿ ಹಂಚಿಬಿಡಿ ಎಂದರೆ ಹೇಗೆ? ಅಷ್ಟುಹಣ ವಾದರೆ 300 ರೂಪಾಯಿ ಒಂದು ಮನೆಗೆ ಸಾಕಾಗುತ್ತದೆಯೆ? ಬಡವರಾದ ಹರಿಜನರ ಹತ್ತಿರ ದುಡ್ಡು ಇರುತ್ತದೆಯೇ? ಅವನು ಎಲ್ಲಂದ ದುಡ್ಡು ತರಬೇಕು! ಮಕ್ಕಳ ವಿದ್ಯಾಭ್ಯಾಸ ಮಾಡಿಸಬೇಕು, ಮಕ್ಕಳ ಮದುವೆ ಮಾಡಬೇಕು. ಮನೆ ಕಟ್ಟಬೇಕು ಎಂದರೆ ಈ ಜನಕ್ಕೆ ಅದು ಸಾಧ್ಯವೇ? ಒಂದು ಮಾತನ್ನು ಶ್ರೀಮಾನ್ ಚೆನ್ನಿಗರಾಮಯ್ಯನವರು ಧಾರವಾಡದಲ್ಲಿ ಬಹಳ ಚೆನ್ನಾಗಿ ಹೇಳಿದರು. He advised the Harijans to shake off their inferiority complex and also lead an honest and pure life, which would automatically have the sympathies and affections of the caste Hindus. ಹರಿಜನರು ಏನು pure and honest life lead ಮಾಡುತ್ತಿಲ್ಲವೆ! ಅವರು ಹೇಳಿದ್ದಾರೆ "We must lead a pure and honest life" as if all caste Hindus are leading a pure and honest life and we are leading a dishonest and impure life. ಹರಿಜನರ ಬಡತನದ ವಿಚಾರವೇನು! ನಿಜವಾಗಿಯೂ ಜವಾಬ್ದಾರೀ ಸ್ಥಾನದಲ್ಲಿರುವ ಮನುಷ್ಯರು ಆಡತಕ್ಕಂಥ ಮಾತು ಇದು ಅಲ್ಲ. ರಾಜ್ಯಾಂಗದಲ್ಲಿರುವ ಎಲ್ಲ ಸೌಲಭ್ಯಗಳನ್ನು ಒದಗಿಸಿಕೊಟ್ಟಿದ್ದೀರಾ! ಮನೆಕಟ್ಟುವುದಕ್ಕೆ 300 ರೂಪಾಯಿ ಕೊಟ್ಟರೆ ಅವನಿಗೆ 300 ದಿವಸದ ಕೂಲಿಯಾಗುತ್ತದೆ. ಊಟ ಉಡಿಗೆಯ ಖರ್ಚು ಇಲ್ಲವೆ! ಹರಿಜನರ ಕಾಲನಿ ಮಾಡಿ ಕೊಡುವುದರ ಜೊತೆಗೆ ಕುರಿ ಸಾಕುವುದಕ್ಕೆ ಕುರಿಯ ಒಂದು ಕಾಲನಿ ಮಾಡಿಕೊಡಿ, ಕೋಳಿಸಾಕುವುದಕ್ಕೆ ಕೋಳಿಯ ಒಂದು ಕಾಲನಿ ಮಾಡಿಕೊಡಿ ಎಂದು ಒಮ್ಮೆ ಮಂತ್ರಿಗಳಿಗೆ ಕೇಳಿಕೊಂಡಾಗ್ಗೆ, ಶ್ರೀಮಾನ್ ಚೆನ್ನಿಗರಾಮಯ್ಯನವರು ಹೇಳಿದ್ದು ಏನೆಂದರೆ, ಕೋಳಿ ಕಾಲನಿ ಮಾಡಲು ಗ್ರಾಂಟು ಕೊಟ್ಟರೆ ಕೋಳಿಯನ್ನೇ ತಿಂದುಬಿಟ್ಟಿರಿ, ಕುರಿ ಕಾಲನಿ ಮಾಡಲು ಗ್ರಾಂಟು ಕೊಟ್ಟರೆ ಕುರಿಗಳನ್ನೇ ತಿಂದು ಹಾಕಿದಿರಿ ಎಂದು ಹೇಳಿದ್ದಾರೆ. ಕುರಿ ಕೋಳಿ ಕೊಟ್ಟರೆ ಯಾತಕ್ಕು ತಿನ್ನುವುದಿಲ್ಲ ಎಂದು ನಾನು ಹೇಳುತ್ತೇನೆ. ಜಮೀನು, ಯಾವುದಾದರೂ ಕೈಗಾರಿಕೆ ಕೊಟ್ಟರೆ ಅದರ ಉತ್ಪತ್ತಿಯನ್ನು ಅಂಥವರು ತಿನ್ನುವುದಿಲ್ಲವೆ? ಇಷ್ಟುಲಘುವಾಗಿ ಮಾತನಾಡುವುದು ನಿಜವಾಗಿಯೂ ಸರಿಯಲ್ಲ. He has utterly failed to safeguard the rights of the Harijans as laid down in the Constitution—as a Minister, not as Sri Chennigaramiah. ಖಂಡಿತವಾಗಿ ಏನು ಪ್ರಗತಿಯಾಗಿದೆ, ಎಷ್ಟು ಆಗಬೇಕಾಗಿತ್ತು ಎಂಬುದನ್ನು ಯೋಚನೆ ಮಾಡಬೇಕಾದುದು ಅಗತ್ಯ, ನಾನು ಹೇಳುತ್ತೇನೆ ಹರಿಜನರು ಎಷ್ಟು ಅಭಿವೃದ್ಧಿಯಾಗಬೇಕಾಗಿತ್ತೋ ಅದು 100 ರಲ್ಲಿ 5 ರಷ್ಟು ಪ್ರಗತಿಯಾಗಿಲ್ಲ. ಇದಕ್ಕೆ ಅವರೇ ಹೊಣೆಗಾರರು. ಇನ್ನೊಂದು ವಿಷಯ ಕೇಳುತ್ತೇನೆ. 1947 ರಿಂದ administration ವಿಚಾರದಲ್ಲಿ ಎಷ್ಟೆಷ್ಟು ಆಫೀಸರ್‌ಗಳನ್ನು ನೇಮಕ ಮಾಡಿದ್ದಾರೆ? ಬೇಜವಾಬ್ದಾರಿ ಸರ್ಕಾರವಿದ್ದ ಕಾಲದಲ್ಲಿ ಅಂದರೆ ರಾಮಸ್ವಾಮಿ ಮುದಲಿಯಾರರು ಇದ್ದಾಗ ಏನು ಒಂದು ಆಫೀಸರ್ ಜಾಗದಲ್ಲಿ ನೇಮಕವಾಗಿದೆಯೋ ಅದರ ಮೇಲೆ ಇಲ್ಲ. 1947 ರಿಂದ ಒಬ್ಬ ಅಸಿಸ್ಟೆಂಟ್ ಕಮಿಷನರ್ ನೇಮಕ, ಪೋಲೀಸ್ ಇನ್‌ಸ್ಪೆಕ್ಟರ್ ನೇಮಕ ಮಾಡಿಲ್ಲ. ಅಮಲ್ದಾರರ ನೇಮಕವನ್ನು ಮಾಡಿಲ್ಲ. Malnad Development Committee, University Reorganisation Committee, States Finance Corporation ಹೀಗೆ ನೂರಾರು ಕಮಿಟಿಗಳನ್ನು ಮಾಡಿದ್ದೀರಿ. ಮನ್ನಣೆ ಕೊಟ್ಟಿದ್ದೀರಿ. ಆದರೆ ಇಂಥ ಕಮಿಟಿಗಳಲ್ಲಿ ಹರಿಜನರನ್ನು ಏಕೆ ತೆಗೆದುಕೊಂಡಿಲ್ಲ?

ರಾಜ್ಯಾಂಗದಲ್ಲೇನು ಹೇಳಿದೆ ಅದನ್ನು ನಿರಾಕರಿಸಲಾಗಿದೆ. ಜನಸಂಖ್ಯೆಯಲ್ಲಿ ನಾವು ಶೇಕಡ 25 ರಷ್ಟಿರುವಾಗ ರಾಜ್ಯಾಂಗದ ಪ್ರಕಾರ ನಮಗೆ ರಕ್ಷಣೆ ಕೊಟ್ಟಿರುವುದನ್ನು ತಿರಸ್ಕಾರ ಮಾಡಿದ್ದೀರಿ. ಜೀತ ಪದ್ಧತಿಯನ್ನು ತೆಗೆದುಹಾಕಬೇಕು. ಬಹಳವಾಗಿ ಹಿಂದುಳಿದಿರುವ ಪಂಗಡಗಳ ಮತ್ತು ಅನುಸೂಚಿತ ಜಾತಿಗಳ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಅಭಿವೃದ್ಧಿಗಾಗಿ ಒಂದು ಮಸೂದೆಯನ್ನು

ಸರ್ಕಾರದವರು ತರಬೇಕು. ಹಾಗೆ ತಂದು ಸರ್ವಿಸ್ ಸ್ಯಾಮಿ, ರಾಜ್ಯಾಂಗದಲ್ಲಿ ನಿರೂಪಿತವಾಗಿ ನಿರ್ದೇಶನ ಗಳಲ್ಲಿ ಜಮೀನು, ಕೈಗಾರಿಕಾ ಸಾಲ ಮತ್ತಿತರೆ ಕೊಡುವುದರಲ್ಲಿ, ದೇಶೋದ್ಧಾರಮಾಡುವುದಕ್ಕಾಗಿ ರುವ ಪ್ರಗತಿದಾಯಕವಾದ ಯೋಜನೆಗಳೆಲ್ಲದರಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್ಸ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್‌ಗೆ ಶೇಕಡ 25 ಭಾಗ ಮತ್ತು ಅತ್ಯಂತ ಹಿಂದುಳಿದ ಪಂಗಡಗಳಿಗೆ ಶೇಕಡ 50 ಭಾಗ ಆದರೂ ಮಾನ ಲಾಗಿಡುವುದು ಆವಶ್ಯಕ. ಹರಿಜನರ ವಿಚಾರದಲ್ಲಿ ಶ್ರೀ ಚನ್ನಿಗರಾಮಯ್ಯನವರಿಗೆ ಇಫೀರಿಯಾರಿಟಿ ಕಾಂಪ್ಲೆಕ್ಸ್ ಇರಬಾರದು, ಎಲ್ಲರಿಗೂ ಸರಿಸಮಾನ ವಾದ ಅವಕಾಶ ನೀಡಬೇಕು. ಶ್ರೀ ಮರಿಯಪ್ಪನವರು ಹಿಂದುಳಿದ ಪಂಗಡದವರ ಉದ್ಧಾರಕ್ಕಾಗಿ ಬಹಳ ವಾಗಿ ಪ್ರಯತ್ನಮಾಡಿದ್ದಾರೆ. ಜೀತಸಿಸ್ಟಂ ಕಾನೂನು ಬದ್ಧವಾಗಿ ತೊಡೆದುಹಾಕಬೇಕು. ಹರಿಜನರಿಗಿರುವ ಸಾಲಸೋಲಗಳು ಕಾನೂನು ಪ್ರಕಾರದ್ದಾಗಬೇಕು. ಪಟೇಲ ಶ್ಯಾನುಭೋಗರಿಗೆ ಬೊಂಬಾಯಿ ಕರ್ಣಾಟಕ ದಲ್ಲಿರುವ ಹಾಗೆ ಸಂಬಳಕೊಡಬೇಕು. ಹರಿಜನರನ್ನು ಋಣದಿಂದ ವಿಮುಕ್ತರನ್ನಾಗಿಮಾಡಿ ಅವರನ್ನು ಪಟೇಲ ಶ್ಯಾನುಭೋಗರು ಶೋಷಣೆ ಮಾಡುವುದನ್ನು ತಪ್ಪಿಸಬೇಕು. ಕಾನೂನು ದುರುಪಯೋಗಪಡಿಸಿ ಕೊಂಡು ಹಿಂದುಳಿದ ಜನಾಂಗದಿಂದ ಸುಲಿಗೆಮಾಡು ವುದನ್ನು ತಪ್ಪಿಸಬೇಕು ಎಂದು ಮನವಿ ಮಾಡುತ್ತೇನೆ. ಈಗ ಪಾಲಿಸಿ ಕಮಿಟಿ, ಅಡ್ವೈಜರಿ ಕಮಿಟಿ ಎಂದೇನಿವೆ ಅವನ್ನು ರದ್ದುಮಾಡಿ ಒಂದು ಸ್ಯಾಟ್ಯೂಟರಿ ಕಮಿಟಿ, ಕಾನೂನು ಬದ್ಧವಾದ ಒಂದು ಸಮಿತಿಮಾಡಿ ಅದರಲ್ಲಿ ಯಾರಾದರೂ ಇರಲಿ ಈ ಠರಾವಿನ ತತ್ವವನ್ನು ಒಪ್ಪಿ, ನಾನು ಕೇಳಿರುವಂತೆ ದೀನದಲಿತರು, ಹಿಂದುಳಿದವರು ಯಾವಜನಾಂಗದಲ್ಲೇ ಇರಲಿ, ಅದರೆಲ್ಲರ ಹಿತದೃಷ್ಟಿ ಯಿಂದ ಅವರ ಹಕ್ಕುಬಾಧ್ಯತೆ, ಸುಖಸಂಪತ್ತು ಕಾಪಾಡುವ ದೃಷ್ಟಿಯಿಂದ ಒಂದು ಕಾನೂನನ್ನು ತಂದು ಅಸಮರ್ಥರಿಗೆ ರಕ್ಷಣೆ ನೀಡಬೇಕು. ಹಾಗೆ ಮಾಡಿದರೆ ಪ್ರಜಾಪ್ರಭುತ್ವ ಉಳಿಯುತ್ತದೆ. ಇಲ್ಲ ದಿದ್ದರೆ ಯಾರು ಬಂಡವಾಳಗಾರರೋ, ಯಾರು ಶಕ್ತಿವಂತರೋ ಅವರಿಗೆ ಮಾತ್ರ ಅವಕಾಶಸಿಕ್ಕಿ ಅನ್ಯಾಯವಾಗುವುದರಿಂದ ದೇಶದಲ್ಲಿ ನಿಜವಾಗಿಯೂ ಕ್ರಾಂತಿಯೇಳಲು ಅವಕಾಶವಾಗುತ್ತದೆ. ಅದಾಗ ಬಾರದು. ನ್ಯಾಯಬದ್ಧವಾಗಿ, ಶಾಸನಬದ್ಧವಾಗಿ, ಶಾಂತಿಯುತವಾಗಿ ನಮ್ಮ ದೇಶದಲ್ಲಿ ಪ್ರತಿಯೊಬ್ಬ ರಿಗೂ ಸರಿಸಮಾನವಾದ ಅವಕಾಶ ಕಲ್ಪಿಸಿಕೊಡಬೇಕು. ಪಂಡಿತ ಜವಾಹರಲಾಲ್ ನೆಹ್ರೂ ಅವರು ಪ್ರಪಂಚದ ಮುಂದೆ ಪಂಚಶೀಲ ಎಂದೇನಿಟ್ಟಿದ್ದಾರೆ ಅದರಂತೆ ಪ್ರತಿಯೊಬ್ಬರೂ ಕೂಡ ಅಣ್ಣತಮ್ಮಂದಿರ ಹಾಗೆ ವರ್ತಿ ಸಲು ಅವಕಾಶವಾಗಬೇಕು. ರಾಜ್ಯಾಂಗದಲ್ಲಿರುವ ತತ್ವವನ್ನು ಅನುಷ್ಠಾನಕ್ಕೆ ತರಬೇಕಾದರೆ ಕಡ್ಡಾಯ ವಾಗಿಈ ನಿರ್ಣಯದ ತತ್ವವನ್ನೊಪ್ಪಿಕೊಂಡು ಮನಸೂರೆ ಯನ್ನು ತಂದು ಎಲ್ಲರ ಹಿತವನ್ನೂ ಕಾಪಾಡಬೇಕು. ಒಟ್ಟಿನಲ್ಲಿ ಈನಿರ್ಣಯದ ತತ್ವವನ್ನೊಪ್ಪಿಕೊಂಡರೆ ಬಹಳ ಸಂತೋಷ, ಇದರಿಂದ ದೇಶಕ್ಕೆ ಬಹಳ ಒಳ್ಳೆಯದಾಗು ತ್ತದೆ, ಪ್ರಜಾಪ್ರಭುತ್ವ ಶಾಶ್ವತವಾಗಿ ಉಳಿಯುತ್ತದೆ. ಕಾಂಗ್ರೆಸ್ ಸರ್ಕಾರಕ್ಕೆ ಕೀರ್ತಿಬರುತ್ತದೆ. ನಾನು ವೈಯಕ್ತಿಕವಾಗಿ ಸರ್ಕಾರವನ್ನು ಆಕ್ಷೇಪಿಸುವುದಿಲ್ಲ, ಸತ್ಯವಾಗಿ ಇರುವ ವಿಚಾರ ತಮ್ಮ ಮುಂದೆ, ಈ ಸಭೆಯ ಮುಂದೆ ಇಟ್ಟಿದ್ದೇನೆ. ಎಲ್ಲರೂ ಕೂಡ ಸರ್ವಾನುಮತದಿಂದ ಈ ನಿರ್ಣಯಕ್ಕೆ ಒಪ್ಪಿಗೆ ಕೊಡ ಬೇಕು ಎಂದು ಪ್ರಾರ್ಥನೆಮಾಡಿ ನನ್ನ ಭಾಷಣ ಮುಗಿಸುತ್ತೇನೆ.

*ಶ್ರೀ ಎ. ಭೀಮಪ್ಪನಾಯಕ್ (ಚಳ್ಳಕೆರೆ).— ಕೊಟ್ಟಿರುವ ಒಂದು ವಿಧಿಯನ್ನು ಕಾರ್ಯರೂಪಕ್ಕೆ ತರಬೇಕೆಂಬ ವಿಚಾರದಲ್ಲಿ ಶ್ರೀ ರಾಚಯ್ಯನವರು ತಂದಿರುವ ಈ ನಿರ್ಣಯವನ್ನು ಅನುಮೋದಿಸುವುದ ಕ್ಕಾಗಿ ನಾನು ನಿಂತಿದ್ದೇನೆ: ರಾಜ್ಯಾಂಗದ ಒಂದು ವಿಧಿ ಇದುವರೆಗೂ ಕಾರ್ಯರೂಪಕ್ಕೆ ತರಲ್ಪಟ್ಟಿಲ್ಲ. ಅದು ರಾಜ್ಯಾಂಗದ ವಿಧಿಗಳಲ್ಲಿ ಅತಿ ಮುಖ್ಯವಾದ ವಿಧಿಎಂಬುದನ್ನು ನಿರ್ವಿವಾದವಾಗಿ ಎಲ್ಲರೂ ಒಪ್ಪಲೇ ಬೇಕಾಗುತ್ತದೆ. ಆದರೆ ದುರದೃಷ್ಟವಶಾತ್ ಇದುವರೆಗೆ ಆಗಿರುವ ಕೆಲಸಕಾರ್ಯ ನೋಡಿದರೆ ಆ ವಿಧಿಗೆ ಧಕ್ಕೆ ತರುವ ರೀತಿಯಲ್ಲಿ ಆಗಿದೆಯೇ ಹೊರತು ಅದನ್ನು ಯಾವ ವಿಧದಲ್ಲೂ ಕಾರ್ಯರೂಪಕ್ಕೆ ತರುವುದಕ್ಕೆ ಪ್ರಯತ್ನಪಟ್ಟಿಲ್ಲ. ಅದಕ್ಕಾಗಿ ಮೈಸೂರು ಸರ್ಕಾರ ವನ್ನು ದೂಷಣೆ ಮಾಡುವುದಕ್ಕೆ ಹೋಗುವುದಿಲ್ಲ. ಇಂಡಿಯಾ ಸರ್ಕಾರದವರು ತಮ್ಮ ಕರ್ತವ್ಯವನ್ನು ಈ ನಿಂದರ್ಭದಲ್ಲಿ ಮಾಡಿಲ್ಲ. ಅಷ್ಟೇಅಲ್ಲ, ಇದನ್ನು ಕಾರ್ಯರೂಪಕ್ಕೆ ತರಲು ಏನು ಸಾಧನೆಮಾಡ ಬೇಕಾಗಿತ್ತೋ ಅದಕ್ಕೆ ತದ್ವಿರುದ್ಧವಾಗಿ ಕಾರ್ಯ ಮಾಡಿದ್ದಾರೆ ಎಂದು ಹೇಳಬೇಕಾಗುತ್ತದೆ. ಪೊಟ್ಟ ಪೊದಲನೆಯದಾಗಿ ದೀನದಲಿತರು ಯಾರು, ಬಲಹೀನ ಜನಾಂಗ ಯಾವುದು ಎಂಬುದನ್ನು ಕಂಡುಹಿಡಿಯುವು ದಕ್ಕಿದ್ದ ಮಾರ್ಗಕ್ಕೆ ಕೊಡಲಿಹಾಕಿದ್ದಾರೆ. ಹಿಂದೆಲ್ಲಾ ಸೆನ್ಸಸ್, ಜನಮತಗಣನೆ ಎಂದು ಮಾಡುವಾಗ ಪ್ರತಿಯೊಂದು ಜನಾಂಗದ ಸಂಖ್ಯೆಯನ್ನೂ ಕಂಡು ಹಿಡಿಯುವ ಒಂದು ಮಾರ್ಗವಿತ್ತು. ಇತ್ತೀಚೆಗೆ ಇಂಡಿಯಾ ಸರ್ಕಾರ ಆ ಅಧಿಕಾರವನ್ನು ನಿರ್ವಹಿಸಿಲ್ಲ. ವೀಕರ್ ಸೆಕ್ಷನ್ ಎಂದು ಹೇಳುವುದಕ್ಕೆ, ಅದು ಯಾವು ದೆಂದು ಕಂಡುಹಿಡಿಯುವುದಕ್ಕೆ ಇದ್ದ ಒಂದೇ ಒಂದು ಮಾರ್ಗ ಏಕಮಾತ್ರ ಮಾರ್ಗವೆಂದು ಹೇಳಿದರೆ ಅದು ತಪ್ಪಲ್ಲ. ಯಾವುದಿತ್ತೋ ಅದನ್ನು ತೊಡೆದುಹಾಕು ವುದಕ್ಕೆ ಪ್ರಯತ್ನ ಮಾಡಿದರು. ಈ ದಿವಸ ಸೆಕ್ಯುಲರ್ ಸ್ಟೇಟ್, ಜಾತ್ಯತೀತರಾಷ್ಟ್ರ ಎಂದು ದೊಡ್ಡ ದೊಡ್ಡ ಶಬ್ದಗಳನ್ನು ಹೇಳುತ್ತಿದ್ದಾರೆ. ಅವು ಕೇಳುವುದಕ್ಕೆ ಒಂದು ತರಹ ಕಾಣಬಹುದು. ರಷ್ಯಾ ದೇಶದವರು ಇಲ್ಲಿಗೆ ಬಂದು ಹೋದಮೇಲೆ ಜಾತ್ಯತೀತ ರಾಷ್ಟ್ರದ ನಿರ್ಮಾಣದ ಬಗ್ಗೆ ಅನಕ್ಕಿ ಹೆಚ್ಚಿದೆ. ಹತ್ತು ವರ್ಷಗಳ ರಾಜ್ಯಭಾರ, ಆಡಳಿತ ನೋಡಿದರೆ ಸೆನ್ಸಸ್ ಎಂಬುದು ಪುಸ್ತಕದಲ್ಲಿ ಮಾತ್ರ ಇದೆಯೇಹೊರತು ಕಾರ್ಯತಃ ಏನೂ ಆಗಿಲ್ಲ ಎಂದು ವಿಧಿಯಿಲ್ಲದೆ ಹೇಳಬೇಕಾಗಿದೆ. ಇವೊತ್ತು ಕೂಡ weaker section ಯಾವುದಿದೆಯೋ ಅದನ್ನು ಮುಂದೆ ತರುವುದಕ್ಕೆ ಯಾವುದಾದರೂ ಮಾರ್ಗವನ್ನು ಕಂಡು ಹಿಡಿದಿದ್ದಾರೆಯೇ ಎಂದರೆ ಇಲ್ಲ, ಇಲ್ಲ, ಇಲ್ಲ ಎಂದು ಈ ಸಭೆಯಲ್ಲಿ ಹೇಳುತ್ತೇನೆ. ಇಂಥ ಕಾರ್ಯವನ್ನು ಮಾಡುವುದಕ್ಕೆ ಮಾರ್ಗವನ್ನು ಕಂಡುಹಿಡಿಯುವುದಕ್ಕೆ ಪ್ರಯತ್ನಮಾಡಿಲ್ಲ.

Backward Class Commission ಎಂದು ನೇಮಕಮಾಡಿದರು. Weaker sections ಯಾರು ಎಂದು ಕಂಡುಹಿಡಿಯಲು ಈ ಕಮಿಷನ್ ನೇಮಕ ವಾಯಿತು. ಇದರಲ್ಲಿ ನಮ್ಮ ಮಾನ್ಯ ಹಣಕಾಸಿನ ಮಂತ್ರಿಗಳಾದ ಶ್ರೀ ಟಿ. ಮರಿಯಪ್ಪನವರು ಇದ್ದರು. ಮೈಸೂರು ದೇಶದ ಪರವಾಗಿ ನನ್ನನ್ನೂ ಅದರಲ್ಲಿ ನೇಮಿಸಿದ್ದರು. ಈ ಕಮಿಷನವರು ಕಂಡು ಹಿಡಿದದ್ದು ಏನೆಂದರೆ, ಮೈಸೂರು ದೇಶದ ಉದ್ದ ಮತ್ತು ಅಗಲ, ಅಡ್ಡಾಡಿ, ಊಟ, ತಿಂಡಿಗೆ ಎಲ್ಲೆಲ್ಲಿ ಹೋಟಲುಗಳಿವೆ ಎಂದು ಕಂಡುಹಿಡಿದರು. ಇವೊತ್ತು ಕೂಡ ಯಾವ ಜನಾಂಗದ ಸಂಖ್ಯೆ ಎಷ್ಟಿದೆ, ಅವರಲ್ಲಿ ಬಡತನವೇನಿದೆ, ಅವರ ಆದಾಯವೆಷ್ಟಿದೆ ಎಂಬುದನ್ನು

(ಶ್ರೀ ಎ. ಭೀಮಪ್ಪನಾಯಕ್)

ತಿಳಿದುಕೊಳ್ಳುವುದಕ್ಕೆ ಯಾವ ಮಾರ್ಗವೂ ಇಲ್ಲ. ಸಾಧಾರಣವಾಗಿ weaker section, weaker community ಎಂದರೆ ಆರ್ಥಿಕವಾಗಿ ಬಲಹೀನರಾದ ವರನ್ನು ಒಂದುಕಡೆ, ಸಾಮಾಜಿಕವಾಗಿ ಹಿಂದುಳಿದವರನ್ನು ಒಂದುಕಡೆ, ಆಥವ ವಿದ್ಯೆಯಿಂದ ಹಿಂದುಳಿದವರನ್ನು ಒಂದುಕಡೆ ಹೀಗೆ ವಿಭಾಗಮಾಡಿ ಇಟ್ಟಿದ್ದಾರೆಯೇ ಎಂದರೆ ಇಲ್ಲ. ಆದುದರಿಂದ ಮೊದಲು ನಾನು ಈ ಸಭೆಯ ಮೂಲಕ ಇಂಡಿಯಾ ಸರ್ಕಾರದವರಿಗೆ ಅರಿಕೆ ಮಾಡಿಕೊಳ್ಳುವುದೇನೆಂದರೆ ಸೆನ್ಸಸ್ ಮಾಡುವಾಗ ಪ್ರತಿಯೊಂದು ಜನಾಂಗವೂ ಎಷ್ಟಿದೆ ಎನ್ನುವುದನ್ನು ತಿಳಿದುಕೊಳ್ಳುವುದಕ್ಕೆ ಅವಕಾಶ ಮಾಡಬೇಕು, ಏಕೆ confusion ಮಾಡಿ ಇಡುತ್ತೀರಿ ಎಂದು ಕೇಳುತ್ತೇನೆ. ಈ ಸಭೆಯಲ್ಲಿ ಕೆಲವರು ಮಾತನಾಡುವಾಗ ಸ್ಕಾಲರ್‌ಷಿಪ್ ವಗೈರೆಗಳನ್ನು ಹಂಚುವಾಗ ಆಯಾ ಜಾತಿಗಳನ್ನು ಲೆಕ್ಕಕ್ಕೆ ತೆಗೆದುಕೊಂಡು ಹಿಂದುಳಿದವರಿಗೆ ಮತ್ತು ಇತರರಿಗೆ ಇಷ್ಟಿಷ್ಟು ಎಂದು ಗೊತ್ತುಮಾಡಬೇಕು ಎಂದು ಹೇಳಿದರು. ಹಾಗೆ ಮಾಡಲು ಲೆಕ್ಕಗಳೇ ಸಿಕ್ಕದ ಹಾಗೆ ಆಗಿದೆ. ಯಾವಯಾವ ಜನಾಂಗ ಎಷ್ಟಿದೆ ಎಂಬುದನ್ನು ತಿಳಿಯಬೇಕಾದರೆ 1941ನೆ ಇಸವಿಯಿಂದ ಹಿಂದಕ್ಕೆಹೋಗಿ ಆಗ ಯಾವ ಯಾವ ಜನಾಂಗ ಎಷ್ಟೆಷ್ಟಿತ್ತು ಎಂಬುದರ ಲೆಕ್ಕವನ್ನು ತೆಗೆದುಕೊಂಡು ಅದನ್ನು ಶೇಕಡ ಹತ್ತರಿಂದ ಗುಣಿಸಿ, ಅದನ್ನು ಜನಸಂಖ್ಯೆಗೆ ಕೂಡಿಸಿ ಹೀಗೆ ಲೆಕ್ಕಾಚಾರ ಹಾಕಬೇಕು. ಈ ರೀತಿ ಮಾಡುವುದಕ್ಕೆ ನಾನು ಯೂನಿವರ್ಸಿಟಿ ಕೌನ್ಸಿಲ್ಲಿನಲ್ಲಿದ್ದಾಗ ಪ್ರಯತ್ನಮಾಡಿದರೆ ಬಳ್ಳಾರಿ ಜಿಲ್ಲೆಯಲ್ಲಿ ಯಾವ ಯಾವ ಜನಾಂಗ ಎಷ್ಟೆಷ್ಟಿದೆ ಎಂಬುದು ತಿಳಿಯಲೇ ಇಲ್ಲ. ಅಲ್ಲಿ ಆ ರೀತಿಯ ಗಣನೆಯನ್ನು ತೆಗೆದುಕೊಂಡಿಲ್ಲವೆಂದು ಕಾಣುತ್ತದೆ. ಅದೇರೀತಿ ಈಚೆಗೆ ಸೇರಿರತಕ್ಕಂಥ ಪ್ರತಿಯೊಂದು ಭಾಗವನ್ನು ತೆಗೆದುಕೊಂಡರೂ ಕೂಡ ಯಾವ ಜನಾಂಗದ ವಿಚಾರದಲ್ಲಯೇ ಆಗಲಿ ಇಷ್ಟೇ ಜನಸಂಖ್ಯೆ ಇದೆ ಎಂದು ಹೇಳುವುದಕ್ಕೆ ಮಾರ್ಗವಿಲ್ಲ. ದೊಡ್ಡ ದೊಡ್ಡ ಶಬ್ದಗಳನ್ನು ಉಪಯೋಗಿಸಿ ನಮ್ಮ ದೇಶದಲ್ಲಿ ಜಾತ್ಯತೀತ ರಾಷ್ಟ್ರವನ್ನು ಮಾಡಿದ್ದೇವೆ ಎಂದು ರಾಜ್ಯಾಂಗದಲ್ಲಿ ಬರೆಯುವುದಕ್ಕೆ ಬದಲಾಗಿ ಕಾರ್ಯರೂಪಕ್ಕೆ ತಂದರೆ ಅದನ್ನು ಸರ್ಕಾರವೆಂದು ನಾನು ಕರೆಯುತ್ತೇನೆ. ಇದು ನಾನು ಇವೊತ್ತು ಬಹಳ ವ್ಯಥೆಯಿಂದ ಹೇಳತಕ್ಕ ಮಾತು. ಮೈಸೂರು ಸರ್ಕಾರದಲ್ಲಿ ಹಿಂದೆ ಎಷ್ಟು information ಇತ್ತೋ ಅದುಕೂಡ ಬರುತ್ತ ಬರುತ್ತ ಕಡಮೆಯಾಗುತ್ತಿದೆ ಎಂದು ಹೇಳಬೇಕಾಗಿದೆ. ಅದು ಮೈಸೂರು ಸರ್ಕಾರದವರ ಅಲಕ್ಷ್ಯದಿಂದ ಆಗಿಲ್ಲ. ಇಂಡಿಯಾ ಸರ್ಕಾರದವರು ಸೆನ್ಸಸ್‌ನಲ್ಲಿ ಜನಗಣನೆ ಮಾಡುವಾಗ ಪ್ರತಿಯೊಂದು ಜನಾಂಗದ ಸಂಖ್ಯೆಯನ್ನೂ ತೆಗೆದುಕೊಳ್ಳದೆ ಇರುವುದರ ಫಲವಾಗಿ ವಿವರಗಳು ದೊರೆಯುತ್ತಿಲ್ಲವೆಂಬುದು ಎಲ್ಲರಿಗೂ ಗೊತ್ತಿದೆ. ನಾನು ಜನಾಂಗಗಳು ಎನ್ನುವಾಗ ಜಾತಿಗಳು ಎನ್ನುವಅರ್ಥದಲ್ಲಿ ಉಪಯೋಗಿಸುತ್ತೇನೆ, ಜನಾಂಗ ಎಂದು ಹೇಳುವಾಗ ಜಾತಿ ಎನ್ನುವುದು ಇಂಡಿಯಾ ದೇಶದಲ್ಲಿಮಾತ್ರವಾಗಿದೆ ಎಂದು ತಿಳಿದುಕೊಳ್ಳಬೇಕು. ಶ್ರೀ ರಾಚಯ್ಯನವರು Scheduled Castes ಮತ್ತು Scheduled Tribes, ಇವರಿಗೆ ಇರತಕ್ಕ ಅನಾನುಕೂಲಗಳಲ್ಲಿ ಕೆಲವನ್ನು ಹೇಳುತ್ತಾ ಹೋದರು. ಆಗ ಮೈಯಕ್ತಿಕವಾಗಿ ಕೆಲವು ಟೀಕೆಗಳನ್ನು ಮಾಡಿದರು. ನಾನು ಅದಕ್ಕೆ ಹೋಗುವುದಿಲ್ಲ. ಇವೊತ್ತು ಪ್ರತಿಯೊಂದು ಜಾತಿಯಲ್ಲಿಯೂ ಬಡವರಿದ್ದಾರೆ. ಅದನ್ನು ಲೆಕ್ಕಕ್ಕೆ ತೆಗೆದುಕೊಳ್ಳುವುದಿಲ್ಲ. ಮೈಸೂರಿನಲ್ಲಿ ಕೆಲವರನ್ನು forward class ಎಂದೂ ಉಳಿದವರನ್ನು backward class ಎಂದೂ ಕರೆಯುತ್ತಾರೆ. ಅವರು ಏನು ಪಾಪ ಮಾಡಿದರೋ ಏನೋ, ಅವರನ್ನು ಸಂಸ್ಥಾನದಲ್ಲಿ forward class ಎಂದು ಕರೆಯುತ್ತಿರುವುದು ಅಭ್ಯಾಸವಾಗಿದೆ. ಅವರಿಗೆ ಎಲ್ಲಕಡೆಯೂ ತೊಂದರೆಗಳನ್ನು ಕೊಡುತ್ತಿದ್ದಾರೆ. ನೌಕರಿಗಳಲ್ಲಿ chance ಬಂದರೆ ಬಂತು, ಇಲ್ಲದೆ ಇದ್ದರೆ ಇಲ್ಲ. ಬ್ರಾಹ್ಮಣರಲ್ಲಿ ಬಡವರಿಲ್ಲವೇ? ಅವರಲ್ಲಿ ಆರ್ಥಿಕ ದೃಷ್ಟಿಯಿಂದ ಮತ್ತೊಂದು ದೃಷ್ಟಿಯಿಂದ ಹಿಂದುಳಿದವರಿಲ್ಲವೇ? ಏನೂ ಮಾರ್ಗವಿಲ್ಲದೆ ಇರುವವರಿಲ್ಲವೇ? ಇಂಥವರ ಲೆಕ್ಕವನ್ನು ಕಂಡುಹಿಡಿದು weaker section ಯಾರಿದ್ದಾರೆ ಅವರಿಗೆ ಸರ್ಕಾರ ಅನುಕೂಲಗಳನ್ನು ಕಲ್ಪಿಸಬೇಕು. ಆರೀತಿ ಮಾಡದೆ ಸಾರ್ವತ್ರಿಕವಾಗಿ ಇಂಡಿಯಾ ದೇಶದ ಅಭಿವೃದ್ಧಿಗೆ ಏನು ಬೇಕೋ ಅದನ್ನು ಮಾಡುತ್ತೇವೆನ್ನುವುದು ಬೇರೆ ಮಾತು. ಈಗ ಕಣ್ಣಿಗೆ ಕಂಡಹಾಗೆ ಹರಿಜನರಿದ್ದಾರೆ. ಅವರು ಬಹಳ ಬಡವರು. ಅವರ ಬಡತನ ಎಷ್ಟು ಕೆಳಗೆ ಇದೆ ಎಂದು ಕಂಡುಹಿಡಿದು, ಅವರ ಅಭಿವೃದ್ಧಿಗೋಸ್ಕರ ಏರ್ಪಾಡು ಮಾಡಬೇಕು. ಇದೇರೀತಿ ಇನ್ನೂ ಕೆಲವು ಸಂಖ್ಯಾತರು ಇದ್ದಾರೆ. ಅವರ ಅಭಿವೃದ್ಧಿಯ ಕಡೆಗೂ ಸರ್ಕಾರದವರು ಲಕ್ಷ್ಯ ಕೊಡಬೇಕು. ರಾಜಕೀಯದಲ್ಲಿ, ನೌಕರಿಯ ಯಾವ ಸ್ಥಾನದಲ್ಲಯೇ ಆಗಲೀ, ಆರ್ಥಿಕವ್ಯವಸ್ಥೆಯಲ್ಲಿ, ಭೂ ವ್ಯವಸ್ಥೆಯಲ್ಲಿ, ಯಾವುದರಲ್ಲಯೇ ತೆಗೆದುಕೊಂಡರೂ ಜಾತೀಯತೆ ಎದ್ದು ಕಾಣುತ್ತದೆ. ಜಾತಿಯೊಂದೇ ಇಂಡಿಯಾ ದೇಶವನ್ನು ಆಳುತ್ತಿರುವುದು. ಇದರಲ್ಲಿ ಅನುಮಾನವಿಲ್ಲದೆ ನಿರ್ದಿಷ್ಟವಾಗಿ ಹೇಳುತ್ತೇನೆ. ಇವೊತ್ತು ನಮ್ಮ ದೇಶದಲ್ಲಿ ಪ್ರಜಾನತ್ತಾತ್ಮಕ ರೀತಿಯಲ್ಲಿ ಆಡಳಿತ ನಡೆಯುತ್ತಿಲ್ಲ. ಕೆಲವು ಭಾಗಗಳಲ್ಲಿ ಪ್ರಾತಿನಿಧ್ಯವು ಜಾತೀಯತೆಯ ಮೇಲೆ ಇದೆ. ಅಲ್ಪ ಸಂಖ್ಯಾತರನ್ನುವವರ ಲೆಕ್ಕ ತೆಗೆದುಕೊಂಡರೆ, ಹಿಂದುಳಿದವರ ಲೆಕ್ಕ ತೆಗೆದುಕೊಂಡರೆ ನೂರಕ್ಕೆ ಅರವತ್ತೈದು ಜನ ಇದ್ದಾರೆ. ಯಾರು ಬಹುಸಂಖ್ಯಾತರಿದ್ದಾರೆಯೋ ಅವರೆಲ್ಲರನ್ನೂ ಒಟ್ಟು ಸೇರಿಸಿದರೆ ಅವರು ಶೇಕಡ 40-45 ರಷ್ಟಾದರೆ ಶೇಕಡ 55-60 ರಷ್ಟು ಅಲ್ಪ ಸಂಖ್ಯಾತರು ಸಿಕ್ಕುತ್ತಾರೆ. ಇವರಿಗೆಲ್ಲ ಪ್ರಾತಿನಿಧ್ಯ ಎಷ್ಟೆಷ್ಟಿದೆ ಎಂದು ನೋಡಿ ಸರಿಯಾದ ಪ್ರಾತಿನಿಧ್ಯ ಕೊಟ್ಟಿಲ್ಲ. ಮಂತ್ರಿಮಂಡಲಕ್ಕೆ ಚುನಾಯಿಸುವಾಗ ಜಾತೀಯತೆ ಇಲ್ಲದೆ ಮಾಡಿಲ್ಲ, ಬೇರೆ ಯಾವುದಕ್ಕೆ ನೇಮಕಮಾಡುವಾಗಲೂ ಜಾತೀಯತೆ ಇಲ್ಲದೆ ಮಾಡಿಲ್ಲ. ಆದರೆ ಬಾಯಲ್ಲಿ ಮಾತ್ರ ನಮ್ಮಲ್ಲಿ ಜಾತೀಯತೆ ಇಲ್ಲ, ಇಲ್ಲ, ಎಂದು ಹೇಳುತ್ತಾರೆ. ಹಾಗೆ ದಕ್ಷತೆಯಿಂದ ಮಾಡುವುದಾದರೆ ಅನೇಕರಿಗೆ ಮಂತ್ರಿಮಂಡಲದ ಬಾಗಿಲಿನಲ್ಲಿ ಕೂಡ ಜಾಗವಿರುತ್ತಿರಲಿಲ್ಲ. ಆದರೆ ಜಾತೀಯತೆಯ ಆಧಾರದ ಮೇಲೆ ಪ್ರಾತಿನಿಧ್ಯವನ್ನು ಕೊಡದೆ ಇದ್ದರೆ ಆ ಜನರೆಲ್ಲ ಮೇಲೆ ಬಿದ್ದರೆ ಏನು ಮಾಡಬೇಕು! ಹೀಗಾಗಿ ಒಳಗೆ ಜಾತೀಯತೆ ಇದ್ದು ಹೊರಗೆ ಜಾತ್ಯತೀತರಾಷ್ಟ್ರವೆಂದು ಹೇಳುತ್ತಿದ್ದಾರೆ. ಇಂಥದನ್ನು ಎಷ್ಟು ಜಾಗ್ರತೆ ಸರ್ಕಾರದವರು ಕೈಬಿಡುತ್ತಾರೆಯೋ ಅಷ್ಟು ಜಾಗ್ರತೆ ದೇಶ ಉದ್ಧಾರವಾಗುತ್ತದೆ. ತಕ್ಕಡಿ ಏರು ಪೇರು ಆಗುವುದಿಲ್ಲ.

ಕೆಲವೊ ಜನಾಂಗಗಳಲ್ಲಿ, ಕೋಟ್ಯಾಧೀಶರಿದ್ದಾರೆ. ಅವರ ಜನಾಂಗ ಮತ್ತು ಇನ್ನೊಂದು ಜನಾಂಗ ಇವುಗಳ ಆರ್ಥಿಕ ಮಟ್ಟವನ್ನು ತೆಗೆದುಕೊಂಡರೆ, ಒಂದು ಜನಾಂಗದವರಲ್ಲಿ ಒಂದು ಕಾನು ಇದ್ದರೆ ಇನ್ನೊಂದು ಜನಾಂಗದಲ್ಲಿ ಒಂದು ರೂಪಾಯಿ ಇದೆ.

ಅವರಿಗೂ ಸಹ ಇವೊತ್ತು backward class scholarship ಮುಂತಾದುವು ಹಂಚಿಕೆಯಾಗುತ್ತಿವೆ. ಹೀಗಾದರೆ ಇತರರು ಹೇಗೆ ಅಭಿವೃದ್ಧಿಗೆ ಬರುತ್ತಾರೆ? ಬೊಂಬಾಯಿ ಪ್ರಾಂತದಲ್ಲಿ ಇವೊತ್ತು ಒಂದು ರೀತಿ ವರ್ಗಗಳನ್ನು ವಿಂಗಡಿಸಿದ್ದಾರೆ. Extremely backward class, backward class and forward class ಎಂದು ಮಾಡಿದ್ದಾರೆ. ನೀವು ಆರ್ಥಿಕವಾಗಿ ಮುಂದೆ ಇದ್ದೀರಿ, ನಿಮಗೆ ಸರ್ಕಾರದವರು ನಾಳೆ ಏನು ಕೊಡುವುದು, ಬೇಡ, ಬಾಕಿಯವರಿಗೇ ಕೊಡಲಿ ಎನ್ನುವ ಮಾತು ಅಲ್ಲ.

ಹೀಗೆಯೇ ಪಬ್ಲಿಕ್‌ಸರ್ವಿಸ್ ಕಮಿಷನ್‌ನವರು ಇವೊತ್ತು ಅನೇಕರಿಗೆ ನೌಕರಿಕೊಡುತ್ತಿದ್ದಾರೆ. ನಾಳೆಯ ದಿನ ಪ್ರಕಟಣೆಯಾಗುವ ಲಿಸ್ಟನ್ನು ನೋಡಿದರೆ weaker sections ಎನ್ನುವವರಲ್ಲಿ ಎಷ್ಟುಜನರ ಹೆಸರು ಅದರಲ್ಲಿದೆ, backward ಆಗಿರುವವರಲ್ಲಿ ಎಷ್ಟು ಜನರ ಹೆಸರು ಅದರಲ್ಲಿದೆ ಎಂದು ತಿಳಿಯುತ್ತದೆ. ಇದು ನಮ್ಮ ದುರದೃಷ್ಟವೆಂದು ಹೇಳುತ್ತೇನೆ. ನಮ್ಮ ಪರವಾಗಿ ಒಬ್ಬರು ಸರ್ಕಾರದಲ್ಲಿ ಇದ್ದಿದ್ದರೆ ಹೀಗೆ ಆಗುತ್ತಿತ್ತೇ ಎಂದು ಕೇಳುತ್ತೇನೆ. ಹಿಂದುಳಿದ ಮತ್ತು ಅಲ್ಪಸಂಖ್ಯಾತವರ್ಗದವರಿಗೆ ಪ್ರಾತಿನಿಧ್ಯ ಸರಿಯಾಗಿಲ್ಲ,ಅವರಿಗೆ ಮಂತ್ರಿಮಂಡಲದಲ್ಲಿ ಸ್ಥಾನವಿಲ್ಲ, ಕಮಿಟಿಗಳಲ್ಲಿ ಜಾಗವಿಲ್ಲ. ಪ್ರಾತಿನಿಧ್ಯವಿಲ್ಲದೆ ಇದ್ದರೆ ಬೇಡ, ಹಿಂದುಳಿದವರ ಆರ್ಥಿಕ ಪುನರ್ವ್ಯವಸ್ಥೆಯನ್ನು ಏನಾದರೂ ಮಾಡಿದ್ದಾರೆಯೇ, weaker sections ಗೆ ಏನಾದರೂ ಮಾಡಿದ್ದಾರೆಯೇ, ಎಂದರೆ ಏನೂ ಮಾಡಿಲ್ಲ. ಬ್ಯಾಕ್‌ವರ್ಡ್ ಕ್ಲಾಸಿಗೆ ಸಂಬಂಧಪಟ್ಟ ಪೋರ್ಟ್‌ಫೋಲಿಯೋಗೆ ಶ್ರೀ ಚೆನ್ನಿಗರಾಮಯ್ಯನವರನ್ನು ಅಥವ ಶ್ರೀ ಮರಿಯಪ್ಪನವರನ್ನು ಮಂತ್ರಿಗಳಾಗಿ ಮಾಡಿದ್ದಾರೆಂದು ಕಾಣಿಸುತ್ತದೆ. Backward class ನವರಿಗೆ ಒಂದು ಆಣೆಯನ್ನು ಖರ್ಚು ಮಾಡಿದ್ದೇವೆಂದು ಇವರು ಹೇಳಿದರೆ I will bow my head. ಬೆಂಗಳೂರು ಮತ್ತು ಮೈಸೂರಿನಲ್ಲಿ backward class hostels ಮಾಡಿದ್ದಾರೆ. ಅಲ್ಲಿ ಫ್ರೀ ಬೋರ್ಡಿಂಗಿಗೆ ಏರ್ಪಾಡು ಮಾಡಿದ್ದಾರೆಯೇ ಎಂದರೆ ಇಲ್ಲ. ಬೆಂಗಳೂರಿನಲ್ಲಿ ಒಂದು ಮತ್ತು ಮೈಸೂರಿನಲ್ಲಿ ಒಂದು—ಹೀಗೆ ಎರಡು ಸರ್ಕಾರಿ ಹಾಸ್ಟಲುಗಳಿವೆ ಎಂದ ಮಾತ್ರಕ್ಕೆ backward class ನವರ ಉದ್ಧಾರವಾಗುತ್ತದೆಂದು ತಿಳಿದು

5 P.M.

ಕೊಂಡಿದ್ದೀರಾ? ಹಿಂದುಳಿದ ಜನಾಂಗಗಳ ಆರ್ಥಿಕ, ಸಾಮಾಜಿಕ ಮತ್ತು ಶೈಕ್ಷಣಿಕ ಅಭಿವೃದ್ಧಿಗೋಸ್ಕರ ಏನು ಆಲೋಚನೆಮಾಡಿದ್ದೀರಿ? ಇವತ್ತಿನವರೆಗೆ ಕಮಿಟಿ ಮಗ್ಯೆರೆ ಮಾಡಿದ್ದೀರಾ? ಏನೂ ಇಲ್ಲ. ಬ್ಯಾಕ್‌ವರ್ಡ್ ಕ್ಲಾಸಸ್ ಕಮಿಷನ್ ಥೇರ್‌ಮನ್ನರು ಹೊರಗಡೆ ಕಣ್ಣೀರು ಹಾಕಿದವರು ಒಳಗಡೆ ಸಿಂಪತಿ ತೋರಿಸಲಿಲ್ಲವೆಂದು ಈ ಸಭೆಯಲ್ಲಿ ವಿಧಿ ಇಲ್ಲದೆ ಹೇಳಬೇಕಾಗಿದೆ. ಶ್ರೀ ಕಾಕಾ ಕಾಳೇಲ್ಕರ್ ಅವರನ್ನು ಆ ಕಮಿಟಿಯ ಅಧ್ಯಕ್ಷರಾಗಿ ನೇಮಿಸಿದರು. ಆಗ ಗಾಂಧಿಯವರು ಹೋದಮೇಲೆ ಉಳಿದಿರುವ ನತ್ಯ ವಂತರು ಇವರೊಬ್ಬರೇ, ಇಂದವರಿಂದಲೇ ಹಿಂದುಳಿದ ವರ್ಗಗಳ ಉದ್ಧಾರವಾಗಬೇಕು ಎಂದು ಶ್ರೀ ಮರಿಯಪ್ಪನವರು ಹೇಳಿದರು. ನಾನು ಈ ಮಹಾತ್ಮರಿಗೆ ಉದ್ದಕ್ಕೆ ನಮಸ್ಕಾರ ಮಾಡಿದೆ, ಅಡ್ಡಬಿದ್ದೆ. ಇದನ್ನೆಲ್ಲಾ ಈ ಸಭೆಯಲ್ಲಿ ಹೇಳಬೇಕಾಗಿದೆ. ಏಕೆಂದರೆ ಕೊನೆಗೆ ಅವರ ರಿಪೋರ್ಟನ್ನು ನೋಡಿದಾಗ ನನಗನ್ನಿಸಿತು: ಅವರಿಗೆ ಕಣ್ಣೀರೇ ನಿಜವಾಗಿ ಬಂದಿತೋ ಅಥವಾ ಕಣ್ಣಿಗೆ ನೀರು ಹಚ್ಚಿಕೊಂಡರೋ I sympathise with you, what a terrible position is this ಎಂದು ಹೇಳಿದರು. ಶ್ರೀ ಮರಿಯಪ್ಪನವರು ಬರೆದ ವರದಿಗೆ ಸಹಿ ಹಾಕಬೇಡಿ ಎಂದು ಅಧ್ಯಕ್ಷರೇ ಪ್ರಚಾರ ಆರಂಭಿಸಿದರು. ಅವರೇ ಥೇರ್‌ಮನ್ನರಾಗಿ ನೋಟ್ ಆಫ್ ಡಿಸೆಂಟ್ ಬರೆದರು, ಈ ರೀತಿ ಅಪಘಾತ ಮಾಡುವ ಥೇರ್‌ಮನ್ನರಿದ್ದರೆ ಹಿಂದುಳಿದ ವರ್ಗಗಳಿಗೆ ಏನು ಉಪಯೋಗವಾದೀತು? ಬಲಹೀನ ವರ್ಗಗಳನ್ನು ಹೀಗೆಯೇ ಕೈಬಿಟ್ಟರೆ ಒಂದಾನೊಂದು ದಿವಸ ಕ್ರಾಂತಿಯಾಗುತ್ತದೆ. ಮುಂದೆ ಇದರ ಫಲಾಫಲಗಳು ಏನಾಗುತ್ತವೆ ಎಂಬುದನ್ನು ಬೇರೆಯವರು ಆಲೋಚನೆ ಮಾಡಬೇಕು, ಎಂದು ಈ ಸಭೆಯ ಮೂಲಕ ಇಂಡಿಯಾ ಸರ್ಕಾರಕ್ಕೆ ಹೇಳುತ್ತೇನೆ. ಮೈಸೂರಿಗೆ ಏನು ಮಾಡುವ ಶಕ್ತಿ ಇದೆ. ಪಾಪ! ಯೋಚನೆಮಾಡುವ ಶಕ್ತಿ ಸಹಿತ ಇದೆಯೆಂದು ಹೇಳುವ ಹಾಗಿಲ್ಲ. ಬ್ಯಾಕ್‌ವರ್ಡ್ ಕ್ಲಾಸಸ್ ಕಮಿಷನ್ನಿನ ವರದಿಯನ್ನು ಜಾರಿಗೆ ತನ್ನಿ ಎಂದು ಇಂಡಿಯಾ ಸರ್ಕಾರದವರಿಗೆ ಹೇಳಲಿಲ್ಲ. ನನ್ನ ಮಿತ್ರರಾದ ಶ್ರೀ ಮರಿಯಪ್ಪನವರಿಗೆ ವಿಷಯ ಚೆನ್ನಾಗಿ ಗೊತ್ತಿದೆ. ನಾನು ಅವರಿಗೆ ಒಂದು ಅಪೀಲು ಮಾಡುತ್ತೇನೆ. ಕಮಿಷನ್ನಿನಲ್ಲಿ ಏನೇನು ಶಿಫಾರಸುಗಳನ್ನು ಮಾಡಿದ್ದರು ಎನ್ನುವುದನ್ನು ಈ ಸಭೆಗೆ ತಿಳಿಸಬೇಕು. ಹಿಂದುಳಿದ ಜನಾಂಗಗಳ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಯಾಗಬೇಕಾದರೆ, ನೀವು ಒಂದು ಸಮಿತಿಯನ್ನು ರಚಿಸಿ, ಅವರಿಂದ ಸಲಹೆ ಪಡೆಯಿರಿ. ಶ್ರೀ ಕಾಕಾ ಕಾಳೇಲ್ಕರ್ ಅಧ್ಯಕ್ಷತೆಯಲ್ಲಿ ಮಾಡಿದಂಥ ಸಮಿತಿಯಲ್ಲ; ನಿಜವಾಗಿಯೂ ಬಲಹೀನವರ್ಗದವರ ಸೇವೆ ಮಾಡುವ ಸಮಿತಿ ನೇಮಕಮಾಡಿ. ಆ ಸಮಿತಿಯವರು ದೇಶವನ್ನು ಸುತ್ತಿ, ಹಿಂದುಳಿದ ಪಂಗಡಗಳ ಸ್ಥಿತಿಯನ್ನು ತಿಳಿದುಕೊಂಡು, ಒಂದು ನಿರ್ದಿಷ್ಟವಾದ ಕಾಲದಲ್ಲಿ ವರದಿಯನ್ನು ಕೊಡಲಿ. ಅದನ್ನು ಸರ್ಕಾರ ಕಾರ್ಯರೂಪಕ್ಕೆ ತರಲಿ. ನಮ್ಮ ಮೈಸೂರು ದೇಶದ ಆದಾಯದಲ್ಲಿ ಶೇಕಡ 50ರಷ್ಟು ಯಾವ ಹಿಂದುಳಿದ ವರ್ಗದವರು (Weaker Sectionನವರು) ಕೊಡುತ್ತಿದ್ದಾರೋ ಅವರಿಗಾಗಿ ಅದನ್ನು ಉಪಯೋಗಿಸಿದರೆ ಇವರ ಉದ್ಧಾರವಾದರೂ ಆಗುತ್ತದೆಂದೇ ನನ್ನ ಭಾವನೆ. ಒಂದು ಕಮಿಟಿ ಮಾಡಿ. ಆ ಕಮಿಟಿ ಅಂಕಿ ಅಂಶಗಳನ್ನು ತರಿಸಿಕೊಂಡು ವೀಕರ್ ಸೆಕ್ಷನ್ಸ್ ಯಾವುವು ಎನ್ನುವುದನ್ನು ನಿರ್ಧಾರಮಾಡಿ, ನಮ್ಮ ಮುಂದಿಡಲಿ. ಹೀಗೆ ಮಾಡದೆ, ಇನ್ಯಾವ ತರಹ ಮಾಡಿದರೂ ಅದರಿಂದ ಏನೂ ಪ್ರಯೋಜನವಾಗುವುದಿಲ್ಲ. Weak section, weaker section, weakest section ಯಾವುವು ಎನ್ನುವುದನ್ನು ಪರೀಕ್ಷಿಸಬೇಕು. ಸಮಾಜದಲ್ಲಿ ಬಹಳ ಬಲಹೀನರಾದವರೂ ದೀನದಲಿತರೂ ಇದ್ದಾರೆ. ಅಲ್ಪಸಂಖ್ಯಾತರಾದವರು ಬಹಳ ಜನಾಂಗದವರು ಇದ್ದಾರೆ. ಇವರನ್ನು ನೀವು ಅನಸ್ಥೆಯಿಂದ ಕಾಣುತ್ತಿದ್ದೀರಿ. ಅನೇಕ ಕಮಿಟಿ ಮುಂತಾದುವುಗಳನ್ನು ರಚಿಸುವಾಗ ಇವರಿಗೆ ಸಾಕಷ್ಟು ಪ್ರಾತಿನಿಧ್ಯವಿಲ್ಲ. ಏನಾದರೂ ಮಾಡಿದಾಗ ನಿಮಗೆ ಮೊದಲು ಕಣ್ಣಿಗೆ ಬೀಳುವುದು ಕೆಲವು ಜಾತಿಗಳು ಮಾತ್ರ. ಹೀಗಾಗಬಾರದು. ಅಪಘಾತವಾಗುತ್ತದೆ. ಈ ಸಂದರ್ಭದಲ್ಲೇ ಅವರವರೇ ಆತ್ಮಪರಿಶೋಧನೆ ಮಾಡಿಕೊಳ್ಳಲಿ ಎಂದು ಹೇಳುತ್ತೇನೆ. ವೀಕರ್ ಸೆಕ್ಷನ್ ಯಾರು ಎಂದು ನಿರ್ದಿಷ್ಟಪಡಿಸಿಕೊಳ್ಳುವುದು ತಪ್ಪಾಗುವುದಿಲ್ಲ.

ಶ್ರೀ ಡಿ. ದೇವರಾಜ ಅರಸ್.—ಮೈಸೂರಿನಲ್ಲಿ ಫಾರ್ವರ್ಡ್ ಸೆಕ್ಷನ್ ಎಂದರೆ ಬ್ರಾಹ್ಮಣ ಜನತೆ. ಅವರನ್ನು ಬಿಟ್ಟು ಬಾಕಿಯವರೆಲ್ಲರೂ ಬ್ಯಾಕ್‌ವರ್ಡ್

(ಶ್ರೀ ಡಿ. ದೇವರಾಜ ಅರಸ್)

ವೀಕ್; ವೀಕರ್, ವೀಕೆಸ್ಟ್ ಸೆಕ್ಷನ್, ಕಂಡುಹಿಡಿಯ ಬೇಕಾದರೆ, ಜಾತಿಯ ಆಧಾರಬೇಕು. ಬ್ರಾಹ್ಮಣೇ ತರರೆಲ್ಲರೂ ವೀಕರ್ ಸೆಕ್ಷನ್ನೇ. ಹೊಸದಾಗಿ ಕಂಡು ಹಿಡಿಯುವ ಅವಶ್ಯಕತೆ ಇಲ್ಲ. ಸ್ಟ್ರಾಂಗರ್ ಸೆಕ್ಷನ್ ಮತ್ತು ವೀಕರ್ ಸೆಕ್ಷನ್ ಎಂದು ಹೇಳುವುದಕ್ಕೆ ನಿಮ್ಮ ಅಭಿಪ್ರಾಯದಲ್ಲಿ ಏನಾದರೂ ಒಂದು ಎಕನಾಮಿಕ್ ಬೇಸಿಸ್ ಇದ್ದರೆ ಅದನ್ನು ಸ್ಪಷ್ಟಪಡಿಸ ಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎ. ಭೀಮಪ್ಪನಾಯಕ್.—ಬ್ರಾಹ್ಮಣರನ್ನು ಬಿಟ್ಟರೆ, ಬಾಕಿಯವರೆಲ್ಲಾ ವೀಕರ್ ಸೆಕ್ಷನ್ ಎಂದು ಹೇಳುತ್ತಾರೆ. ನಾನು ಅದನ್ನು ಒಪ್ಪುವುದಿಲ್ಲ, ಬೊಂಬಾಯಿಯಲ್ಲಿ ಬಾಕಿಯವರೆಲ್ಲಾ ವೀಕರ್ ಸೆಕ್ಷನ್ ಎಂದು ಭಾವಿಸುವುದಿಲ್ಲ. ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಯಾವ ಯಾವ ಜಾತಿ ಎಷ್ಟು ಮುಂದೆ ಬಂದಿದೆ ಎಂಬುದನ್ನು ನೋಡಬೇಕು. ಪ್ರತಿಯೊಂದು ಜಾತಿಯಲ್ಲಿಯೂ ಪರ್‌ಸೆಂಟೇಜ್ ಆಫ್ ಲಿಟರೆಸಿ ಎಷ್ಟಿದೆ ಎನ್ನುವುದನ್ನು ನೋಡಬೇಕು. ಇದರ ಜೊತೆಗೆ ಪರ್ ಸೆಂಟೇಜ್ ಆಫ್ ಸೋಷಿಯಲ್ ಕಾಂಟ್ಯಾಕ್ಟ್ ಎಷ್ಟರ ಮಟ್ಟಿಗಿದೆ, ವ್ಯವಹಾರಿಕವಾಗಿ ಯಾವ ಯಾವ ಜಾತಿ ಎಷ್ಟರಮಟ್ಟಿಗೆ ಮುಂದೆ ಬಂದಿದೆ ಎಂಬುದನ್ನು ನೋಡಬೇಕು. ಆರ್ಥಿಕದೃಷ್ಟಿಯಲ್ಲಿ ಯಾರ ಯಾರ ಸ್ಥಾನಮಾನ ಏನೆಂಬುದನ್ನು ಅರಿಯಬೇಕು. ಎರಡು ಮೂರನೆಯ ಅಂಶಗಳಿದ್ದರೆ ಒಂದು ತರಹ, ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದುಳಿದಿದ್ದರೆ ಇನ್ನೊಂದು ತರಹ, ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಹಾಗೂ ವ್ಯವಹಾರಿಕ ಎಲ್ಲಾ ಅಂಶಗಳನ್ನು ತೆಗೆದುಕೊಂಡರೆ ಮತ್ತೊಂದು ತರಹ ಈ ರೀತಿ ಈ ಬಲಹೀನ ವರ್ಗಗಳಾವುವು ಎಂದು ತೀರ್ಮಾನಿಸಬೇಕು. ಹೀಗೆ ಎರಡು ಮೂರು ದೃಷ್ಟಿ ಇಟ್ಟುಕೊಂಡು ಯಾರು ವೀಕರ್ ಸೆಕ್ಷನ್ ಎನ್ನುವುದನ್ನು ಅಳೆಯುವುದಕ್ಕೆ ಸಾಧ್ಯ ಎನ್ನುವುದನ್ನು ಹೇಳುತ್ತಿದ್ದೇನೆ. ಒಂದು ರೂಲ್ ಆಫ್ ಲಾ ಕೊಟ್ಟು, ಅದನ್ನೇ ನೋಡಬೇಕು, ನಥಿಂಗ್ ಎಲ್ಸ್ ಎಂದು ಹೇಳುವುದಕ್ಕಾಗುವುದಿಲ್ಲ. ಒಂದು ಸಮಿತಿಯನ್ನು ನೇಮಿಸಿ ಅದಕ್ಕೆ ಸರಿಯಾದ ಟರ್ಮ್ಸ್ ಆಫ್ ರೆಫರೆನ್ಸ್ ಎನ್ಯುಮರೇಟ್, ಆ ಸಮಿತಿ ಜನತೆಯನ್ನು ಕೇಳಿ ಯಾವುದು ವೀಕರ್ ಸೆಕ್ಷನ್ ಎಂದು ತಿಳಿದುಕೊಂಡರೆ, ಆಗ ಬಲಹೀನವರ್ಗಗಳು ಯಾವುವು ಎಂಬುದನ್ನು ತೀರ್ಮಾನಿಸಲು ಸಾಧ್ಯ. ಇದರ ಜೊತೆಗೆ ಬ್ಯಾಕ್‌ವರ್ಡ್ ಕ್ಲಾಸಸ್ ಕಮಿಷನ್‌ನಲ್ಲಿ ಇನ್ನೂ ಏನನ್ನೂ ಮಾಡದೇಯಿದ್ದರೂ ಶ್ರೀ ಮರಿಯಪ್ಪನವರಂಥವರು ಯಾವ ಯಾವ ಸಂಸ್ಥಾನದಲ್ಲಿ ಯಾರು ಯಾರು ಹಿಂದುಳಿದಿದ್ದಾರೆ, ವಿದ್ಯಾಭ್ಯಾಸದಲ್ಲಿ ಯಾರು ಯಾರು ಹಿಂದುಳಿದಿದ್ದಾರೆ, ಸಾಮಾಜಿಕವಾಗಿ ಯಾರು ಯಾರು ಹಿಂದುಳಿದಿದ್ದಾರೆ, ಆರ್ಥಿಕವಾಗಿ ಯಾರು ಯಾರು ಹಿಂದುಳಿದಿದ್ದಾರೆ ಎನ್ನುವುದನ್ನು ಹೇಳಿದ್ದಾರೆ, ಯಾರು ಯಾರಿಗೆ ಏನೇನು ಸಾಲಭ್ಯಗಳನ್ನು ಕೊಡಬೇಕೆಂದು ಹೇಳಿದ್ದಾರೆ. ಇದನ್ನೇ ಆಧಾರವಾಗಿ ತೆಗೆದುಕೊಂಡು ಕೆಲಸ ಮಾಡಲು ಪ್ರಯತ್ನ ನಡೆಸಿದರೆ weaker sections ಯಾರೆಂಬುದನ್ನು ತಿಳಿದುಕೊಳ್ಳುವುದು ಸುಲಭ.

Sri B. R. SUNTHANKAR (Belgaum City).—May I know whether the Hon'ble Member would care to include the weaker section also? If so, what has he to say?

ಶ್ರೀ ಎ. ಭೀಮಪ್ಪನಾಯಕ್.—ಇದೇ ಒಂದು ಅಸ್ತ್ರವನ್ನು ತೆಗೆದುಕೊಂಡು 40 ಕೋಟಿ ಪ್ರಜಾ ಸಂಖ್ಯೆಯಲ್ಲಿ 20 ಕೋಟಿ ಸ್ತ್ರೀಯರು weaker section, ಆದುದರಿಂದ ಏನೂ ಮಾಡಬೇಕಾಗಿಲ್ಲ ವೆಂಬ ಒಂದು ವಾದವನ್ನೆತ್ತಿದರೆ ಹೇಗೆ? ನಲವತ್ತು ಕೋಟಿಯಲ್ಲಿ ಇಪ್ಪತ್ತು ಕೋಟಿ ಸ್ತ್ರೀಯರು ಮತ್ತು ಬೇರೆ ಲೆಕ್ಕದ ಪ್ರಕಾರ 13 ಕೋಟಿ ಬ್ಯಾಕ್‌ವರ್ಡ್ ಕ್ಲಾಸಸ್ ಇದ್ದಾರೆಂದ ಹಾಗಾಯಿತು, ಎಂದರೆ 33 ಕೋಟಿ weaker section ಇದ್ದಾರೆ, ಇನ್ನುಳಿದ ಏಳು ಕೋಟಿ ಮಾತ್ರ ಹಿಂದುಳಿದವರಲ್ಲ. ಆದುದರಿಂದ ಈಗ ಮಾಡುತ್ತಿರುವುದೇ ಲೇಸು. ಹೊಸದಾಗಿ ಏನೂ ಮಾಡಬೇಕಾಗಿಲ್ಲವೆಂದು ವಾದ ಮಾಡಬಹುದು. I do not agree with that. I submit that it is a very wrong presumption that they have made just to hit at us and kill us. That is hypocracy. That is the word that I can use. We do not want to do that. We are nobler than those who are sitting and eating the fruit at our cost. ಇದು hypocracy. ಇವರಿಗೆ ಹಿಂದುಳಿದ ಜನಾಂಗದ ಅಭಿವೃದ್ಧಿ ಮಾಡುವುದು ಇಷ್ಟವಿಲ್ಲವೋ ಅಥವ ಇವರೆಲ್ಲರೂ ಅಭಿವೃದ್ಧಿಯಾದರೆ ಮುಂದೆ ರಾಜಕೀಯದಲ್ಲಿ ತಮಗೆ ತೊಂದರೆ ಬರುತ್ತದೆ, ಆದುದರಿಂದ ಇವರನ್ನು ಹಿಂದೆಯೇ ಇಡೋಣ ಎಂಬ ಉದ್ದೇಶ ವಿದೆಯೋ ಏನೋ! ಇಂಥವರು ಮೇಲೆ ಬೇಕಾದಷ್ಟು ಒಳ್ಳೆಯ ಮಾತುಗಳನ್ನಾಡಬಹುದು. ಆದರೆ ಒಳಗೆ ವಿಷ ಬೆಳೆಯುತ್ತಿದೆ. ಇದು ಬಹುದಿನ ನಡೆಯಲಾರದು. ಹಿಂದುಳಿದ ಪಂಗಡಗಳಲ್ಲಿಯೂ ಕೆಲವರು ಶ್ರೀ ರಾಚಯ್ಯನವರಂಥವರು ಹುಟ್ಟಿದ್ದಾರೆ. ಇದುವರೆಗೆ ಏನು ಮಾಡಿದ್ದಾರೋ ಮುಂದೆಯೂ ಇವರು ಮಾಡುವುದು ಇಷ್ಟೇ ಎಂದು ಸುಲಭವಾಗಿ ತಿಳಿದುಕೊಳ್ಳಬಲ್ಲರು. ಇದರ ಪರಿಣಾಮ ಮುಂದೇನಾಗುತ್ತದೆಂಬುದನ್ನು ಯೋಚನೆ ಮಾಡಬೇಕು. ಇನ್ನು ಮುಂದಾದರೂ ಹಿಂದುಳಿದವರ ವಿಚಾರದಲ್ಲಿ ನಿರ್ಲಕ್ಷ್ಯ ಇರಲು. ಎಲ್ಲರನ್ನೂ ತಮ್ಮ ಮಟ್ಟಕ್ಕೇ ತರಲು ಮುಂದುವರಿದಿರುವವರು ಪ್ರಯತ್ನ ಮಾಡಬೇಕು. ವಿದ್ಯಾಭ್ಯಾಸ, ಆರ್ಥಿಕಸ್ಥಿತಿ, ನೈತಿಕಮಟ್ಟ ಇವುಗಳಲ್ಲಿ ನಾವು ಹೇಗೆ ಮುಂದೆ ಬಂದಿದ್ದೇವೋ ಹಾಗೆಯೇ ಹಿಂದುಳಿದವರನ್ನೂ ಮುಂದೆ ತರಲು ಪ್ರಯತ್ನ ಮಾಡಬೇಕೆಂಬ ಮನೋಭಾವದಿಂದ ಪ್ರಯತ್ನ ಪಟ್ಟರೆ ಆಗ ಎಲ್ಲರೂ ಒಂದಾಗುವುದಕ್ಕೆ ಸಾಧ್ಯವಿದೆ. ಹಾಗೆ ಮಾಡದೇಯಿದ್ದರೆ ಯಾರಿಗೂ ಉಳಿಗಾಲವಿಲ್ಲ. ನಾನು ಜಾತಿ ಎಂಬ ಶಬ್ದವನ್ನು ಉಪಯೋಗಿಸುವುದಿಲ್ಲ, ಆದರೆ ಕೆಲವರ ಕಷ್ಟದ ಫಲವನ್ನು ಇನ್ನೂ ಕೆಲವರು ಪಡೆದುಕೊಂಡು ಸುಖವಾಗಿ ಒಳ್ಳೆಯ ಬಟ್ಟೆಗಳನ್ನು ಹಾಕಿಕೊಂಡು ಊಟ ಮಾಡಿಕೊಂಡು ಕಳಿತುಕೊಂಡು ನಿಮಗೂ ಸಾಲಭ್ಯಗಳನ್ನು ಕೊಟ್ಟಿದ್ದೇವೆಂದು ಹೇಳಬಾರದು. ಬಂದ ಕಷ್ಟ ಸುಖಗಳನ್ನು ನಾವೆಲ್ಲರೂ ಸಮವಾಗಿ ಅನುಭವಿಸೋಣ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—'ನಾವು', 'ನೀವು' ಎಂದರೆ ಯಾರು ಯಾರಿಗೆ?

ಶ್ರೀ ಎ. ಭೀಮಪ್ಪನಾಯಕ್.—ಬಲಹೀನರು ಬಲಿಷ್ಠರು. ಯಾರು ಬಲಿಷ್ಠರು ಮಾರು ಬಲಹೀನರು ಎಂಬುದು ಅವರಿಗೂ ಗೊತ್ತಿದೆ.

ಶ್ರೀ ಡಿ. ದೇವರಾಜ ಅರಸ್.—ಈಗ ಮಾತನಾಡುತ್ತಿರುವ ಮಾನ್ಯ ಸದಸ್ಯರು ಬಲಹೀನರೋ ಅಥವಾ ಬಲಿಷ್ಠರೋ?

ಶ್ರೀ ಎ. ಭೀಮಪ್ಪನಾಯಕ್.—ಭೀಮಪ್ಪನಾಯಕನಿಗೆ ಶಕ್ತಿ ಇದೆ. ಆದರೆ ಇತರರು? ಶೇಕಡಾವಾರು ಲೆಕ್ಕ ನೋಡಿದರೆ ಯಾರು ಮುಂದುವರಿದಿರುವವರು, ಯಾರು ಹಿಂದುಳಿದಿರುವವರು ಎಂಬುದು ಗೊತ್ತಾಗುತ್ತದೆ. ಈ ಹೊತ್ತು ನಾನು ಒಂದು ಸಲಹೆ ಮಾಡುತ್ತೇನೆ. ಒಂದು ಸಮಿತಿಮಾಡಿ ಶ್ರೀ ಮಲ್ಲಾರಾಧ್ಯರನ್ನು ಸಮಿತಿಗೆ ಅಧ್ಯಕ್ಷರಾಗಿ ಮಾಡಲಿ, ಅವರು ಈ ಕೆಲಸವನ್ನು ಯಶಸ್ವಿಯಾಗಿ ಮಾಡದೇಯಿದ್ದರೆ ನಾನು ನನ್ನ ತಲೆಯ ಮೇಲಿರುವ ಟೋಪಿಯನ್ನು ತೆಗೆದುಬಿಡುತ್ತೇನೆ. ಅವರು ಸೆನ್ಸಸ್ ಕಮಿಷನರಾಗಿದ್ದರು. ಇಡೀ ಇಂಡಿಯಾ ದೇಶದಲ್ಲೇ ಇವರ ವರದಿಯಷ್ಟು ವಿಷಯ ಗರ್ಭಿತವಾಗಿರುವ ವರದಿ ಬೇರೊಂದಿಲ್ಲ ಎಂಬ ಖ್ಯಾತಿ ಪಡೆದಿದ್ದಾರೆ. ಯಾವ ಯಾವ ಜನಾಂಗದ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಮಟ್ಟ ಎಷ್ಟೆಷ್ಟು ಮಟ್ಟಿಗಿದೆ, ಕೈಗಾರಿಕಾ ವೃತ್ತಿ ಯಾವ ಯಾವ ಜನಾಂಗದಲ್ಲಿ ಎಷ್ಟೆಷ್ಟು ಮಟ್ಟಿಗೆ ಬೆಳೆದಿದೆ ಎಂಬುದನ್ನೆಲ್ಲಾ ಇವರು ಚೆನ್ನಾಗಿ ತಿಳಿದುಕೊಂಡಿದ್ದಾರೆ. ಒಂದು ಸಮಿತಿ ಮಾಡಿ ಇಂತಹವರನ್ನು ಅಧ್ಯಕ್ಷರಾಗಿ ನೇಮಕಮಾಡಿ ನಿರ್ಧಾರ ಮಾಡಲಿ. ಈಗ backward class portfolio ಎಂದು ಬೇರೆ ಮಾಡಿದರು. ಬಡ್ಜೆಟ್ಟಿನಲ್ಲಿ ಇಪ್ಪತ್ತೈದೇನಾದರೂ ಅರ್ಥಾಣೆ ಅಥವ ಒಂದಾಣೆಯನ್ನಾದರೂ ಇಟ್ಟಿದ್ದಾರೆಯೆ? ಷೆಡ್ಯೂಲ್ಡ್ ಕ್ಯಾಸ್ಟ್ಸ್‌ಗೆಂದು ಸ್ವಲ್ಪ ಹಣವನ್ನೊದಗಿಸಿದ್ದಾರೆ, ಈ ದಿವಸ ಷೆಡ್ಯೂಲ್ಡ್ ಕ್ಯಾಸ್ಟಿನವರಿಗೆ ವೇತನಗಳನ್ನು ಹೇಗೆ ಕೊಡುತ್ತಾರೆಂಬುದು ಎಲ್ಲರಿಗೂ ಗೊತ್ತಿದೆ, ಇದು ಬೇರೆಮಾತು. ಆದರೆ ಒಂದೇ ಮಾತಿನಲ್ಲಿ ಹೇಳುವುದಾದರೆ, ಸರ್ಕಾರ ಅನುಕೂಲತೆಗಳನ್ನೊದಗಿಸಿವೆ. ನಾವು ಅಭಿವೃದ್ಧಿಗೆ ಬರುತ್ತೇವೆ ಎನ್ನುವ ನಿರ್ದಿಷ್ಟ ಈ ಅಲ್ಪಸಂಖ್ಯಾತರಿಗೂ ದೀನದಲಿತರಿಗೂ ಬಂದಿಲ್ಲವೆಂದು ಹೇಳುತ್ತೇನೆ. ಈ ಹೊತ್ತು ಅನುಕೂಲಸ್ಥರು ವಿದ್ಯಾರ್ಜನೆ ಮಾಡಿಕೊಂಡಿದ್ದಾರೆ. ನಾನು ವಿದ್ಯಾಭ್ಯಾಸ ಮಾಡುವ ಕಾಲದಲ್ಲಿ ಮೈಸೂರು ದೇಶದಲ್ಲಿ ಪೂರ್ವದಿಂದ ಪಶ್ಚಿಮಕ್ಕೆ ಹೋದರೂ ಯಾವ ವಿದ್ಯಾರ್ಥಿನಿಲಯದಲ್ಲಿಯೂ ನನಗೆ ಜಾಗ ಸಿಕ್ಕಲಿಲ್ಲ. ಪ್ರತಿಯೊಂದು ಜನಾಂಗದವರೂ ತಮ್ಮ ತಮ್ಮವರಿಗೆ ವಿದ್ಯಾರ್ಥಿನಿಲಯಗಳನ್ನು ಮಾಡಿಕೊಂಡು ಮುಂದೆ ಬಂದಿದ್ದಾರೆ. ಆದರೆ ಈ ಬಡ ಜನಾಂಗ ಹೇಗೆ ವಿದ್ಯಾರ್ಥಿನಿಲಯ ಕಟ್ಟಲು ಸಾಧ್ಯ? ಆದಕಾರಣ ಇತರರ ನೆರಳಿನಲ್ಲೇ ಬೀಳುವುದು ಸಾಧ್ಯವಾಯಿತು. ಇಡೀ ದೇಶದಲ್ಲಿರುವ ವಿದ್ಯಾರ್ಥಿನಿಲಯಗಳನ್ನು ಲೆಕ್ಕ ಹಾಕಿದರೆ ಮುಂದುವರಿದಿರುವವರು ಯಾರು, ಹಿಂದುಳಿದಿರುವವರು ಯಾರು ಎಂಬುದನ್ನು ನಿರ್ಧಾರಮಾಡಬಹುದು. ಒಂದು ಪಂಗಡದವರು ಹಾಸ್ಟೆಲ್ಲಿಗೆ ಹತ್ತು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ, ಇನ್ನೊಂದಕ್ಕೆ ಒಂದು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ, ಆದರೆ ಇನ್ನು ಕೆಲವು ಜನಾಂಗದವರನ್ನು ಬಡಿದರೂ ಅವರ ಆರ್ಥಿಕ ಸ್ಥಿತಿ 50 ಸಾವಿರ ರೂಪಾಯಿ ಆಗುವುದಿಲ್ಲ. ನಮ್ಮ ಸರ್ಕಾರದವರು ಇಷ್ಟು ಮಾತನಾಡುತ್ತಾರೆ. ಈ ನಿರ್ಣಯದ ವಿಚಾರದಲ್ಲಿ ಬಹಳ ಸಹಾನುಭೂತಿ ಇದೆ, ಈ ಜನರ ಅಭಿವೃದ್ಧಿಗಾಗಿ ಏನು ಬೇಕಾದರೂ ಮಾಡುತ್ತೇವೆ ಎಂದು ಹೇಳುತ್ತಾರೆ. ಆದರೆ ಮುಂದಿನ ಅಧಿವೇಶನದ ಹೊತ್ತಿಗೂ ಈ ಜನಾಂಗದವರ ಸ್ಥಿತಿ ಈಗ ಎಲ್ಲಿದೆಯೋ ಅಲ್ಲೇ ಇರುತ್ತದೆ. ನಾನು ಸರ್ಕಾರಕ್ಕೆ ಹೇಳುವುದಿಷ್ಟೆ: ಇನ್ನೇನನ್ನೂ ಮಾಡಬೇಡಿ, ಜಿಲ್ಲೆಗೆ ಒಂದೊಂದು ಸರ್ಕಾರೀ ವಿದ್ಯಾರ್ಥಿನಿಲಯವನ್ನು ಏರ್ಪಾಡು ಮಾಡಿ, ಅಲ್ಲಿ weaker sectionsನಲ್ಲಿರುವ ಹುಡುಗರಿಗೆ ಅನ್ನಹಾಕಿ, ವಿದ್ಯಾರ್ಜನೆಗೆ ಸಹಾಯ ಮಾಡಿ. ಇಷ್ಟು ಮಾಡಿದರೆ ಸಾಕು. ಇಡೀ ಚಿತ್ರದುರ್ಗ ಜಿಲ್ಲೆಗೆ ಹರಿಜನರಿಗೆ ಒಂದೇ ಒಂದು ಡಿಪ್ರೆಸ್ಡ್ ಕ್ಲಾಸ್ ಹಾಸ್ಟೆಲ್ ಇದೆ. ಅದಕ್ಕೆ ನಾನು ಪ್ರೊಸಿಡೆಂಟ್. ಅಲ್ಲಿ 50 ಜನ ವಿದ್ಯಾರ್ಥಿಗಳಿಗೆ ಅವಕಾಶ ಕೊಡುತ್ತಾರೆ. ಇಡೀ ಜಿಲ್ಲೆಯಲ್ಲಿ 50 ಜನ ವಿದ್ಯಾರ್ಥಿಗಳು ಮುಂದೆ ಬರತಕ್ಕವರೆ, ಇನ್ನಾರೂ ಇಲ್ಲವೆ! ಅಲ್ಲಿ ಅವಕಾಶ ಬೇಡಿ ಬರುವ ನೂರಾರು ಜನರಿಗೆ ಕೊಡುವುದಕ್ಕೆ ಸಾಧ್ಯವೇ? ಎಲ್ಲರನ್ನೂ ಅಭಿವೃದ್ಧಿ ಮಾಡುವುದಕ್ಕೆ ಸಾಧ್ಯವೇ? ಎಂದು ಕೇಳಿದರೆ, ಅದು ಬೇರೆಯ ಮಾತು. ನಾವೆಲ್ಲಾ ಮಾಡುತ್ತಾ ಇದ್ದೇವೆ, ಅವರ ಅಭಿವೃದ್ಧಿಗೆ ಸಾಕಾದಷ್ಟು ಕೆಲಸ ಕಾರ್ಯ ನಡೆಸುತ್ತೇವೆ ಎಂದು ಹೇಳಿ ಅದನ್ನು ನಮ್ಮನೆ ತೋರಿಕೆಗೆ ಮಾಡುವುದು ಬೇಡ ಎಂದು ನಾನು ಹೇಳುತ್ತೇನೆ.

ಶ್ರೀ ಟಿ. ಮರಿಯಪ್ಪ (ಹಣಕಾಸಿನ ಮಂತ್ರಿಗಳು).—ಎಲ್ಲವನ್ನೂ ಸಂಪೂರ್ಣವಾಗಿ ಮಾಡುತ್ತೇವೆ ಎಂದು ನಾವು ಹೇಳಿಲ್ಲ.

ಶ್ರೀ ಎ. ಭೀಮಪ್ಪನಾಯಕ್.—ಆ ರೀತಿ ಹೇಳಿದ್ದಿದ್ದರೆ ನೀವೇಕೆ ಮಾಡಲಲ್ಲ ಎಂದು ಹೇಳಿ ನಿಮ್ಮನ್ನು ಗುಂಡಿನಲ್ಲಿ ಹೊಡೆಯುತ್ತಿದ್ದೆವು. ನಿಮ್ಮ ಕೈಯಲ್ಲಿ ಆಗುವುದು ಏನೆಂದರೆ ಕೈ ಕೊಡುವುದು. ವರ್ಷಾಂತ್ಯದಲ್ಲಿ ಏನೂ ಮಾಡಲಲ್ಲ ಎಂದು ಕೈಕೊಡುವುದು ಅಷ್ಟೇನೆ, ನಮಗೆ ಅರ್ಥವಾಗುವುದಿಲ್ಲವೇ? ಆ ಕಡತ ತೆಗೆದುಕೊಂಡು ನೋಡಿದರೆ ಏನೂ ಮಾಡಿಲ್ಲ ಎಂದು ಗೊತ್ತಾಗುತ್ತದೆ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—On a point of order, Sir. ನಾವು ಗುಂಡಿನಲ್ಲಿ ಹೊಡೆಯುತ್ತಿದ್ದೆವು ಎಂದು ಹೇಳಿದರು. ಆ ಪದ ಉಪಯೋಗಿಸುವುದು ನ್ಯಾಯವೇ?

ಶ್ರೀ ಎ. ಭೀಮಪ್ಪನಾಯಕ್.—ನಾನು ಏನು ಹೇಳಿದೆನೆಂದರೆ, ನಾವು ಎಲ್ಲಾ ಮಾಡುತ್ತೇವೆ ಎಂದು ಹೇಳಿ ಮಾಡದೆ ಇದ್ದಿದ್ದರೆ ಗುಂಡಿನಲ್ಲಿ ಹೊಡೆಯುತ್ತಿದ್ದೆವು ಎಂದು. ಅವರು ಮಾಡುವುದಿಲ್ಲ; ನಾವು ಹೊಡೆಯುವುದಿಲ್ಲ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಗುಂಡಿನಲ್ಲಿ ಹೊಡೆಯುತ್ತಿದ್ದೆವು ಎನ್ನುವ ಪದ ಉಪಯೋಗಿಸುವುದು ಸರಿಯೇ, ಸ್ವಾಮಿ?

ಶ್ರೀ ಎ. ವಿ. ನರಸಿಂಹರೆಡ್ಡಿ (ಬೆಂಗಳೂರು ದಕ್ಷಿಣ).—ಶ್ರೀ ಭೀಮಪ್ಪನಾಯಕರೇ ಆ ವಿಷಯವನ್ನು ವಿವರಿಸಿ point of order ಇಲ್ಲ ಎಂದು ಹೇಳಿದ್ದಾರೆ. ಮತ್ತೆ ಅವರನ್ನೇಕೆ ಕೇಳುತ್ತೀರಿ?

ಉಪಾಧ್ಯಕ್ಷರು.—Point of order ಏನೂ ಇಲ್ಲ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಶ್ರೀ ನರಸಿಂಹರೆಡ್ಡಿಯವರಂತೆಯೇ ನಾನೂ ಈ ಅಸೆಂಬ್ಲಿಯಲ್ಲಿ ಸದಸ್ಯನಾಗಿ ಬಂದಿದ್ದೇನೆ. ಅವರಿಗೆ ಎಷ್ಟು ಹಕ್ಕು ಇದೆಯೋ ಅಷ್ಟೇ ಹಕ್ಕು ನನಗೂ ಇದೆ. ಅವರು ಆ ರೀತಿ ಪದ ಉಪಯೋಗಿಸುವುದು ಸರಿಯೇ ಎಂದು ತಮ್ಮನ್ನು ಕೇಳುತ್ತಾ ಇದ್ದೇನೆ ಅಷ್ಟೆ.

ಶ್ರೀ ಎ. ಭೀಮಪ್ಪನಾಯಕ್.—ಬೇರೆ ಅಭಿಪ್ರಾಯದಿಂದ ಏನೂ ನಾನು ಹೇಳಿಲ್ಲ. ಮಾನ್ಯ ಅಧ್ಯಕ್ಷರು ರೂಲಿಂಗ್ ಕೊಟ್ಟಿದ್ದಾರೆ. It is allowed. ಆ ಶಬ್ದದಿಂದ ಶ್ರೀ ಪುಟ್ಟರಾಮಯ್ಯನವರಿಗೇನಾದರೂ affect ಆಗಿದ್ದರೆ ಅದನ್ನು withdraw ಮಾಡುತ್ತೇನೆ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ನಮಗೂ ಸಮಯ ಬಂದಾಗ, ಕಷ್ಟ ಬಂದಾಗ ಆ ಪದ ಉಪಯೋಗಿಸಿದರೆ ಏನೂ ತೊಡಕು ಬರದೆ ಇರಲ ಎನ್ನುವ ಉದ್ದೇಶದಿಂದ ಕೇಳಿದೆ ಅಷ್ಟೆ.

ಶ್ರೀ ಎ. ಭೀಮಪ್ಪನಾಯಕ್.—ಇನ್ನು ಹೆಚ್ಚು ಮಾತನಾಡುವ ಗೊಡವೆಗೆ ಹೋಗುವುದಿಲ್ಲ. ಈ ಸಂದರ್ಭದಲ್ಲಿ ಬ್ಯಾಕ್‌ವರ್ಡ್ ಕ್ಲಾಸ್ ಯಾವುದು ಎಂದು ಡಿಫೈನ್ ಮಾಡಿರಿ. ಕೇಂದ್ರ ಸರ್ಕಾರದವರು ಬ್ಯಾಕ್‌ವರ್ಡ್ ಕ್ಲಾಸ್, ಷೆಡ್ಯೂಲ್ಡ್ ಕ್ಲಾಸ್ ಎಂದು ಮಾಡಿದ್ದಾರೆ. ಅದು ಗೊತ್ತಿದೆ. ಅವರಿಗೆ ಈಗ ಏನು ಸಹಾಯ ಒದಗಿಸುತ್ತಾ ಇದ್ದೀರಿ, ಅದು ಅವರ ಆರ್ಥಿಕಾಭಿವೃದ್ಧಿಗೆ ಸಾಕಾಗುವಷ್ಟು ಇಲ್ಲ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ ಅವರಿಗೆ ಇನ್ನೂ ಅವರ ತಕ್ಕಡಿ ಮೇಲಕ್ಕೆ ಏಳಬೇಕಾದರೆ, ತಕ್ಕಡಿ ಸಮವಾಗಬೇಕಾದರೆ ಒಂದು ನಿರ್ದಿಷ್ಟ ಕಾಲ ಇಟ್ಟು ಕೊಳ್ಳಿ. First five-year plan, Second five-year plan, Third five-year plan ಎಂದು 15 ವರ್ಷ ಇಟ್ಟುಕೊಳ್ಳಿ. ಅದರೊಳಗೆ ಮೈಸೂರು ಸಂಸ್ಥಾನದಲ್ಲಿ ಹೆಚ್ಚು ಕಡಮೆ ಎಲ್ಲಾ ಜನಾಂಗಗಳೂ ಸರಿಸಮಾನವಾಗಿ ಯಾರೂ ಆರ್ಥಿಕ ದೃಷ್ಟಿಯಿಂದ ಆಗಲಿ, ಸಾಮಾಜಿಕ ದೃಷ್ಟಿಯಿಂದ ಆಗಲೀ, ಇನ್ನಾವ ದೃಷ್ಟಿಯಿಂದ ಆಗಲಿ ಹಿಂದೆ ಇಲ್ಲ ಎಂದು ಮಾಡುವುದಕ್ಕೆ ತಕ್ಕ ಕೆಲಸ ಕಾರ್ಯಗಳನ್ನು ಮಾಡಲು ಒಂದು ಯೋಜನೆ ಹಾಕಿಕೊಳ್ಳಿ. ಬೊಂಬಾಯಿನಲ್ಲಿ ಡಿಪ್ರೆಸ್ಡ್ ಕ್ಲಾಸ್ ಆಫೀಸರು ಎಂದು ಒಬ್ಬ ಅಧಿಕಾರಿಯನ್ನು ನೇಮಕಮಾಡಿದ್ದಾರೆ. ಮೈಸೂರು ದೇಶದಲ್ಲೂ ಕೂಡ ಹರಿಜನರ ಅಭಿವೃದ್ಧಿಗೆ ಒಬ್ಬ ಆಫೀಸರನ್ನು ನೇಮಕ ಮಾಡಿದಿರಿ. ಏಕೆ ಮಾಡಿದಿರಿ ಎಂದರೆ ಅವರ ಮನೆಬಾಗಿಲಿನಿಂದ ಇವರ ಮನೆ ಬಾಗಿಲಿಗೆ, ಇವರ ಮನೆಬಾಗಿಲಿನಿಂದ ಅವರ ಮನೆಬಾಗಿಲಿಗೆ ಹೋಗಿ ಅರ್ಜಿ ಬರೆದುಕೊಡುವುದಕ್ಕೆ ಇದಕ್ಕೆ ಒಬ್ಬ ಸ್ಪೆಷಲ್ ಆಫೀಸರನ್ನು ನೇಮಕ ಮಾಡಿದರೇ ಹೊರತು ಅವರಿಗೆ ಮೂರು ಕಾಸಿನ ಅಧಿಕಾರವಿಲ್ಲ. ಐದು ಎಕರೆ ಜಮೀನು ಕೊಡಲು ಆರ್ಡರ್ ಮಾಡುವ ಅಧಿಕಾರವೂ ಇಲ್ಲ. ಮನೆಕಟ್ಟಿಕೊಳ್ಳಲಿಕ್ಕೆ ಸಾಮಾನು ತೆಗೆಸಿಕೊಡುತ್ತಿದ್ದೀರಿ. ಶ್ರೀ ರಾಚಯ್ಯನವರು ಆಗಲೇ ಒಂದು ಒಳ್ಳೆಯ ಸಲಹೆ ಮಾಡಿದರು. ಅಡವಿಗೆಹೋಗಿ ಮನೆ ಕಟ್ಟುವುದಕ್ಕೆ ಬೇಕಾದ ಸಾಮಾನು ತೆಗೆದು ಕೊಳ್ಳಿ, ಬೇಕಾದರೆ ಪಾಸ್ ಕೊಡುತ್ತೇನೆ ಎಂದರೆ ಅದರಿಂದ ಪ್ರಯೋಜನವಾಗುವುದಿಲ್ಲ. ಅವರು ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ನಾನು ವೈಯಕ್ತಿಕವಾಗಿ ಸಲಹೆಮಾಡುವುದಕ್ಕೆ ಹೋಗುವುದಿಲ್ಲ.

ವಿದ್ಯಾಭ್ಯಾಸದ ಅನುಕೂಲತೆಗಾಗಿ ಈ ವೀಕರ್ ಸೆಕ್ಷನ್‌ನನ್ನು ಸ್ಪೆಷಲ್ ಆಗಿ ಕನ್ಸಿಡರ್ ಮಾಡಿ. ಅವರ ವಿದ್ಯಾಭಿವೃದ್ಧಿಗೆ ಸಹಾಯ ಮಾಡಿರಿ. ಅವರ ಆರ್ಥಿಕಾಭಿವೃದ್ಧಿಗೆ ಯೋಜನೆಮಾಡಿರಿ. ಜಮೀನುಕೊಡುವುದಕ್ಕೆ ಒಂದು ಪಾಲಿಸಿಮಾಡಿಕೊಂಡು ಇದ್ದೀರಿ. ಬರೀ ಹರಿಜನರಿಗೆ ಮಾತ್ರ ಕೊಡುತ್ತಿಲ್ಲ. ಬಾಕಿ ಕ್ಲಾಸ್‌ನಲ್ಲೂ ಕೂಡ ಲ್ಯಾಂಡ್‌ಲೆಸ್ ಪೀಪಲ್ ಇದ್ದಾರೆ. ಇದು ಹೇಗೆ ಆಗಿದೆ ಎಂದರೆ ಯಾವನು ಪ್ರತಿಭಾವಂತನಾಗಿದ್ದಾನೋ ಅವನ ಜನಾಂಗದ ಅಧಿಕಾರಿ ಸರ್ಕಾರಿನೌಕರಿಯಲ್ಲಿದ್ದರೆ ಅವನಿಂದ ರೆಕಮೆಂಡೇಷ್ ಮಾಡಿಸುವುದು, ಮಂತ್ರಿಗಳು ಇದ್ದರೆ ಅಂತಹವರ ಅರ್ಜಿಗೆ ಪುರಸ್ಕಾರ ದೊರೆಯುತ್ತದೆಯೇ ಹೊರತು ಈ ವೀಕರ್ ಸೆಕ್ಷನ್‌ಗೆ ಯಾವ ರೀತಿ ಜಮೀನು ಕೊಡುವುದಕ್ಕೆ ಪ್ರಯತ್ನಮಾಡಿದ್ದೀರಿ ಎಂದು ನಾನು ಹೇಳುತ್ತೇನೆ.

ಶ್ರೀ ಡಿ. ದೇವರಾಜ ಅರಸ್.—ಅವರು ಒಂದು ಸಲಹೆಯನ್ನು ಲ್ಯಾಂಡ್ ಪಾಲಸಿ ವಿಷಯದಲ್ಲಿ ಕೊಟ್ಟರು.

ಶ್ರೀ ಎ. ಭೀಮಪ್ಪನಾಯಕ್.—Nationalization of means of production ಮಾಡುವುದು ಒಳ್ಳೆಯದಲ್ಲವೆ? ನಿಮ್ಮ ಅಭಿಪ್ರಾಯ ಏನು? ನನ್ನ ಅಭಿಪ್ರಾಯ ಇಷ್ಟೆ. ಜತ್ತಿ ಸಮಿತಿ ರಿಪೋರ್ಟ್‌ನಿಂದ ಇನ್ನಷ್ಟು ತೊಂದರೆಯೇ ಹೊರತು ಅನುಕೂಲ ಆಗುವುದಿಲ್ಲ. ಯಾರು ಇವತ್ತು ಬೆಳೆ ಮಾಡುತ್ತಾ ಇದ್ದಾರೆಯೋ ಆ ಜನತೆಯ ತಲೆ ಒಡೆಯುವ ಮಾರ್ಗವೇ ಹೊರತು ಅದು ಇನ್ನೇನೂ ಅಲ್ಲ. ಇವತ್ತು ಹೇಳುತ್ತೇನೆ ಮೈನೂರು ದೇಶದಲ್ಲಿರತಕ್ಕ ಎಲ್ಲಾ ಉದ್ದ, ಅಗಲ ತೆಗೆದುಕೊಂಡು ಭೂಮಿ ಸೀಲಿಂಗ್ ಫಿಕ್ಸ್‌ಮಾಡುತ್ತೇವೆ ಎಂದರೆ ಒಟ್ಟು 10 ಸಾವಿರ ಮನೆತನಕ್ಕೆ ಕೊಟ್ಟೀರೆ ಹೊರತು ಇನ್ನೆಷ್ಟು ಜನಕ್ಕೆ ಕೊಟ್ಟೀರಿ?

ಶ್ರೀ ಟಿ. ಮರಿಯಪ್ಪ.—ಅಷ್ಟಕ್ಕೂ ಆಗುವುದಿಲ್ಲ.

Sri A. BHEEMAPPA NAIK.—The Minister has agreed with me. I am happy. I thank him very much. ನಾನು ಹೇಳುತ್ತೇನೆ. Means of production ಎಂದರೆ ಬರೀ ಜಮೀನಿನಲ್ಲಿ ಬೆಳೆ ಬೆಳೆಯುವುದು production ಅಲ್ಲ. ಹಾಗಾದರೆ ಒಂದು ಕೈಗಾರಿಕೆ means of production ಅಲ್ಲವೆ? ಮಿಜ್ಜಾ ಸಾಹೇಬರಿಗೆ 15-20 ಸಾವಿರ ರೂಪಾಯಿ ಒಂದು ತಿಂಗಳಿಗೆ ಮನೆ ಬಾಡಿಗೆ ಬರುತ್ತದೆ. ಅದನ್ನೆಲ್ಲಾ ಬಿಟ್ಟು ಬಿಟ್ಟು, ಸೆಕೆಂಡ್ ಸ್ಟೇಜ್‌ನಲ್ಲಿ ಮಾಡುತ್ತೇವೆ ಎಂದು ಹೇಳುತ್ತೀರಿ. ಇದು ಯಾವಾಗ ಬರುತ್ತದೆ ಎಂದರೆ, ಇನ್ನೂ 100 ವರ್ಷದಲ್ಲಿ ಯಾರೂ ಮಾಡಬಾರದ ಪಾಪವನ್ನು ರೈತನೇ ಮಾಡಿದ್ದಾನೆ. ಅವನ ತಲೆಗೆ ಟೋಪಿ ಹಾಕುತ್ತಿದ್ದೀರಿ. ಅವನಿಗೆ ಏಕೆ ಸೀಲಿಂಗ್? ನಿಮಗೆ ಸೀಲಿಂಗ್ ಬೇಡವೇ? ಇಷ್ಟು ವರ್ಷಕ್ಕೆ ಇಷ್ಟಕ್ಕಿಂತ ಜಾಸ್ತಿ ಆದಾಯ ಒಂದು ಮನೆತನಕ್ಕೆ ಬರಬಾರದು ಎಂದು ಮಾಡಿದರೆ ಹೈಕೋರ್ಟ್ ಜಡ್ಜ್‌ಗೆ 3—3¼—4 ಸಾವಿರ ರೂಪಾಯಿಗಳ ಮೇಲೆ ಸೀಲಿಂಗ್ ಏಕೆ ಹಾಕಬಾರದು?

Sri M. C. NARASIMHAN (Kolar Gold Fields).—"Weaker section", how is that relevant?

ಶ್ರೀ ಎ. ಭೀಮಪ್ಪನಾಯಕ್.—ವೀಕರ್ ಸೆಕ್ಷನ್ ಮೇಲೆ ಬೀಳಬೇಕಾದರೆ means of production nationalise ಮಾಡಿರಿ, ಎಂದರೆ ಸರಿಹೋಗುವುದಿಲ್ಲ. ಮೈನೂರು ದೇಶದಲ್ಲರತಕ್ಕ ಎಲ್ಲಾ ಭೂಮಿಯನ್ನೂ ವ್ಯವಸಾಯ ಮಾಡತಕ್ಕ ರೈತರಿಗೆ ಸಮವಾಗಿ ಹಂಚಿದರೆ ಸರಿಹೋಗುತ್ತದೆಂದು ನನ್ನ ಅಭಿಪ್ರಾಯ. ಹಾಗೆ ಮಾಡದಿದ್ದರೆ ಏನೂ ಪ್ರಯೋಜನವಾಗುವುದಿಲ್ಲ. ಈಗ ನೀವು ಮಾಡುತ್ತಿರುವುದು ದೊಡ್ಡ ಐಶ್ವರ್ಯವಂತನನ್ನು ಐಶ್ವರ್ಯವಂತನನ್ನಾಗಿಯೇ ಬಿಡುತ್ತೀರಿ. ಬಡವನನ್ನು ಬಡವನನ್ನಾಗಿಯೇ ಬಿಡುತ್ತೀರಿ. ಸೀಲಿಂಗ್ ಹಾಕಿದಾಗ 4 ಮಕ್ಕಳು ಹುಟ್ಟಿ ಹೊರಕ್ಕೆ ಬಂದಾಗ ಅವನಿಗೆ ಯಾವ ಸೀಲಿಂಗ್ ಇಡುತ್ತೀರಿ?

5-30 P.M.

ಒಂದು ಕುಟುಂಬಕ್ಕೆ 50 ಎಕರೆ ಭೂಮಿ ಇರಬೇಕು ಎಂದು ಒಂದು ಪರಿಮಿತಿಯನ್ನು ವಿಧಿಸಿದರೆ, ಅಂಥ ಭೂ ಮಾಲೀಕನಿಗೆ ಮುಂದೆ ಐದು ಜನ ಮುಕ್ಕಳಾದರೆ, ಅವರಿಗೆ ಭೂಮಿ ಎಲ್ಲಿಂದ ಬರಬೇಕು? ನಮ್ಮ ದೇಶದಲ್ಲಿ ಹೆಚ್ಚು ಮಕ್ಕಳಾಗುತ್ತಿರುವುದು ಸಹಜವಾಗಿದೆ. ಅಂಥವರಿಗೆ ಯಾವ ಜಮೀನು ಕೊಡುತ್ತೀರಿ? ಆದ್ದರಿಂದ

ಸೀಲಿಂಗ್ ಗೊತ್ತುಮಾಡುವುದು ಅನುಕೂಲವಾಗುವ ದಿಲ್ಲ. Deliberately I have avoided speaking on the report. ಈಗ ಈ ವಿಷಯದ ಬಗ್ಗೆ ಹೆಚ್ಚಿಗೆ ಹೇಳಲು ಇಷ್ಟಪಡುವದಿಲ್ಲ. ಆ ಮಸೂದೆ ಸಭೆಯ ಮುಂದೆ ಚರ್ಚೆಗೆ ಬಂದಾಗ ನೋಡೋಣ. ಈ ವೀಕರ್ ಸೆಕ್ಷನ್ ಅಂದರೆ ಬಲಹೀನರಾದವರಿಗೆ ಅನುಕೂಲಮಾಡಿಕೊಡಬೇಕಾದರೆ ಈ ಎಲ್ಲ ಅಂಶಗಳನ್ನೂ ಪರಿಶೀಲನೆಗೆ ತೆಗೆದುಕೊಳ್ಳತಕ್ಕದ್ದು ಅವಶ್ಯಕ. ಪ್ರತಿಯೊಂದು ಉದ್ಯೋಗದಲ್ಲಿ, ವ್ಯವಸಾಯದಲ್ಲಿ, ವಿದ್ಯಾಭ್ಯಾಸದಲ್ಲಿ, ಸಮಾಜದಲ್ಲಿ ಒಂದು ನರಿ ಸಮಾನ ಸ್ಥಾನ ಪಡೆಯುವುದಕ್ಕೆ ಬೇಕಾದ ಅನುಕೂಲಗಳನ್ನು ಈ ಬಲಹೀನ, ಹಿಂದುಳಿದ ವರ್ಗದವರಿಗೆ ಕಲ್ಪಿಸಿಕೊಡುವದಕ್ಕೆ ಏರ್ಪಾಡು ಮಾಡಿಕೊಡಬೇಕು. ಎಲ್ಲ ಸ್ಥಾನಗಳಲ್ಲಿಯೂ ನಮ್ಮ ವರ್ಗದ ಜನರಿಗೆ ಪ್ರಾತಿನಿಧ್ಯವಿರಬೇಕು. ಸರಕಾರಿ ನೌಕರಿಯಲ್ಲಿಯೂ ಸಹ ಸರಿಸಮಾನ ಸ್ಥಾನಾವಕಾಶ ಇರಬೇಕು. ಮಂತ್ರಿ ಮಂಡಲದಲ್ಲಿಯೂ ಕೂಡ ಇರಬೇಕು. ಶ್ರೀ ಟಿ. ಮರಿಯಪ್ಪನವರು ನಾನು ಒಬ್ಬ ಅವರ ಪರವಾಗಿ ಪ್ರತಿನಿಧಿ ಇದ್ದೇನೆ ಎಂದು ಹೇಳುತ್ತಾರೆ. ಶ್ರೀ ಚೆನ್ನಿಗ ರಾಮಯ್ಯನವರೂ ಸಹ ನಾನೊಬ್ಬ ಪ್ರತಿನಿಧಿ ಮಂತ್ರಿ ಮಂಡಲದಲ್ಲಿ ಇದ್ದೇನೆ ಎಂದು ಹೇಳುತ್ತಾರೆ. ಆದರೆ ಇವರು ಯಾರೂ ನಿಜವಾಗಿ ನಮ್ಮ ವರ್ಗದ ಜನರ ಪ್ರತಿನಿಧಿಗಳಾಗಿರುವುದಿಲ್ಲ. ಆದುದರಿಂದ ಒಟ್ಟಿನಲ್ಲಿ ಈ ವೀಕರ್ ಸೆಕ್ಷನ್ ಎಂದರೆ ಬಲಹೀನರಾದವರ ಅಗತ್ಯಗಳು ಏನೇನು ಇವೆ ಎಂಬುದನ್ನು ಕಂಡುಹಿಡಿಯುವದಕ್ಕೆ ಒಂದು ಸಮಿತಿಯನ್ನು ರಚಿಸಿ, ರಿಪೋರ್ಟುತರಿಸಿ ರಿಪೋರ್ಟನ್ನು ಈ ಸಭೆಯ ಮುಂದೆ ಇಟ್ಟು ಅದಕ್ಕೆ ಒಪ್ಪಿಗೆ ತೆಗೆದುಕೊಂಡು, ಕೆಲಸ ಕಾರ್ಯಗಳನ್ನು ಮಾಡುವುದಕ್ಕೆ ಪ್ರಯತ್ನ ಮಾಡಬೇಕು ಎಂದು ಸರಕಾರಕ್ಕೆ ನಾನು ಅತಿ ವಿನಯದಿಂದ ಸೂಚಿಸುತ್ತೇನೆ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಈಗಾಗಲೇ ಐದೂವರೆ ಗಂಟೆ ಆಯಿತು. ಇದೊಂದು ಮಹತ್ವದ ನಿರ್ಣಯವಾಗಿರುವುದರಿಂದ ಚರ್ಚೆಯನ್ನು ನಾಳೆಯ ದಿವಸ ಕೂಡ ಮುಂದುವರಿಸಬೇಕೆಂದು ನಾನು ಅಧ್ಯಕ್ಷರನ್ನು ಕೇಳಿಕೊಳ್ಳುತ್ತೇನೆ.

Sri MAHMOOD SHARIFF (Broadway).—I want to make one suggestion. The resolution tabled by Hon'ble Sri N. Rachiah is a very important one because as stated by Sri A. Bheemappa Naik it refers to weaker sections of our population, *i.e.*, not only Harijans but also innumerable persons who are not economically sound. Therefore, I suggest that this question may be taken up tomorrow because it has got complicated issues,

Mr. DEPUTY SPEAKER.—Yes, we will continue tomorrow also.

ಶ್ರೀ ವೈ. ವೀರಪ್ಪ (ಹೊಳೆನರಸೀಪುರ).—ಮಾನ್ಯ ಅಧ್ಯಕ್ಷರೆ, ಮಾನ್ಯ ಮಿತ್ರರಾದ ಶ್ರೀ ಎನ್. ರಾಚಯ್ಯನವರು ತಂದಿರತಕ್ಕಂಥ ಈ ಠರಾವು ನಿಜವಾಗಿಯೂ ಸಮಯೋಚಿತವಾಗಿದೆ ಎಂದು ನಾನು ಪರಿಗಣಿಸುತ್ತೇನೆ. ಇಷ್ಟೇ ಅಲ್ಲದೆ ಈ ಠರಾವಿನಲ್ಲಿ ಸೂಚಿಸಿದ ಹಾಗೆ ಧ್ಯೇಯಧೋರಣೆಗಳು ಅಡಕವಾಗಿರುವ ಒಂದು ಕಾನೂನು ಮಾಡಿ ಅದನ್ನು ಅನುಷ್ಠಾನಕ್ಕೆ ತಂದರೆ ಅದರ ಪರಿಣಾಮ ಜನತೆಯ ಮೇಲೆ ರಾಷ್ಟ್ರದ ಮೇಲೆ ಎಷ್ಟರ ಮಟ್ಟಿಗೆ ಆಗುತ್ತದೆ ಎಂಬುದನ್ನು ಸ್ವಲ್ಪಮಟ್ಟಿಗೆ ಪರಿಶೀಲಿಸಬೇಕಾಗಿದೆ. ಎಲ್ಲರಿಗೂ ಗೊತ್ತಿರುವ ಹಾಗೆ ನಮ್ಮ ಹಿಂದೂ ದೇಶ ಅನಾದಿ ಕಾಲದಿಂದಲೂ ಒಂದು ವಿಶಿಷ್ಟ ಹಾಗೂ ನಿರ್ದಿಷ್ಟವಾದ ಸಂಸ್ಕೃತಿಯ ಆಧಾರದ ಮೇಲೆ ಬೆಳೆದು ಬಂದಿದೆ. ಬಹುಶಃ ಸಹಸ್ರಾರು ವರ್ಷಗಳ ಕಾಲದಿಂದ ನಮ್ಮ ಸಂಸ್ಕೃತಿಯು ಈ ರೀತಿಯಾಗಿ ಬೆಳೆದು ಬಂದಿದೆ ಎಂದು ಹೇಳಿದರೆ ಅದು ತಪ್ಪಾಗಲಾರದು. ಯಾವದೋ ಒಂದು ಆಧಾರದ ಮೇಲೆ ವರ್ಣಭೇದವನ್ನು ಮಾಡಿಕೊಂಡಿರತಕ್ಕ ಸಮಸ್ಯೆಯನ್ನು ಮುಂದುವರಿಸಿಕೊಂಡು ಬಂದಿದೆ. ಈ ವರ್ಣ ಭೇದವನ್ನು ಕನಬಿನ ಆಧಾರದ ಮೇಲೆ ಹಿಂದಕ್ಕೆ ಜನತೆ ಉಪಯೋಗಿಸುತ್ತಿದ್ದರು. ಇಂದಿಗೂ ಕೂಡ ಅದೇ ಧ್ಯೇಯವನ್ನು ಮುಂದುವರಿಸಿಕೊಂಡು ನಾವು ಬರುತ್ತಿದ್ದೇವೆ. ಈ ವರ್ಣಭೇದದಿಂದ ಸಮಾಜದ ಮೇಲೆ ಅನೇಕ ಶತಮಾನಗಳಲ್ಲಿ ಎಂಥೆಂಥ ಪರಿಣಾಮವಾಗಿದೆ, ಸಮಾಜದಲ್ಲಿ ಅಂದೋಲನ, ಕ್ರಾಂತಿ ಉಂಟಾಗಿದೆ, ಎಂಬುದನ್ನು ಪರಿಶೀಲಿಸುವುದು ಪ್ರಸಕ್ತ ಪರಿಸ್ಥಿತಿಯಲ್ಲಿ, ಈ ನಿರ್ಣಯದ ಮೂಲಕ ಸಮಯೋಚಿತ ಸಮಸ್ಯೆಯಾಗಿದೆ ಎಂದು ನಾನು ಹೇಳಬಯಸುತ್ತೇನೆ. ಈ ವರ್ಣಭೇದ ಬಹು ಕಾಲದಿಂದ ನಮ್ಮ ಸಮಾಜದಲ್ಲಿದ್ದು ಬೇರು ಬಿಟ್ಟು ಬಹುದೂರ, ಆಳವಾಗಿ ಬೇರೂರಿದೆ, ನಮ್ಮ ಹಿಂದೂ ದೇಶದಲ್ಲಿಯ ಜನಾಂಗ ಸರಿಯಾಗಿ ಸುಭದ್ರವಾಗಿ ಬೆಳೆಯುವುದಕ್ಕೆ ಈ ವರ್ಣಭೇದ ಅನೇಕ ಅಡ್ಡಿ ಆತಂಕಗಳನ್ನು ಒಡ್ಡಿದೆಎಂದು ಹೇಳಿದರೆ ಅದು ತಪ್ಪಾಗಲಾರದು. ಈ ರೀತಿ ಆಗಿದೆಎಂಬುದಕ್ಕೆ ಅನೇಕ ನಿದರ್ಶನಗಳು ಇವೆ. ಇದನ್ನು ಅರಿತುಕೊಂಡು ನಮ್ಮ ಹಿಂದೂರಾಷ್ಟ್ರವನ್ನು ಒಂದು ಸುಭದ್ರವಾದ ರಾಷ್ಟ್ರವನ್ನಾಗಿಮಾಡಬೇಕೆಂದು, ಆಧ್ಯಾತ್ಮ ವಿಷಯವನ್ನೇ ತಮ್ಮ ಕನಬನ್ನಾಗಿ ಇಟ್ಟುಕೊಂಡಿರತಕ್ಕ ಆಚಾರ್ಯರು ಪ್ರಸಾರಮಾಡಿದ್ದನ್ನು ಅನೇಕ ತಲೆತಲಾಂತರಗಳಿಂದ, ಸಮಾಜ ಸುಧಾರಣೆ ಮಾಡಬೇಕೆಂಬ ದೃಷ್ಟಿಯಿಂದ, ತಮ್ಮ ಅಭಿಪ್ರಾಯಗಳನ್ನು ಸಮಾಜದ ಮುಂದೆ ಅವರು ಇಟ್ಟಿದ್ದಾರೆ. ಮೊದಲನೆಯದಾಗಿ ಶ್ರೀ ರಾಮಾನುಜಾಚಾರ್ಯರು, ಸಮಾಜದಲ್ಲಿ ಇರತಕ್ಕ ಕುಂದುಕೊರತೆಗಳನ್ನು ಪರಿಹರಿಸುವದಕ್ಕೆ, ಅಸ್ಪೃಶ್ಯತಾ ಭೇದಭಾವನೆಗಳನ್ನು ನಿರ್ಮೂಲಮಾಡಬೇಕು ಎಂದು ಹೇಳಿದ್ದಾರೆ. ಇಲ್ಲದೇ ಹೋದರೆ ಮೋಕ್ಷ ಸಿಕ್ಕದು ಎಂದು ಹೇಳಿ, ಸಂಸ್ಕೃತಿಯ ಅಭಿವೃದ್ಧಿಯ ದೃಷ್ಟಿಯಿಂದ ಅದಕ್ಕಾಗಿ ಪ್ರಯತ್ನಪಟ್ಟರು. ಅವರ ಪ್ರಯತ್ನ ಬಹಳ ಪರಿಣಾಮಕಾರಿಯಾಗಿದೆ. ಇವತ್ತಿನದಿವಸ ಮಹಾತ್ಮಾ ಗಾಂಧಿಯವರು ಹಾಗು ನಾವೂಕೂಡ ಅದನ್ನೇ ಉಲ್ಲೇಖಿಸಿ ಅನೇಕ ಸೂಚನೆಗಳನ್ನೂ ಅಭಿಪ್ರಾಯಗಳನ್ನೂ ಕೊಟ್ಟಿದ್ದೇವೆ. ಇನ್ನು ಎರಡನೆಯದಾಗಿ 12ನೆಯ ಶತಮಾನದಲ್ಲಿ ಇರತಕ್ಕದ್ದು ಒಂದು ವೈಶಿಷ್ಟ್ಯವಾಗಿದೆ. ಸಮಾಜದಲ್ಲಿ ಅದೇ ತತ್ವವನ್ನು ಎರಡನೆಯ ಶತಮಾನದಲ್ಲಿ ಕದಂಬರು, ಮೂರನೆಯ ಶತಮಾನದಲ್ಲಿ ರಾಷ್ಟ್ರಕೂಟರು, ಏಂಟನೆಯ ಶತಮಾನದಲ್ಲಿ ವಿಕ್ರಮಾದಿತ್ಯನು ಪ್ರತಿಪಾದಿಸಿದ್ದಾರೆ. ಯಾವ ದೃಷ್ಟಿಯಿಂದ, ಯಾವ ಕಾರಣದಿಂದ ನಿರ್ಮೂಲ ಮಾಡುವುದು ಪೂರ್ತಿಯಾಗಿ ಯಶಸ್ವಿಯಾಗಲಲ್ಲ ಎಂಬುದನ್ನು ಸ್ವಲ್ಪಮಟ್ಟಿಗೆ ಪರಿಶೀಲನೆಮಾಡಿನೋಡಿದರೆ ಸಮಾಜದಲ್ಲಿಯ ಏರುಪೇರುಗಳು, ಮತ್ತು ಭೇದಭಾವನೆಗಳು ಮನುಷ್ಯನ ಮೇಲೆ ಎಷ್ಟು ಪರಿಣಾಮವನ್ನುಂಟುಮಾಡಿವೆ ಎಂಬ ಚಿತ್ರ ಸ್ಪಷ್ಟವಾಗಿ ನಮಗೆ ಗೋಚರವಾಗುತ್ತದೆ. ಉದಾಹರಣೆ

(ಶ್ರೀ ವೈ. ವೀರಪ್ಪ)

ಗಾಗಿ ಬಸವಣ್ಣನವರು ಮೋಚಯ್ಯ ಎಂಬ ಆದಿಕರ್ನಾಟಕನೊಡನೆ ಬ್ರಾಹ್ಮಣ ಕನ್ಯೆಯನು ಕೊಟ್ಟು ಮದುವೆಯ ಸಂಬಂಧ ಮಾಡೋಣಎಂದು ಪ್ರಯತ್ನಮಾಡಿದಾಗ್ಗೆ ಒಂದು ಕ್ರಾಂತಿಯಾಯಿತು, ಆಂದೋಲನವಾಯಿತು. ಅದಕ್ಕೆ ಆಗ್ಗೆ ಅರಸನಾಗಿದ್ದ ಬಿಜ್ಜಳನು ಕೂಡ ವಾದಮಾಡಿ ಕಡೆಗೆ ವಿರೋಧಿಸಿದನು. ಈ ಎಲ್ಲ ಹಿನ್ನೆಲೆಯನ್ನು ನಾವು ಈ ಠರಾವನ್ನು ಯೋಚಿಸುವಾಗ ನೆನಪಿನಲ್ಲಿಡಬೇಕು. ಈ ದೃಷ್ಟಿಯಿಂದ ಈ ಠರಾವು ಸಮಯೋಚಿತವೂ ಪರಿಣಾಮಕಾರಿಯೂ ಆಗಿದೆ ಎಂದು ನಾನು ಹೇಳುತ್ತೇನೆ. ಅನೇಕ ರೀತಿಯಲ್ಲಿ ಅಸ್ಪೃಶ್ಯತೆಯ ನಿವಾರಣೆಗಾಗಿ ಬಸವಣ್ಣನವರು ಪ್ರಯತ್ನಮಾಡಿದರು. 12ನೆಯ ಶತಮಾನದಲ್ಲಿ ಸಮಾಜ ಸುಧಾರಣೆಗಾಗಿ ಬಸವಣ್ಣನವರು ಏನು ಪ್ರಯತ್ನಮಾಡಿದರೋ ಅದನ್ನೇ ಇಂದು 20ನೆಯ ಶತಮಾನದಲ್ಲಿ ಮಹಾತ್ಮಾ ಗಾಂಧಿಯವರು ಮಾಡಿದ್ದಾರೆ. ಸಮಾಜದಲ್ಲಿಯ ಭೇದಭಾವಗಳನ್ನು ನಿರ್ಮೂಲಮಾಡಬೇಕೆಂದು ಅದನ್ನು ಕಾರ್ಯರೂಪಕ್ಕೆ ತರಬೇಕೆಂದು ಪ್ರಯತ್ನಮಾಡಿದ್ದು ಬಹಳ ಸಂತೋಷ. ಮಹಾತ್ಮಾ ಗಾಂಧಿಯವರು ಇಂಥ ಒಂದು ಉದಾತ್ತವಾದ ಧ್ಯೇಯವನ್ನು ನಮ್ಮ ಮುಂದೆ ಇಟ್ಟುಹೋಗಿದ್ದಾರೆ. ಇಂದು ಅವರ ಹಿಂಬಾಲಗರು ಅವರ ಧ್ಯೇಯಧೋರಣೆಗಳನ್ನೇ ಪರಿಪಾಲಿಸುತ್ತಿದ್ದಾರೆ: ಅನುಷ್ಠಾನಕ್ಕೆ ತರುತ್ತಿದ್ದಾರೆ. ಆದರೆ ಇಂದು ಜನರ ಮನೋಭಾವನೆ ಬದಲಾವಣೆ ಆಗಿದೆಯೆ? ಮಹಾತ್ಮಾ ಗಾಂಧಿಯವರ ಧ್ಯೇಯಧೋರಣೆಗಳನ್ನು ತಮ್ಮ ಆದರ್ಶವಾಗಿ ಇಟ್ಟುಕೊಂಡಿರುವ ಇಂದಿನ ಅವರ ಅನುಯಾಯಿಗಳು, ಸಮಾಜವನ್ನು ಸಂತುಷ್ಟಿಪಡಿಸುವ, ತೃಪ್ತಿಪಡಿಸುವ ದೃಷ್ಟಿಯಿಂದ ಆ ಧ್ಯೇಯಧೋರಣೆಗಳನ್ನು ಸರಿಯಾಗಿ ಮುಂದುವರಿಸಿಕೊಂಡುಹೋಗುತ್ತಿದ್ದಾರೆಯೆ? ನಿಜವಾಗಿಯೂ ಧ್ಯೇಯಧೋರಣೆಗಳನ್ನು ಅನುಷ್ಠಾನಕ್ಕೆ ತಂದಿದ್ದಾರೆಯೇ ಎಂಬುದನ್ನು ಪರಿಶೀಲನೆಮಾಡಿ ನೋಡಿದರೆ ಏನೂಮಾಡಿಲ್ಲವೆಂದು ಹೇಳಬೇಕಾಗುತ್ತದೆ. ಶ್ರೀ ರಾಚಯ್ಯನವರು ಹೇಳಿದಹಾಗೆ ನಮ್ಮ ರಾಜ್ಯಾಂಗವನ್ನು ತೆಗೆದುಕೊಂಡರೆ ನಿಜವಾಗಿಯೂ ಪ್ರತಿಯೊಬ್ಬರೂ, ಪ್ರತಿಯೊಂದು ಜನಾಂಗವೂ ಬೆಳೆಯಬೇಕಾದರೆ ಸರಿಸಮಾನವಾದ ಹಕ್ಕುಇದೆ, ಅವಕಾಶವಿದೆ. ಯಾವ ರೀತಿಯಲ್ಲೂ ಯಾರಿಗೂ ಅನ್ಯಾಯವಾಗದಂತೆ ಪ್ರತಿಯೊಬ್ಬರ ಹಕ್ಕನ್ನೂ ನಮ್ಮ ರಾಜ್ಯಾಂಗ ಕಾಪಾಡುತ್ತದೆ. ಈ ದೃಷ್ಟಿಯಿಂದ ಈ ಮಹತ್ತರವಾದ ಧ್ಯೇಯಧೋರಣೆಗಳೂ ತತ್ವಗಳೂ ರಾಜ್ಯಾಂಗದಲ್ಲಿ ಅಡಕವಾಗಿವೆ. ನಮ್ಮ ದಾರಿಯಲ್ಲಿ ಬೆಳಕು ಚೆಲ್ಲಿವೆ.

ಹತ್ತು ವರ್ಷಗಳಿಂದ ರಾಜ್ಯಾಂಗದ ನಿಯಮಗಳನ್ನನುಸರಿಸಿ ರಾಜ್ಯಭಾರಮಾಡುತ್ತಿದ್ದಾರೆ. ಆದರೆ ಅದರ ತತ್ವವನ್ನು ಸ್ವಲ್ಪವಾದರೂ ಆಚರಣೆಗೆ ತಂದಿದ್ದಾರೆಯೇ ಎಂದರೆ ನಿಜವಾಗಿಯೂ ಬಾಯಲ್ಲಿ ಹೇಳುತ್ತಿದ್ದಾರೆಯೇ ಹೊರತು ಕಾರ್ಯತಃ ಆಚರಣೆಗೆ ತರುತ್ತಿಲ್ಲ. ಶ್ರೀ ಭೀಮಸ್ವನಾಯಕರು ಹೇಳಿದಹಾಗೆ ಉತ್ತರ ಕರ್ನಾಟಕದಲ್ಲೊಂದು ಜನರಲ್ ಹಾಸ್ಪಟಲ್, ದಕ್ಷಿಣ ಕರ್ನಾಟಕದಲ್ಲೊಂದು ಜನರಲ್ ಹಾಸ್ಪಟಲ್ ತೆರೆದರೆ ಉದ್ದೇಶ ಸಫಲವಾಗುವುದಿಲ್ಲ. ಮಾಮೂಲು ರೀತಿಯಿಂದ ಕೆಲಸಮಾಡುತ್ತಿದ್ದಾರೆಯೇ ವಿನಾ ನಿಜವಾಗಿಯೂ ಪರಿಣಾಮಪೆಷ್ಟಿದೆಯೆಂದು ನೋಡಿ ಸಫಲವಾಗುವಂತೆಮಾಡುತ್ತಿಲ್ಲ. ಹತ್ತು ವರ್ಷಗಳ ಅನುಭವದಲ್ಲಿ ಸಮಾಜದಲ್ಲಿ ನಾನಾ ಕೋಮುಗಳಲ್ಲಿ, ನಾನಾ ರಂಗಗಳಲ್ಲಿ ಎಷ್ಟು ಉತ್ತಮವಾದ ಪರಿಸ್ಥಿತಿಯುಂಟಾಗಿದೆ, ನಮ್ಮ ಆಗುಹೋಗುಗಳು ಯಾವ ರೀತಿಯಿವೆ, ರಾಜ್ಯಾಂಗದಲ್ಲಿ ಅಡಕವಾಗಿರುವ ತತ್ವವನ್ನನುಸರಿಸಿ ವಾದವಾಡುವುದಕ್ಕೆ ಎಷ್ಟು ತೊಡಕುಂಟಾಗಿದೆಎಂದು ಸ್ವಲ್ಪಮಟ್ಟಿಗೆ ವಿಚಾರಮಾಡೋಣ. ಮೊದಲನೆಯದಾಗಿ ಈ ದಿವಸ ಮುಂದುವರಿದವರು, ಹಿಂದುಳಿದವರು ಎಂದು ಎರಡು ಪಂಗಡ ನಮ್ಮ ಮುಂದಿದೆ. ಬಹುಶಃ ಹಿಂದೆ ಕೆಲವು ಜಾತಿಗಳಲ್ಲಿ ಶೇಕಡ 60 ಅಥವಾ 75 ಮಂದಿ ವಿದ್ಯಾವಂತರಿದ್ದರು. ಮುಂದುವರಿದ ಜನಾಂಗವೆಂದು ಪರಿಗಣಿಸಿರುವವರಲ್ಲಿ ಸಹ ಶೇಕಡ 10ರಿಂದ 20ರವರೆಗೆ ಮಾತ್ರ ವಿದ್ಯಾವಂತರಿದ್ದರೆ ಆ ಜನಾಂಗ ಹಿಂದುಳಿದ ಜನಾಂಗವೆಂದು ಪರಿಗಣಿಸಲ್ಪಡಬೇಕು. ಈ ದಿವಸ ಮುಂದುವರಿದವರು, ಹಿಂದುಳಿದಿರುವವರು ಎಂದು ವಿಂಗಡಿಸಬೇಕಾದರೆ ಠರಾವಿನಲ್ಲಿರುವ ಸೂಚನೆ, ಪದಗಳು ಇವನ್ನು ಅರ್ಥಮಾಡಿಕೊಳ್ಳಬೇಕು. ಆರ್ಥಿಕವಾಗಿ, ಸಾಮಾಜಿಕವಾಗಿ ಯಾರು ಯಾರು ಎಷ್ಟು ಮುಂದುವರಿದಿದ್ದಾರೆ, ಎಷ್ಟು ಹಿಂದುಳಿದಿದ್ದಾರೆ ಎಂಬುದನ್ನು ಸ್ವಲ್ಪ ವಿಶದವಾಗಿ ನೋಡೋಣ. ಬ್ರಾಹ್ಮಣರಲ್ಲೂ ಎಲ್ಲಾ ಮುಂದುವರಿದಿದ್ದಾರೆಂದು ಭಾವಿಸುವುದಕ್ಕಾಗುವುದಿಲ್ಲ. ಈ ದಿವಸ ಬ್ರಾಹ್ಮಣರು ದೇಶದಲ್ಲಿ ಎಷ್ಟಿದ್ದಾರೆ, ಅವರಲ್ಲಿ ಎಷ್ಟು ಜನ ಯಾವ ಅಂತಸ್ತಿನಲ್ಲಿ ಜೀವನ ಮಾಡುತ್ತಿದ್ದಾರೆಎಂದು ನೋಡಿದರೆ ಅನೇಕರ ಸ್ಥಿತಿಗತಿ ಬಹಳ ಚಿಂತಾಜನಕವಾಗಿದೆ. ಅವರಿಗೆ ಜಾತಿಯ ಆಧಾರದಮೇಲೆ ಸಮಾಜದಲ್ಲಿ ಸೌಲಭ್ಯಗಳನ್ನು ಮೊಟಕುಮಾಡಿದ್ದೇವೆ. ಈ ದಿವಸ ಬ್ರಾಹ್ಮಣರಲ್ಲೂ ಕೂಡ ಹಿಂದುಳಿದವರಿದ್ದಾರೆ. ಆರ್ಥಿಕವಾಗಿ ಅವರ ಸ್ಥಿತಿಗತಿ, ಜೀವನಮಟ್ಟ ನೋಡಿದರೆ ನಿಜವಾಗಿಯೂ ಕೂಡ ಅವರಲ್ಲೂ ಹಿಂದುಳಿದ ಜನರಿದ್ದಾರೆ, ಶೇಕಡ 30-40 ಭಾಗದಷ್ಟಿದ್ದಾರೆ. ಅನೇಕ ಕೋಮುಗಳವರು ಈ ದಿವಸ ಬಹಳವಾಗಿ ಸಮಾಜದಲ್ಲಿ ಹಿಂದುಳಿದು ಆರ್ಥಿಕವಾಗಿ ತೊಂದರೆಗೀಡಾಗಿದ್ದಾರೆ. ಸಮಾಜದಲ್ಲಿರುವ ಏರುಪೇರುಗಳನ್ನು ಮುಂದುವರಿಸಿಕೊಂಡು ಹೋದರೆ ನಿಜವಾಗಿಯೂ ಮುಕ್ತಿ ಸಿಕ್ಕುವುದಿಲ್ಲ, ರಾಜ್ಯಾಂಗದ ತತ್ವವನ್ನು ಕಾರ್ಯರೂಪಕ್ಕೆ ತರುವುದಕ್ಕಾಗುವುದಿಲ್ಲ. ಈ ದೃಷ್ಟಿಯಿಂದ ಮೊದಲು ಇದು ನಮ್ಮ ರಾಷ್ಟ್ರ, ಹಿಂದೂ ಜನಾಂಗವೆಲ್ಲಾ ಒಂದೇ ಎಂಬ ಏಕರೂಪವಾದ ಮನೋಭಾವನೆ ಬರಬೇಕಾದರೆ ದೇಶದಲ್ಲಿ ಈ ದಿವಸ ಪ್ರತಿಯೊಂದು ಕೋಮುಗಳಲ್ಲೂ ಇರುವ ಹಿಂದುಳಿದವರಿಗೆ, ಅವಿದ್ಯಾವಂತರಿಗೆ, ಆರ್ಥಿಕವಾಗಿ ಬಹಳ ದುಸ್ಥಿತಿಯಲ್ಲಿರುವ ಜನರಿಗೆ ಸ್ವಲ್ಪಮಟ್ಟಿಗೆ ರಕ್ಷಣೆ ಕೊಡಬೇಕಾಗುತ್ತದೆ. ಅದಕ್ಕೆ ಅಂಕಿಅಂಶವಿದೆಯೇ ಎಂದರೆ ಇಲ್ಲ; ಸಂಬಂಧಪಟ್ಟ ಅಂಕಿಅಂಶ ಶೇಖರಿಸಬೇಕಾಗಿದೆ. ಜಾತಿವಾದವನ್ನು ಈ ದಿವಸ ನಾನು ಸಮರ್ಥನೆಮಾಡುತ್ತಿಲ್ಲ. ಏಕೆಂದರೆ ಯಾವಯಾವ ಜಾತಿಗಳಲ್ಲಿ ಬಹಳಮಟ್ಟಿಗೆ ಮುಂದುವರಿದಿದ್ದಾರೆಂಬ ಭಾವನೆಯಿದೆಯೋ ಆ ಭಾವನೆಗೆ ಸಾಕಷ್ಟು ಆಧಾರವಿಲ್ಲ. ಉದಾಹರಣೆಗೆ ಬ್ರಾಹ್ಮಣರು, ಲಿಂಗಾಯಿತರು ಅಥವಾ ಒಕ್ಕಲಿಗರನ್ನು ತೆಗೆದುಕೊಳ್ಳೋಣ, ಆ ಕೋಮುಗಳಲ್ಲಿ ಶೇಕಡ ಇಪ್ಪತ್ತರಿಂದ 40ರವರೆಗೆ ಹಿಂದುಳಿದವರಿದ್ದಾರೆ. ಷೆಡ್ಯೂಲ್ಡ್ ಕ್ಯಾಸ್ಟ್ಸ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್‌ಗಳಲ್ಲಿ ಹಿಂದುಳಿದವರು ಬಹಳವಾಗಿದ್ದಾರೆ. ಈಗ ಮುಂದುವರಿದವರು ಮತ್ತು ಹಿಂದುಳಿದವರು ಎಂದು ಎರಡು ವರ್ಗ ವಿಂಗಡಿಸಬೇಕಾಗಿದೆ. ಶ್ರೀಯುತರುಗಳಾದ ಭೀಮಪ್ಪ ನಾಯಕರು, ರಾಚಯ್ಯನವರು, ಚನ್ನಿಗರಾಮಯ್ಯನವರು ಮುಂದುವರಿದವರ ಗುಂಪಿನಲ್ಲಿ ಸೇರಿದವರೆಂದು ಹೇಳಬೇಕಾಗಿದೆ; ಆರ್ಥಿಕವಾಗಿ, ಸಾಮಾಜಿಕವಾಗಿ

ಅವರು ಸುಭದ್ರವಾದ ರೀತಿಯಲ್ಲಿದ್ದಾರೆ. ಪ್ರತಿಯೊಂದು ಕೋಮಿನಲ್ಲೂ ನೂರಾರು ಒಳಪಂಗಡಗಳಿರಬಹುದು. ಅವುಗಳನ್ನು ಪರೀಕ್ಷೆಮಾಡಿ, ಆ ಕೋಮಿನವರ ಸ್ಥಿತಿ ಹೇಗಿದೆಎಂದು ಅಂಕಿಅಂಶ ಸಂಗ್ರಹ ಮಾಡೋಣ, ಒಂದು 'ಎ' ಕ್ಲಾಸು, ಎರಡನೆಯದು 'ಬಿ' ಕ್ಲಾಸು ಎಂದು ಮಾಡೋಣ. ಇಂದ ಆರ್ಥಿಕವಾಗಿ, ಕಸಬುಗಳಲ್ಲಿ ಮತ್ತು ಸಾಘಾಜಿಕವಾಗಿ ಯಾರು ಮುಂದುವರಿದಿದ್ದಾರೆ ಅವರನ್ನು 'ಎ' ಕ್ಲಾಸಿಗೆ ಸೇರಿಸಿ; 'ಬಿ' ಕ್ಲಾಸಿಗೆ ಆದಿಕರ್ಣಾಟಕರು ಅಥವಾ ಬೇರೆ ಕೋಮಿನವರು ಬರಬೇಕಾಗಿಲ್ಲ, ಆರ್ಥಿಕವಾಗಿ, ಸಾಮಾಜಿಕವಾಗಿ ಎಷ್ಟು ಜನ ಯಾವಯಾವ ಜನಾಂಗಗಳಲ್ಲಿ ಹಿಂದುಳಿದವರಿದ್ದಾರೆ ಅವರನ್ನೆಲ್ಲಾ ಸೇರಿಸಬೇಕು. ಇದಕ್ಕೆ ಬಹುಶಃ ಬಹಳ ಮೇಧಾವಿಗಳಾಗಲಿ, ಬುದ್ಧಿವಂತರಾಗಲಿ ಬೇಕಾಗಿಲ್ಲ. ಯಾವ ರೀತಿ ಅಂಕಿಅಂಶ ಶೇಖರಿಸಬಹುದು, ಯಾರು ದುಸ್ಥಿತಿಯಲ್ಲಿದ್ದಾರೆ, ಯಾರು ಹಿಂದುಳಿದಿದ್ದಾರೆ ಎಂಬುದನ್ನು ಹೇಗೆ ತಿಳಿಯಬೇಕು, ನಮ್ಮ ಸುತ್ತಮುತ್ತಲಿರುವ ಕತ್ತಲನ್ನು ಯಾರೀತಿ ನಿವಾರಣೆಮಾಡಿಕೊಳ್ಳಬೇಕು ಎಂಬುದನ್ನು ಹೇಳುತ್ತೇನೆ. ಒಂದು ಸುಧಾರಣೆ ಹೊಸದಾಗಿ ಮಾಡಬೇಕಾದರೆ ಕಷ್ಟವಾಗಿ ಕಾಣುತ್ತದೆ. ಅದನ್ನು ಗಮನಿಸದೆ ತತ್ವವನ್ನರಿತು ಆಳವಾಗಿ, ತೀಕ್ಷ್ಣವಾಗಿ ಪರೀಕ್ಷೆಮಾಡಿ ಕಾರ್ಯಗತಮಾಡುವುದಕ್ಕೆ ಪ್ರಯತ್ನಮಾಡಬೇಕಾಗುತ್ತದೆ. ಪ್ರತಿಯೊಂದು ಗ್ರಾಮಗಳಿಗೂ ಹೋಗಿ ಮಕ್ಕಳುಮರಿ ಎಷ್ಟಿದ್ದಾರೆ, ವಿದ್ಯಾವಂತರೆಷ್ಟಿದ್ದಾರೆ, ಎಷ್ಟು ಕಂದಾಯ ಕೊಡುತ್ತಾರೆ, ಭೂಮಿ ಎಷ್ಟು ಜನರಿಗಿದೆ ಇತ್ಯಾದಿ ವಿವರಗಳನ್ನು ಮೂಲೆಮೂಲೆಗಳಲ್ಲಿ ಸಂಗ್ರಹಿಸಿ ಹಿಂದುಳಿದರು, ಮುಂದುವರಿದವರು ಎಂದು ಎರಡು ಭಾಗ ಮಾಡಿ ಹಿಂದುಳಿದಿರುವವರಿಗೆ ಶೈಕ್ಷಣಿಕವಾಗಿ, ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಮುಂದುವರಿಯಲ್ಲು ಮಾನ್ಯಮಿತ್ರರು ಹೇಳಿದಹಾಗೆ ರಾಷ್ಟ್ರದ ಭಂಡಾರದಿಂದ ಹಣಒದಗಿಸಿ ಪ್ರೋತ್ಸಾಹನೀಡಬೇಕು. ಹರಿಜನರನ್ನು ಮಾತ್ರ ಉದ್ಧಾರಮಾಡಿದರೆ ಸಾಲದು. ನಮಾಜದಲ್ಲಿರುವ ಏರುಪೇರು ಒಂದೇಸಮಮಾಡಿ ಉತ್ತೇಜನ ಸರಿಯಾದ ರೀತಿಯಲ್ಲಿ ಕೊಡದಿದ್ದರೆ ನಮಾಜ ಮುಂದುವರಿಯುವುದಿಲ್ಲ, ಜನಾಂಗ ಏಳಿಗೆಯಾಗುವುದಿಲ್ಲ. ಅಂಕಿಸಂಖ್ಯೆಗಳನ್ನೆಕೆ ಸಂಗ್ರಹಿಸಬೇಕೆಂದರೆ ಬ್ರಾಹ್ಮಣರಲ್ಲೂ ನಿರ್ಗತಿಕರು ಕೆಲವರಿದ್ದಾರೆ. ಅವರೂ ನಮ್ಮಹಾಗೆ ಮನುಷ್ಯರಲ್ಲವೆ? ಲಿಂಗಾಯಿತರಲ್ಲೂ ನನ್ನಂಥವರು ಕೆಲವರು ಅನುಕೂಲಸ್ಥರಾಗಿರಬಹುದು. ಅವರಲ್ಲೂ ಈ ದಿವನ ಬಡವರಿಲ್ಲವೇ? ಶ್ರೀ ಮರಿಯಪ್ಪನವರಮ್ಮಕೂಡ ಏಕೆ ಹಿಂದುಳಿದವರೆಂದು ಕರೆಯಬೇಕು? ಅವರ ಚಮತ್ಕಾರ ಮೆಚ್ಚತಕ್ಕದ್ದಾಗಿದೆ. ಆರ್ಥಿಕಮಂತ್ರಿಗಳಾಗಿ ಅವರು ಬಹಳ ಕಠಿಣವಾದ ಸಮಸ್ಯೆಯನ್ನೆದುರಿಸಿದ್ದಾರೆ. ಅವರು ಕಾಲಕ್ಕೆ ಅನುಸಾರವಾಗಿ ಸರಿಯಾದ ಯೋಜನೆ ಮಾಡಿದ್ದಾರೆ. ಒಳ್ಳೆಯ ಅಕಪ್ರಿಮೆಡಿಟೇಟೆಡ್ ಆರ್ಟ್ ಅವರಲ್ಲಿದೆ.

ಶ್ರೀಮಾನ್ ಮರಿಯಪ್ಪನವರಲ್ಲಿರುವ ಚಾಣಾಕ್ಷತನ, ಚಮತ್ಕಾರ, ಸಮಯೋಚಿತವರ್ತನೆ, ಮತ್ತು ವಿಷಯ ಸಂಗ್ರಹಣಾಶಕ್ತಿ ಇವು ನಿಜವಾಗಿಯೂ ಕೂಡ ಪ್ರಶಂಸನೀಯವಾದುವು. ಅವರು ಎಷ್ಟೋ ವಿಷಯಗಳನ್ನು ಈಗ ತಿಳಿಸಿದ್ದಾರೆ. ಪ್ರತಿಯೊಂದು ಹಿಂದುಳಿದ ಜನಾಂಗಕ್ಕೂ ಅನೇಕ ಸಹಾಯ ಸೌಲಭ್ಯಗಳನ್ನು ಕೊಡುತ್ತಿದ್ದರು. ಅದೇರೀತಿಯಾಗಿ ಮರಿಯಪ್ಪನವರ ಜನಾಂಗಕ್ಕೂ ಕೊಡುತ್ತಿದ್ದರು. ಈಗ ಮರಿಯಪ್ಪನವರು ಮುಂದುವರಿದಿದ್ದಾರೆ. ಅಂತೆಯೇ ಇತರ ಕೆಲವರೂ ಮುಂದುವರಿದಿದ್ದಾರೆ. ಇವರಿಗೆಲ್ಲ ಅವರು ಮುಂದುವರಿದಮೇಲೆ ಏಕೆ ಸೌಲಭ್ಯಗಳನ್ನು ಕೊಡಬೇಕು, ಈ ಜನಾಂಗಗಳಲ್ಲಿ ಎಷ್ಟುಜನ ಆರ್ಥಿಕವಾಗಿ, ಸಾಮಾಜಿಕವಾಗಿ, ಮುಂದೆ ಇದ್ದಾರೆ ಅಂಥವರನ್ನೆಲ್ಲ 'ಎ' ವರ್ಗಕ್ಕೆ ಸೇರಿಸಬೇಕು. ನನ್ನಂತೆ ಇರುವವರೂ ಸಹ 'ಎ' ವರ್ಗಕ್ಕೆ ಸೇರುತ್ತಾರೆ. ಮತ್ತು ನಿಜವಾಗಿಯೂ, ಸಾಮಾಜಿಕ ದೃಷ್ಟಿಯಿಂದ, ಆರ್ಥಿಕ ದೃಷ್ಟಿಯಿಂದ ಮತ್ತು ಇತರ ದೃಷ್ಟಿಗಳಿಂದ ಹಿಂದುಳಿದವರು ಯಾರುಯಾರಿದ್ದಾರೆ ಅವರೆಲ್ಲ 'ಬಿ' ವರ್ಗಕ್ಕೆ ಸೇರುತ್ತಾರೆ.

ಶ್ರೀ ಡಿ. ದೇವರಾಜ ಅರಸ್.—ಮೊದಲು ಕಾಂಪ್ಲಿಮೆಂಟ್ ಕೊಟ್ಟು ಕೊನೆಗೆ ಕುಂಬಳಕಾಯಿ ಕೊಟ್ಟರು.

ಶ್ರೀ ವೈ. ವೀರಪ್ಪ.—ವಾಸ್ತವವಾದ ವಿಷಯವನ್ನು ಹೇಳತ್ತಿದ್ದೇನೆ. ಅದು ಶ್ರೀಯುತರುಗಳಾದ ಎ. ಭೀಮಪ್ಪನಾಯಕ್, ಎಕ್. ರಾಚಯ್ಯ ಮೊದಲಾದವರೆಲ್ಲರಿಗೂ ಅನ್ವಯಿಸುತ್ತದೆ. ನಾನು ಆಗಲೇ ಹೇಳಿದಂತೆ ಮಾಡಿದ ಹೊರತು ಮೋಕ್ಷವಿಲ್ಲ. ಈ ರೀತಿ ಮಾಡಲು ಸಾಧ್ಯವಿಲ್ಲವೆಂದು ಹೇಳಬೇಡಿ. ಹಿಮಾಲಯ ಪರ್ವತವನ್ನು ಇಬ್ಭಾಗ ಮಾಡಬೇಕಾದರೆ ಈಶ್ವರನಿಗೆ ಇಲ್ಲದೆ ಇರತಕ್ಕ ಶಕ್ತಿ ಮನುಷ್ಯನಿಗೆ ಇದೆ. ಸಮಾಜ ಸುಧಾರಕರಾದಂಥ ಇಂಜಿನಿಯರುಗಳು ನಮ್ಮ ದೇಶದಲ್ಲಿದ್ದಾರೆ. ಅಂಥವರಿಂದ ಸಹಾಯವನ್ನು ಪಡೆಯಿರಿ. ಶ್ರೀಯುತರುಗಳಾದ ಮಲ್ಲಾರಾಧ್ಯ, ಭೀಮಪ್ಪ ನಾಯಕ್ ಮುಂತಾದವರ ಸಹಾಯದಿಂದ ಅಂಕಿ ಅಂಶಗಳನ್ನು ಸಂಗ್ರಹಿಸಿದರೆ ನಾವು ಇದನ್ನು ನಾಳೆ ಮುಂದುವರಿಸುವುದಕ್ಕೆ ಅನುಕೂಲವಾಗುತ್ತದೆ. ನಾವು ಆಶಾವಾದಿಗಳಾಗೋಣ. ಸಂಪೂರ್ಣವಾಗಿ ನಾಸ್ತಿಕರಾಗಿರಬೇಕಾದುದು ಅನಾವಶ್ಯಕ. ಗಾಂಧೀಜಿ, ಬಸವಣ್ಣ, ರಾಮಾನುಜಾಚಾರ್ಯ ಮುಂತಾದ ಮಹಾನುಭಾವರು ಯಾವ ರೀತಿಯಲ್ಲಿ ಸಮಾಜವನ್ನು ಉದ್ಧಾರ ಮಾಡುತ್ತಿದ್ದರು ಎಂದು ನೋಡಬೇಕು. ನಾವು ಅದೇರೀತಿಯಾಗಿ ಈ ಸಮಾಜವನ್ನು ಉದ್ಧಾರ ಮಾಡುವುದಕ್ಕೆ ಪ್ರಯತ್ನಿಸಬೇಕು.

ಮೊದಲನೆಯ ಕಾರ್ಯಕ್ರಮವೆಂದರೆ ಪ್ರತಿಯೊಂದು ಜಿಲ್ಲೆ ಮತ್ತು ತಾಲ್ಲೂಕಿನಲ್ಲಿಯೂ ಹಾಸ್ಟಲುಗಳನ್ನು ಹಿಂದುಳಿದ ವರ್ಗಗಳಿಗಾಗಿ ಏರ್ಪಡಿಸಿ, ವಿದ್ಯೆಯನ್ನು ಕಲಿಯುವುದಕ್ಕೆ ಬೇಕಾದ ಸೌಕರ್ಯಗಳೂ, ಸೌಲಭ್ಯಗಳೂ ಇಲ್ಲದೆ ನಿಜವಾಗಿಯೂ ಯಾವುದಕ್ಕೂ ಅನುಕೂಲವಿಲ್ಲದೆ ಇರತಕ್ಕ ಜನರ ಮಕ್ಕಳನ್ನು ತೆಗೆದು ಕೊಂಡು ಬಂದು ಈ ಹಾಸ್ಟಲುಗಳಲ್ಲಿ ಅವರನ್ನಿಟ್ಟು ವಿದ್ಯಾಭ್ಯಾಸಕ್ಕೆ ಬೇಕಾದ ಎಲ್ಲ ಸೌಲಭ್ಯಗಳನ್ನೂ ಒದಗಿಸಿಕೊಡಬೇಕು. ಮತ್ತು ಸಮಾಜದಲ್ಲಿರುವ ಉತ್ತಮ, ಕೀಳು, ಅಧಮ ಎನ್ನುವ ಭಾವನೆಯನ್ನು ಹೋಗಲಾಡಿಸಲು ಪ್ರಯತ್ನಿಸಬೇಕು. ನಾವು ಮೇಲು, ಆದಿಕರ್ಣಾಟಕರು ಕೀಳು ಎಂಬ ಭೇದವನ್ನು ನಿವಾರಿಸಬೇಕು. ಇದಕ್ಕೆ ಏನು ಮಾಡಬೇಕೆಂದರೆ ಕೇರಿ ಕೇರಿಗಳಲ್ಲಿ ಆದಿಕರ್ಣಾಟಕರಿಗೆ ಮತ್ತು ಇತರ ಹಿಂದುಳಿದ ವರ್ಗಗಳವರಿಗೆ ಮನೆಗಳನ್ನು ಕಟ್ಟಿಸಿಕೊಟ್ಟು ಅವರ ಜೀವನ, ನೈರ್ಮಲ್ಯ, ನಡೆನುಡಿ, ಇವನ್ನು ಉತ್ತಮ ಪಡಿಸಲು ಅವರಿಗೆ ಬೇಕಾಗಿರತಕ್ಕ ವಿದ್ಯೆ ಮತ್ತು ಇತರ ಸೌಲಭ್ಯಗಳನ್ನು ಒದಗಿಸಿಕೊಡಬೇಕು. ಇದು ಮುಖ್ಯವಾದ ಕರ್ತವ್ಯ. ಇಂಥದನ್ನು ಮಾಡಿಲ್ಲ.

ಎರಡನೆಯದು ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಜನರಲ್ ಹಾಸ್ಟಲುಗಳನ್ನು ತೆರೆಯಬೇಕೆಂಬುದು ನನ್ನ ಸಲಹೆ. ಬ್ರಾಹ್ಮಣರು, ಒಕ್ಕಲಿಗರು, ಲಿಂಗಾಯಿತರು, ಆದಿಕರ್ಣಾಟಕರು ಎಂಬ ಭೇದಭಾವವನ್ನು ಕಲ್ಪಿಸ

(ಶ್ರೀ ವೈ. ವೀರಪ್ಪ)

ಬಾರದು. ಅದಕ್ಕಾಗಿಯೇ ಜನರಲ್ ಹಾಸ್ಪಲುಗಳಿರ ಬೇಕೆಂದು ಹೇಳುತ್ತಿದ್ದೇನೆ. ನಾವು ಪ್ರತಿಯೊಂದು ಕೋಮಿನಲ್ಲಿ ಇರುವ ನಿಜವಾದ ಸ್ಥಿತಿಗತಿಗಳನ್ನು ತಿಳಿಯಲು ಅಂಕಿ ಅಂಶಗಳನ್ನು ಸಂಗ್ರಹಿಸಬೇಕಾಗಿದೆ. ಬ್ರಾಹ್ಮಣರು ಮುಂದುವರಿದ ಜನಾಂಗಕ್ಕೆ, forward community ಗೆ ಸೇರಿದ್ದಾರೆಂದರೆ, ಬ್ರಾಹ್ಮಣ ಜನಾಂಗದಲ್ಲಿರತಕ್ಕ ಅನೇಕ ಬಡವರಿಗೆ ಸಿಕ್ಕಬೇಕಾದ ಸೌಲಭ್ಯಗಳನ್ನು ಮೊಟಕು ಮಾಡಿದಂತಾಗುತ್ತದೆ. ನಮ್ಮ ದೇಶದಲ್ಲಿನ ಮತಭೇದಗಳನ್ನು ನಾವು ಸಾವ ಧಾನದಿಂದ, ಬಹಳ ಕಾಲದಿಂದ ತಡೆದುಕೊಂಡು ಬರುತ್ತಿದ್ದೇವೆ. ನಮಾಜದಲ್ಲಿನ ಏರು ಪೇರುಗಳನ್ನು ಮುಂದುವರಿಸಿಕೊಂಡು ಬರುತ್ತಿದ್ದೇವೆ, ಪಾಲಿಸಿ ಕೊಂಡು ಬರುತ್ತಿದ್ದೇವೆ. ಇಂಥದ್ದಕ್ಕೆಲ್ಲ ಇನ್ನು ಮುಂದೆಯೂ ಅವಕಾಶವನ್ನು ಕೊಟ್ಟರೆ, ಯಾವ ದೇಶ ದಲ್ಲಿ ಇಲ್ಲಿಯವರೆಗೂ ರಕ್ತರಹಿತವಾದ ಕ್ರಾಂತಿಗಳನ್ನು ಮಾಡಿ ಅದ್ಭುತವಾದ ಕೆಲಸಗಳನ್ನು ಸಾಧಿಸಿದ್ದೇವೆಯೋ, ಅದೇ ದೇಶದಲ್ಲಿ ರಕ್ತಸಹಿತವಾದ ಕ್ರಾಂತಿ ಗಳು ಆಗಬಹುದು. ಜನತೆ ಹಾಗೆ ಉದ್ರೇಕವಾಗುವು ದಕ್ಕೆ ಅವಕಾಶವನ್ನು ಕೊಡಬಾರದು. ಆದುದರಿಂದ ಈ ಸಂಬಂಧದಲ್ಲಿ ಸರ್ಕಾರದವರು ಒಂದು ಕಾನೂ ನನ್ನು ಮಾಡಿ ಅದನ್ನು ಕಡ್ಡಾಯವಾಗಿ ಜಾರಿಗೆ ತರ ಬೇಕು. ಹಾಗೆ ಮಾಡದೆ ಓಬೇರಾಯನ ಕಾಲದ ತತ್ವ ವನ್ನೇ ಮುಂದುವರಿಸಿಕೊಂಡು ಬಂದರೆ ಯುಗ ಯುಗ ಗಳು ಉರುಳಿದರೂ, ಕಲಿಯುಗವು ಪ್ರಳಯವಾದರೂ, ಈ ಸಮಸ್ಯೆಯನ್ನು ಪರಿಹಾರ ಮಾಡುವುದಕ್ಕಾಗುವು ದಿಲ್ಲ. ನಾವೆಲ್ಲ ಒಂದೇ ರಾಜ್ಯಾಂಗದ, ಒಂದೇ ಬಾವುಟದ ಅಡಿಯಲ್ಲಿ ಬಾಳಬೇಕು. ಜನತೆಯ ಸಹಕಾರವನ್ನು ಪಡೆಯಬೇಕು, ಅವರ ಬೆಂಬಲವನ್ನು ಪಡೆಯಬೇಕಾಗಿದೆ. ಈ ರೀತಿಯಾಗಿ ನಾವು ಸರ್ವತೋಮುಖವಾಗಿ ಬೆಳೆಯಬೇಕು. ನಮಗೆ ಸ್ವಾತಂತ್ರ್ಯ ಬಂದು ಹನ್ನೊಂದು ವರ್ಷಗಳಾದರೂ ನಾವು ನಿರೀಕ್ಷಿಸಿದಷ್ಟು ಆಗಿಲ್ಲ.

ಈ ಸಂದರ್ಭದಲ್ಲಿ ನಾನು ಒಂದೇ ಒಂದು ವಿಚಾರ ವನ್ನು ಹೇಳುತ್ತೇನೆ. ನಾನೂ ಮತ್ತು ನನ್ನ ಮಾನ್ಯ ಮಿತ್ರರಾದ ಮಲ್ಲಾರಾಧ್ಯರವರೂ ಪ್ರವಾಸ ಹೋಗಿ ದ್ದಾಗ ಮದ್ದೂರಿನಲ್ಲಿ ವಡೆ ತಿನ್ನುವುದಕ್ಕೆ ಹೋದೆವು. (ನಗು). ಇದನ್ನು ಏಕೆ ಹೇಳುತ್ತಿದ್ದೇನೆಂದರೆ ಪ್ರತಿ ನಿತ್ಯವೂ ನಮ್ಮ ವಿಚರಿಯ ಕಾರ್ಯಗಳಲ್ಲಿ ನಮಗೆ ಎಷ್ಟೋ ಅನುಭವಗಳು ಬರುತ್ತವೆ. ಇದು ತಮಾಷೆಗೆ ಹೇಳತಕ್ಕ ಮಾತಲ್ಲ. ನಾವು ವಡೆಯನ್ನು ತಿನ್ನುವಾಗ ಕಾರಿನ ಸುತ್ತಲೂ ಕೆಲವು ಹುಡುಗರು ನಿಂತರು. ಬರೀ ಲಂಗೋಟಿ ಹಾಕಿಕೊಂಡಿದ್ದ ನಾಲ್ಕಾರು ಜನ ಮಕ್ಕಳು ಬಂದು ಕಾರನ್ನು ಮುಟ್ಟಿಕೊಂಡರು. ನಮಗೆ ತಿಂಡಿ ತಿನ್ನುವುದಕ್ಕೆ ಅವಕಾಶವಿಲ್ಲದಂತಾ ಯಿತು . . . . . .

ಒಬ್ಬ ಸದಸ್ಯರು.—ನೀವು ಅವರಿಗೆ ತಿಂಡಿ ಏನಾದರೂ ಕೊಟ್ಟಿರಾ !

ಶ್ರೀ ಜೆ. ಬಿ. ಮಲ್ಲಾರಾಧ್ಯ (ನಂಜನಗೂಡು).—ನಾನು ಕಾನು ಕೊಟ್ಟೆ.

ಶ್ರೀ ವೈ. ವೀರಪ್ಪ.—ನಾನು ಇದನ್ನೆಲ್ಲ ಏಕೆ ಹೇಳು ತ್ತಿದ್ದೇನೆಂದರೆ ನಮ್ಮಲ್ಲಿ ಭಿಕ್ಷುಕರ ಸಮಸ್ಯೆ ಬಹಳ ಕಠಿಣವಾಗಿದೆ. ಇದನ್ನು ನಾವು ಬಗೆಹರಿಸಬೇಕಾಗಿದೆ. ಶ್ರೀಮಾನ್ ಭೀಮಪ್ಪನಾಯಕರು ಒಂದು ಸಂದರ್ಭ ದಲ್ಲಿ ನಮ್ಮಲ್ಲಿ ಬೇಕಾದಷ್ಟು ಬಂಜರು ಭೂಮಿ ಇದೆ, ವ್ಯವಸಾಯಕ್ಕೆ ಯೋಗ್ಯವಾದ ಜಮೀನೂ ಇದೆ ಎಂದು ಹೇಳಿದರು. ನಮ್ಮಲ್ಲಿ ಅನೇಕರು ಭಿಕಾರಿಗಳಿದ್ದಾರೆ. ಬೆಂಗಳೂರು ನಗರವೆಲ್ಲಿ ಮಾತ್ರ ಕೆಲವು ಸಾವಿರ ಬೀದಿಗಳ ಲ್ಲಿರತಕ್ಕ ಭಿಕಾರಿಗಳನ್ನು ಹಿಡಿದುಕೊಂಡು ಹೋಗಿ ಮಾಗಡಿ ರಸ್ತೆಯಲ್ಲಿರುವ ಕಾಲೊನಿಯಲ್ಲಿ ಅವರನ್ನು ಇಡುವುದರಿಂದ ಏನೂ ಪ್ರಯೋಜನವಿಲ್ಲ. ಇವರನ್ನೆಲ್ಲ ಒಟ್ಟುಗೂಡಿಸಿ ಒಂದು beggar camp ಮಾಡಬೇಕು. ಅಲ್ಲಿ ಬಲಷ್ಠರಾದವರಿಗೆ ಕೆಲಸಮಾಡುವವರಿಗೆ ಎರಡು ಊಟ ಕೊಟ್ಟು ಕೆಲಸವನ್ನು ಮಾಡಿಸಬೇಕು. ಇದನ್ನು ಕಾರ್ಯರೂಪಕ್ಕೆ ತೆಗೆದುಕೊಂಡು ಬನ್ನಿ. ನಾನು ನಿಮಗೆ ಬೇಕಾದ ಸಹಕಾರವನ್ನು ಕೊಡುತ್ತೇನೆ. ಎಲ್ಲೆಲ್ಲ ಭೂಮಿ ಇದೆಯೋ ಅಲ್ಲಿಗೆ ಇವರನ್ನು ತೆಗೆದು ಕೊಂಡು ಹೋಗಿ ಕಡ್ಡಾಯವಾಗಿ ಕೆಲಸಮಾಡಿಸಿ. ಇವರ ಮಕ್ಕಳು ಮುಂದೆ ಭಿಕಾರಿಗಳಾಗದಂತೆ ವ್ಯವಸ್ಥೆ ಮಾಡಿ. ಈ ಮಕ್ಕಳು ಮುಂದೆ ಒಳ್ಳೆಯ ಜನಾಂಗವಾಗಿ ಬಾಳುವಂತೆ, ಅವರು ಮತ್ತೆ ಭಿಕಾರಿ ಗಳಾಗದಂತೆ ಸರಿಯಾದ ರೀತಿಯಲ್ಲಿ ಮಾಹಿತಿಯನ್ನು ಕೊಡಬೇಕು. ಪರ್ಣಶಾಲೆ, ಅಥವ ಕುಟೀರಗಳನ್ನು ಪಕ್ಕದಲ್ಲಿ ಸ್ಥಾಪಿಸಿ ಈ ಮಕ್ಕಳಿಗೆ ವಿದ್ಯಾಭ್ಯಾಸ ಮಾಡಿಸಿ ಅವರ ಮನೋಭಾವವನ್ನು ಬದಲಾಯಿಸ ಬೇಕು. ಇದು ಒಂದು ಔಷಧಿ ಇದ್ದಹಾಗೆ. ಹೀಗೆ ಮಾಡಿದರೆ ಮಾತ್ರ ಅವರು ಮುಂದೆ ಸನ್ಮಾರ್ಗಿಗಳಾ ಗುತ್ತಾರೆ. ಇಲ್ಲದೆ ಹೋದರೆ ನಾನೂ ಭಿಕ್ಷುಕ, ನನ್ನ ಮಕ್ಕಳೂ ಭಿಕ್ಷುಕರು, ನನ್ನ ಮೊಮ್ಮಕ್ಕಳೂ ಭಿಕ್ಷುಕರು ಎನ್ನುವಂತೆ ಆಗುತ್ತಾರೆ. ಆದುದರಿಂದ ಈ ಸಮಸ್ಯೆ ಯನ್ನು ಮೂಲಭೂತವಾಗಿ ಪರಿಹರಿಸಲು ಅವರ ತಾಯಿಬೇರನ್ನು ತೆಗೆಯಬೇಕಾಗಿದೆ. ಅದಕ್ಕೋಸ್ಕರವೇ ಎಲ್ಲೆಲ್ಲಿ ಹೆಚ್ಚು ಜಮೀನಿದೆಯೋ ಅಂಥಕಡೆ ಭಿಕ್ಷುಕರ ಕಾಲೊನಿಗಳನ್ನು ಸ್ಥಾಪಿಸಿ, ವ್ಯವಸಾಯಕ್ಕೆ ಬೇಕಾದ ಸಲಕರಣೆಗಳನ್ನು ಕೊಟ್ಟು, ಅವರೇ ಕಷ್ಟ ಪಟ್ಟು ದೇಹಶ್ರಮಪಟ್ಟು, ಕೆಲಸ ಮಾಡುವಂತೆ ಮಾಡಿ ದರೆ ಮುಂದೆ ಅವರ ಮಕ್ಕಳಿಗೆ ಸರಿಯಾಗಿ ವಿದ್ಯೆಯನ್ನು ಹೇಳಿಕೊಟ್ಟರೆ ಅವರು ಮುಂದೆ ಒಳ್ಳೆಯ ಜನಾಂಗ ವಾಗಿ ಬಾಳುವುದಕ್ಕೆ ಅನುಕೂಲವಾಗುತ್ತದೆ. ಅದನ್ನು ಮಾಡಿ ಎಂದು ಹೇಳುತ್ತೇನೆ.

6 P.M.

ಉದಾಹರಣೆಗೆ ಬೇಕಾದರೆ ನಮ್ಮ ತಾಲ್ಲೂಕನ್ನೇ ತೆಗೆದುಕೊಳ್ಳೋಣ. ಕಡ್ಡಾಯವಾಗಿ ಭಿಕ್ಷುಕರಿಗೆ ಎರಡು ಊಟ ಕೊಡಿ. ಕೆಲಸ ತೆಗೆದುಕೊಳ್ಳಿ. ಈ ಸ್ಕೀಮು ಜಯಪ್ರದವಾಗದೆ ಇದ್ದರೆ ನಿಜವಾಗಿ ನೀವು ಹೇಳಿದಂತೆ ಕೇಳುವುದಕ್ಕೆ ತಯಾರಿದ್ದೇನೆ. We will start with a meagre attempt.

ಮೂರನೆಯ ಸಲಹೆ ಏನೆಂದರೆ, ಈ ಭಿಕ್ಷುಕರ ಸಮಸ್ಯೆಯನ್ನು ನಿವಾರಣೆ ಮಾಡದೆ ಇದ್ದರೆ, ಭಿಕ್ಷುಕರು ಜನತೆಯ ಮೇಲೆ ಪ್ಯಾರಸೈಟ್ಸ್ ಆಗಿರು ತ್ತಾರೆ. ಸಮಾಜಕ್ಕೆ ಅಡ್ಡಿ ಆತಂಕ ತರುತ್ತಾರೆ.

ಸ್ಕಾಲರ್‌ಷಿಪ್ಪುಗಳನ್ನು ಕೊಡುತ್ತಾ ಇದ್ದೀರಿ. ಅವುಗಳನ್ನು ಅರ್ಹರಾದ ವಿದ್ಯಾರ್ಥಿಗಳಿಗೆ ಕೊಡುತ್ತಿಲ್ಲ ನಾನು ಅಪ್ಲಿಕೇಷನ್ ಹಾಕಿಕೊಂಡರೆ, ನನಗೂ ಕೊಡುತ್ತೀರಿ, ಶ್ರೀ ಎ. ಭೀಮಪ್ಪನಾಯಕರೂ ಹಾಕು ತ್ತಾರೆ, ಅವರಿಗೂ ಕೊಡುತ್ತೀರಿ. ಕ್ಯಾಂಡಿಡೇಟುಗಳ ಬ್ಯಾಕ್‌ವರ್ಡ್‌ನೆಸ್ ತೆಗೆದುಕೊಂಡು ನೋಡಿ ಕೊಡ ಬೇಕು. ಅನ್ಪಾಶ್ಯತೆ ಮೂಲಬದ್ಧವಾಗಿ ನಿರ್ಮೂಲ ವಾಗಬೇಕು. ಆರ್ಥಿಕ ವಿಷಯದಲ್ಲಿ ಅನ್ಪಾಶ್ಯರಲ್ಲಿರುವ ವ್ಯತ್ಯಾಸ, ವಿದ್ಯಾಹೀನತೆ ಹೋಗಿ; ಅವರೂ

ನಾಗರಿಕರಾಗಿ ಬಾಳಲು ಎಂಬ ಭಾವನೆ ಎಲ್ಲರಲ್ಲಿಯೂ ಬೆಳೆಯಬೇಕು.

ಈ ಠರಾವಿನ ಮೇಲೆ ನಾನಾರೀತಿಯಾದ ಸಲಹೆಗಳನ್ನು ನನ್ನ ಮಿತ್ರರು ಮಾಡಿದ್ದಾರೆ. ಈ ಠರಾವಿನ ವಿಚಾರದಲ್ಲಿ ಯಾವ ಒಂದು ತಕರಾರೂ ಇಲ್ಲ, ಅದನ್ನು ಕಾರ್ಯರೂಪಕ್ಕೆ ತರಬೇಕಾಗಿದೆ. ಬರೀ ಉಜ್ವಲ ಭಾಷಣ ಮಾಡಿ ಕಾರ್ಯರೂಪಕ್ಕೆ ತರುವುದಕ್ಕಾಗುವುದಿಲ್ಲ. ನಿಜವಾದ ಪ್ರಾಮಾಣಿಕತೆಯಿಂದ, ನಿಷ್ಪಕ್ಷಪಾತವಾಗಿ ಒಂದು ಕೆಲಸ ಪ್ರಾರಂಭ ಮಾಡಿದರೆ, ಖಂಡಿತವಾಗಿಯೂ ನಮ್ಮ ಗುರಿಯನ್ನು ನಿಲುಕಬಹುದು. ಹಿಂದುಳಿದ ಜನಾಂಗಗಳು ಸಾಲಸೋಲದಲ್ಲಿ ಮುಳುಗಿ ಅಧೋಗತಿಗೆ ಇಳಿದಿದ್ದಾರೆ. ಜೀತಪದ್ಧತಿಯಂತೆ ಅವರ ರಕ್ತವನ್ನು ಅನೇಕ ಶತಮಾನಗಳಿಂದ ಹೀರಿದ್ದಾರೆ ಎಂದು ಶ್ರೀ ರಾಚಯ್ಯನವರು ಹೇಳಿದ್ದಾರೆ. ನೂರಾರು ವರ್ಷಗಳಿಂದ ಅವರು ಬೆವರು ಸುರಿಸಿ, ಬಡತನ ಅವಿದ್ಯೆಯಲ್ಲಿ ಮುಳುಗಿದ್ದಾರೆ. ಅವರ ಉದ್ಧಾರಕ್ಕೆ ನಮ್ಮ ಭಂಡಾರವನ್ನು, ಕಬ್ಬಿಣದ ಪೆಟ್ಟಿಗೆಯನ್ನು ಬರಿದು ಮಾಡೋಣ. ಹದಿನೈದು ಇಪ್ಪತ್ತು ವರ್ಷಗಳವರೆಗೂ ನಾವು ಅವರ ಅಭಿವೃದ್ಧಿಗೆ ಹಣ ಕೊಡುವುದಕ್ಕೆ ತಯಾರಿದ್ದೇವೆ. ನಾವು ಈ ಪ್ರಪಂಚಕ್ಕೆ ಬಂದಾಗ ನಮ್ಮ ಜೊತೆಯಲ್ಲಿ ಹಣವನ್ನು ತರಲಿಲ್ಲ; ಹೋಗುವಾಗ ಹಣವನ್ನು ತೆಗೆದುಕೊಂಡು ಹೋಗುವುದಿಲ್ಲ. ಆ ವೈರಾಗ್ಯ ತತ್ವ ಇದ್ದೇ ಇದೆ. ಅದನ್ನು ಅಂಗೀಕರಿಸಬೇಕು. ನಾನು ಮಂತ್ರಿಯಾಗಬಹುದು; ನೀವು ಮಂತ್ರಿಯಾಗಬಹುದು. ಮಂತ್ರಿಗಳಾಗುವುದರಿಂದ ಈ ಸಮಸ್ಯೆ ಪರಿಹಾರವಾಗುವುದಿಲ್ಲ. ಮಾನ್ಯ ಸದಸ್ಯರ, ಪರಿಣತರ, ಸಮಾಜಸುಧಾರಕರ ಸಮಗ್ರ ಸಹಕಾರಗಳನ್ನು ಪಡೆದುಕೊಂಡು, ಸಮಾಜದಲ್ಲಿರುವ ದೋಷವನ್ನು ಹೋಗಲಾಡಿಸುವುದಕ್ಕೆ ಕೆಲಸ ಮಾಡಿದರೆ, ಖಂಡಿತವಾಗಿಯೂ ಈ ಸಮಸ್ಯೆ ಬಗೆಹರಿಯುತ್ತದೆ

ಈ ಸಮಸ್ಯೆಯನ್ನು ನಿವಾರಣೆ ಮಾಡುವುದಕ್ಕೆ ಪ್ರಾರಂಭ ಮಾಡೋಣ. ಇಷ್ಟುಕಾಲ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ, ಅಧ್ಯಕ್ಷರಿಗೆ ಹೃತ್ಪೂರ್ವಕವಾದ ವಂದನೆಗಳನ್ನು ಅರ್ಪಿಸಿ, ಈ ಠರಾವಿಗೆ ನನ್ನ ಬೆಂಬಲವನ್ನು ಕೊಟ್ಟು, ನನ್ನ ಭಾಷಣವನ್ನು ಮುಗಿಸುತ್ತೇನೆ.

Mr. DEPUTY SPEAKER.—The House will now rise and meet tomorrow at 1.00 P.M.

The House adjourned at Ten Minutes past Six of the Clock to meet again at One of the Clock on Thursday, the 1st May 1958.

WL 1022—GPB—900—27-10-1958